
ಪಂಚಮ



ಡಾ॥ ಬಿ.ಆರ್. ಅಂಬೇಡ್ಕರ್ ಜನ್ಮದಿನ ವಿಶೇಷಾಂಕ

ರೂ.2/-

ಪಂಚಮ

ಸಂಪುಟ-12
ಸಂಪುಟ- 7-8
ಏಪ್ರಿಲ್-1988



ಎಪ್ರಿಲ್ 14
ದಲಿತರ
ಜಾಗೃತ
ದಿನ.

ತಲಾತಲಾಂತರದಿಂದ ದಾಸ್ಯದ ಕತ್ತಲಲ್ಲಿ ನೆಲ ಕಚ್ಚಿ ಹೋಗಿದ್ದ ದಲಿತರ ಬಾಳಿಗೊಂದು ಆಶಾಕಿರಣ ಮೂಡಿ ಬಂದ ದಿನ ಎಪ್ರಿಲ್-14. ಅಂದು ಅಸ್ಪೃಶ್ಯರ ಸಂಘಟಿತ ಹೋರಾಟದ ರೂವಾರಿ ಮಹಾ ಮಾನವವಾದಿ ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಜನ್ಮದಿನ. ಅವರ ನಿರಂತರ ಹೋರಾಟದ ಫಲವೇ ಇಂದು ದಲಿತ ಸಮುದಾಯದಲ್ಲಿ ಸ್ವಾಭಿಮಾನದ ಕಿಡಿ ಹೊತ್ತಿ ಉರಿಯುತ್ತಿರುವುದಕ್ಕೆ ಕಾರಣ. ಅವರ ಹೋರಾಟದ ಸ್ಫೂರ್ತಿಯೇ ಇಂದು ದೇಶದ ಮೂಲೆ ಮೂಲೆಗಳಲ್ಲಿ ಎಚ್ಚೆತ್ತ ದಲಿತರು ನಾನಾ ದಮನ, ದಬ್ಬಾಳಿಕೆಗಳ ವಿರುದ್ಧ ಸಮರ ಘೋಷಿಸಿರುವುದಕ್ಕೆ ನಾಂದಿ.

ಕರ್ನಾಟಕದಾದ್ಯಂತ ಒಂದಲ್ಲ ಒಂದು ಭಾಗದಲ್ಲಿ ಸದಾ ಜೀವಂತವಾಗಿದ್ದು, ಇಂಥ ಸಮರದ ಮುಂಚೂಣಿಯಲ್ಲಿರುವ "ದಲಿತ ಸಂಘರ್ಷ ಸಮಿತಿ" ಈ ಬಾರಿಯ ಅಂಬೇಡ್ಕರ್‌ರ ಜನ್ಮದಿನವನ್ನು ವಿನೂತನ ಮಾದರಿಯಲ್ಲಿ "ದಲಿತರ ಜಾಗೃತಿ ದಿನ"ವನ್ನಾಗಿ ಆಚರಿಸುವ ತೀರ್ಮಾನ ಕೈಗೊಂಡಿದೆ. ಏಪ್ರಿಲ್ 14 ರಂದು ಆರಂಭವಾಗುವ ಈ "ಜಾಗೃತಿ ಆಂದೋಲನ"ಏಪ್ರಿಲ್ 30ರವರೆಗೂ ನಡೆಯಲಿದೆ.ಏಪ್ರಿಲ್ 17ರಂದು ಮಂಗಳೂರಿನಲ್ಲಿ ಸುಮಾರು 20,000 ದಲಿತರ ಬೃಹತ್ ಜಾಗೃತಿ ಸಮಾವೇಶ ಜರುಗಲಿದೆ. ಈ ಅವಧಿಯಲ್ಲಿ ಬಾಬಾ ಸಾಹೇಬರ ಬದುಕು, ಚಿಂತನೆ, ಹೋರಾಟಗಳ ದೀವಿಗೆಯನ್ನು ದಲಿತರ ಮನೆಮನೆಗಳಿಗೆ ಮುಟ್ಟಿಸುವ ಪಣ ತೊಟ್ಟಿದೆ. ನಾಡಿನಾದ್ಯಂತ ಇರುವ ದ. ಸಂ. ಸ. ದ ಪ್ರತಿ ಜಿಲ್ಲಾ, ತಾಲ್ಲೂಕು, ಮಂಡಲ್, ಗ್ರಾಮ ಸಮಿತಿಯೂ ಸಭೆ, ಸಮಾರಂಭ, ವಿಚಾರ ಸಂಕಿರಣ ಇತ್ಯಾದಿ ಕಾರ್ಯಕ್ರಮಗಳನ್ನು ಜರುಗಿಸಿ ಈ ಜಾಗೃತಿ ಆಂದೋಲನವನ್ನು ಯಶಸ್ವಿಗೊಳಿಸಲಿದೆ. ಹೀಗೆ ಮಾಡುವುದೊಂದೇ ಅಂಬೇಡ್ಕರರಿಗೆ ತೋರುವ ನಿಜವಾದ ಗೌರವ, ಹಾಗೂ ಆತ್ಮಸಾಕ್ಷಿ ಸ್ಮರಣೆ ಎನ್ನುವುದು ದ. ಸಂ. ಸ. ನಿಲುವು.

ಆಂದೋಲನದ ಉದ್ದೇಶ

ದಲಿತ ಸಮುದಾಯ ಇತಿಹಾಸದಲ್ಲಿ ಎಂದೂ ಅನುಭವಿಸದಷ್ಟು ಸಂಕಟ, ಅವಮಾನ, ಯಾತನೆಗಳಿಗೆ ಇಂದು ಈಡಾಗಿದೆ. ಊರೂರುಗಳಲ್ಲಿ ಮೂಡುತ್ತಿರುವ ಎಚ್ಚರವನ್ನು ಮೊಳಕೆಯಲ್ಲೇ ಮೆಟ್ಟಿ ಹಾಕಲು ಜಾತಿವಾದಿ ಭೂಮಾಲಿಕ ಪಟ್ಟಭದ್ರ ಹಿತಾಸಕ್ತಿಗಳು ದಬ್ಬಾಳಿಕೆ, ದೌರ್ಜನ್ಯಗಳನ್ನು ಹೆಚ್ಚು ಮಾಡಿವೆ. ಬೆಂಡಿಗೇರಿಯಲ್ಲಿ ಮಲ ತಿನ್ನಿಸುವುದರ ಮೂಲಕ ಕ್ರೂರ ಹಿಂದೂ ಮನಸ್ಸು ನಮ್ಮ ಗಾಯಗಳಿಗೆ ಉಪ್ಪು ಸವರಿದೆ. ನೇಮಕಾತಿ, ಬಡ್ತಿಗಳಲ್ಲಿ ಮೀಸಲಾತಿ ನೀತಿ ಉಲ್ಲಂಘಿಸಿ ವಂಚಿಸಿ ನಮ್ಮ ಕಲಿತ ಮಕ್ಕಳ ಬಾಳಿಗೆ ಆಳುವ ಜನತಾಪಕ್ಷ ಮಣ್ಣು ಹಾಕಿದೆ. ನ್ಯಾಯಕ್ಕಾಗಿ ಹೋರಾಡಿದ ಲಕ್ಷ್ಮಣನಾಯ್ಕ, ಟೀ ಕೇಳಿದ್ದಕ್ಕೆ ಖಾನಾಪುರದ ಸ್ವಾಭಿಮಾನಿ ಬಜಾರಪ್ಪ, ಊರು ಬಾಗಿಲಿಗೆ ಹೋಗಲು ಯತ್ನಿಸಿದ ಚಂದ್ರಬಂಡ ತಾಯಪ್ಪರ ಪ್ರಾಣಗಳನ್ನು ಬಲಿತೆಗೆದುಕೊಂಡಿದೆ.

ದಲಿತರ ಮಾನಪ್ರಾಣ ರಕ್ಷಿಸದ ರಾಕ್ಷಸನಾಗಿದೆ. ಜನತಾ ಪಕ್ಷದ ಸದಸ್ಯರೇ ಈ ಕೊಲೆ, ಹಲ್ಲೆಗಳಲ್ಲಿ ನೇರಪಾಲುಗೊಳ್ಳುತ್ತಿದ್ದಾರೆ. ವಿಷದ ಹೆಂಡ ಕುಡಿಸಿ ಬಡವರು, ದಲಿತರನ್ನು ನಿರ್ನಾಮ ಮಾಡಲಾಗುತ್ತಿದೆ. ಅವರ ಕೂಲಿಯ ಬಿಡಿಗಾಸನ್ನೂ ಬಿಡದೆ ದರೋಡೆ ಮಾಡುತ್ತಿದೆ. ಹಿಂದೆಂದಿಗಿಂತ ಹೆಚ್ಚು ಇಂದು ದಲಿತ ಅಧಿಕಾರಿ, ನೌಕರರು ಕಿರುಕುಳಕ್ಕೆ ಒಳಗಾಗಿದ್ದಾರೆ. ದಲಿತರಿಗೆ ದಕ್ಕಬೇಕಾಗಿದ್ದ ಅಂಗೈ ಅಗಲದ ನೆಲವನ್ನೂ ಶ್ರೀಮಂತ ಕಾಫಿ ಪ್ಲಾಂಟರುಗಳ ಮಡಲಿಗೆ ಹಾಕಲು ಮುಂದಾಗಿದೆ.

ಇಂಥ ಸಂಕಟದ ಹೊತ್ತಲ್ಲಿ ಪ್ರತಿ ದಲಿತನನ್ನೂ ಆಲೋಚನೆಗೆ ಹಚ್ಚಿ ಹೋರಾಟಕ್ಕೆ ಸಿದ್ಧಗೊಳಿಸುವುದೊಂದೇ ಈಗ ಉಳಿದಿರುವ ಏಕೈಕ ದಾರಿ. ಈ ಜಾಗೃತಿ ಆಂದೋಲನದ ಈ ಅವಧಿಯಲ್ಲಿ ಈ ಕೆಳಗಿನ ನಿರ್ಣಯ-ಗಳನ್ನು ಮಂಡಿಸಿ ದ. ಸಂ. ಸ. ದ ಪ್ರತಿ ಶಾಖೆಯೂ ಸರ್ಕಾರವನ್ನು ಒತ್ತಾಯಿಸಲಿದೆ.

1) ದಲಿತರ ಮೇಲಿನ ದೌರ್ಜನ್ಯ, ಕೊಲೆ, ಬಹಿಷ್ಕಾರ, ಅತ್ಯಾಚಾರಗಳನ್ನು ಸಂಪೂರ್ಣವಾಗಿ ತಡೆಗಟ್ಟುವಂತಹ ರಕ್ಷಣೆ ಮತ್ತು ನ್ಯಾಯಾಂಗ ವ್ಯವಸ್ಥೆ ಸ್ಥಾಪಿಸಬೇಕು.

2) ರೋಸ್ಟರ್ ಪದ್ಧತಿಗೆ ಅನುಗುಣವಾಗಿ ನೇಮಕಾತಿ ಮತ್ತು ಬಡ್ತಿಗಳನ್ನು ತುಂಬಬೇಕು. ಮೀಸಲಾತಿ ಉಲ್ಲಂಘಿಸಿದ ಇಲಾಖಾ ಮುಖ್ಯಸ್ಥರನ್ನು ಶಿಕ್ಷಿಸುವಂತೆ ಸಮಗ್ರ ಶಾಸನವೊಂದನ್ನು ರೂಪಿಸಬೇಕು.

3) ಹೆಂಡವನ್ನು ನಿಲ್ಲಿಸಿ ಹೋಬಳಿಗೊಂದು ವಸತಿ ಶಾಲೆ ತೆರೆಯಬೇಕು.

4) ಪ್ಲಾಂಟೇಶನ್ ಭೂಮಿಗೆ ಭೂಮಿತಿ ಶಾಸನ ತರಬೇಕು, ಪ್ಲಾಂಟೇಶನ್ ಒತ್ತುವರಿ ಖುಲ್ಲಾ ಮಾಡಿಸಿ ಭೂಹೀನರಿಗೆ ಹಂಚಬೇಕು. ಭೂಹೀನರು ಸಣ್ಣ ಹಿಡುವಳಿದಾರರು, ಬಗರ್ ಹುಕುಂ ಸಾಗುವಳಿ ಮಾಡುತ್ತಿರುವುದನ್ನು ಸಕ್ರಮಗೊಳಿಸಬೇಕು.


5) ಬೆಲೆಯೇರಿಕೆಗೆ ತಕ್ಕಂತೆ ದಲಿತ ವಿದ್ಯಾರ್ಥಿಗಳ ಸಮಸ್ಯೆಗಳ ಸಂಪೂರ್ಣ ನಿವಾರಣೆಗಾಗಿ ಪ್ರತ್ಯೇಕ ನಿರ್ದೇಶನಾಲಯ ಸ್ಥಾಪಿಸಬೇಕು.

ಈ ಮೇಲ್ಕಂಡ ಬೇಡಿಕೆಗಳನ್ನು 88 ಆಗಸ್ಟ್ 1 ರೊಳಗಾಗಿ ಈಡೇರಿಸಬೇಕೆಂದು ದ. ಸಂ. ಸ. ಈ ಮೂಲಕ ಒತ್ತಾಯಿಸುತ್ತದೆ. ಈಡೇರಿಸದಿದ್ದರೆ ರಾಜ್ಯದಾದ್ಯಂತ ವ್ಯಾಪಕ ಹೋರಾಟ ನಡೆಸುವ ಮೊದಲ ಹೆಜ್ಜೆಯೇ ಈ ಜಾಗೃತಿ ಆಂದೋಲನ.

● ಬಿ. ವಿ. ಚಂದ್ರ ಪ್ರಸಾದ್ ತ್ಯಾಗಿ
ರಾಜ್ಯ ಸಂಚಾಲಕ.

(ಮಾರ್ಚಿ 26-27ರಂದು ಬೆಂಗಳೂರಿನಲ್ಲಿ ನಡೆದ ರಾಜ್ಯ ಸಮಿತಿ ಸಭೆ ತೀರ್ಮಾನಿಸಿದ ರಾಜ್ಯ ವ್ಯಾಪಿ ಕಾರ್ಯಕ್ರಮವಿದು)

ಕೊಲೆಯಾದ ಒಂದು ನಗು



ಅಂತಹ ಸಂಕಷ್ಟಗಳ ಸಮಯದಲ್ಲೂ ಜೀವಂತಿಕೆಯ ಚಿಲುಮೆಯಾಗಿದ್ದ ಚಿಕ್ಕಣ್ಣ ಇಂದು ದೈಹಿಕವಾಗಿ ನಿರ್ಜೀವವಾಗಿರುವುದು ಅವರ ಗೆಳೆಯರಲ್ಲಿ ದಿಗ್ಭ್ರಮೆ ಹುಟ್ಟಿಸಿದೆ. ಸದಾಕಾಲವು ಇತರರ ನೋವಿಗಾಗಿ ತುಡಿಯುತ್ತಿದ್ದ ಹೆಗ್ಗಡದೇವನಕೋಟೆ ತಾಲ್ಲೂಕಿನ ದಲಿತ ಸಂಘರ್ಷ ಸಮಿತಿಯ ಹೊಸ ಚೇತನವಾಗಿದ್ದ 30 ವರ್ಷದ ಯುವಕ ಎಂ. ಚಿಕ್ಕಣ್ಣ ಅತ್ಯಂತ ಸಂವೇಧನಾಶೀಲ ವ್ಯಕ್ತಿ.

ಸಾಮಾಜಿಕವಾಗಿ ತುಳಿತಕ್ಕೊಳಪಟ್ಟ ದಲಿತರ ಹೋರಾಟ ಒಂದು ಚಾರಿತ್ರಿಕ ಅನಿವಾರ್ಯ ಎಂಬುದನ್ನು ತಿಳಿದಿದ್ದರು. ಜಾತಿ ಹೋರಾಟ ಅಷ್ಟೇ ಅಲ್ಲ. ಹಲವಾರು ಸ್ಥಳಗಳಲ್ಲಿ ಚಾಚಿಕೊಂಡಿರುವ ಸೂಕ್ಷ್ಮ ಸಂಕೀರ್ಣತೆಗಳು, ಶ್ರೀಮಂತ – ಬಡವರ ನಡುವಿನ ಅಂತರಗಳು, ಶೋಷಿತ ಜನಾಂಗದಲ್ಲೇ ಇರುವ ವೈಮನಸ್ಯಗಳು. ಇವುಗಳನ್ನೆಲ್ಲ ಆಳವಾದ ವಿಶ್ಲೇಷಣೆಗೊಳಪಡಿಸಿ, ಸಾಮಾಜಿಕ ಬದಲಾವಣೆಗೆ ವಿಭಿನ್ನ ರೀತಿಯ ಶ್ರಮಗಳನ್ನು ಹಾಕಬೇಕೆಂದು ಮನಗಂಡಿದ್ದವರು.

ಈ ಕಾರಣಕ್ಕಾಗಿಯೇ ಅವರು ಕೇವಲ ಆರ್ಥಿಕ ಅನುಕೂಲತೆಗಳನ್ನೂ, ಸಾಮಾಜಿಕ ಸಮಾನತೆಗಳನ್ನು ಪಡೆದುಕೊಳ್ಳಲು ಮಾತ್ರವೇ ಹೋರಾಟವಲ್ಲ ಎಲ್ಲ ಜಾತಿಗಳಲ್ಲೂ ತುಂಬಿರುವ ಕೊಳಕು ಮನಸ್ಸುಗಳನ್ನು ನಿರ್ಮಲಗೊಳಿಸಬೇಕು, ಅವರ ಸಂವೇದನೆಗಳನ್ನು ಅರ್ಥ ಮಾಡಿಕೊಳ್ಳಬೇಕೆನ್ನುವ ಕಾಳಜಿ ಹೊಂದಿ, ಸಾಂಸ್ಕೃತಿಕ ರಂಗದಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

ಬಂಡೆಯಷ್ಟು ಭಾರದ ನೋವು ಹೊತ್ತ ಹೃದಯಗಳಿಗೆ ಮನಸ್ಸು ಹಗುರಗೊಳಿಸಲು ಕಚಗುಳಿ ಇಡುವಂತೆ, ಪಕ್ಕೆ ಹಿಡಿದು ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತಿದ್ದ ಚಿಕ್ಕಣ್ಣನವರ ಪಕ್ಕೆಗೆ ಇರಿದ ಚೂರಿಗಳು ಈ ಸಮಾಜದ ವಿಷಜಂತುಗಳ ನಿರ್ದಯತೆಗೆ ಸಾಕ್ಷಿಯಾಗಿವೆ. ಬದುಕಿನಲ್ಲಿ ಆಸಕ್ತಿಯನ್ನೇ ಕಳೆದುಕೊಂಡು ಜಡವಾದ ಜೀವಗಳಿಗೆ ತಮ್ಮ ನವಿರು ಮಾತುಗಳಿಂದ ಜೀವ ತುಂಬಿಸುತ್ತಿದ್ದ ಚಿಕ್ಕಣ್ಣ ಜಡವಾಗಿ ಇಂದು ಭೂಗರ್ಭದಲ್ಲಿ ಹುದುಗಿ ಹೋಗಿದ್ದಾರೆಂದರೆ ನಂಬುವುದೇ ಕಷ್ಟವಾಗುತ್ತದೆ.

1983ರಲ್ಲಿ ಮೈಸೂರಿನ ಮಾನಸಗಂಗೋತ್ರಿಯ ಇತಿಹಾಸದ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ಸರ್ಕಾರಿ ಕೆಲಸಕ್ಕೆ ಹೋಗದೆ, ಗ್ರಾಮೀಣ ಪ್ರದೇಶದಲ್ಲಿನ ಅಸ್ಪೃಶ್ಯತೆ, ವೈಮನಸ್ಯಗಳು, ಶೋಷಣೆ ಮುಂತಾದ ಅನಿಷ್ಟಗಳನ್ನು ಕೊನೆಗಾಣಿಸುವ ಆಸೆಯಿಂದ ತಮ್ಮ ಹುಟ್ಟೂರಾದ ನೇರಳೆಯಲ್ಲಿಯೇ ನ್ಯಾಯಬೆಲೆ ಅಂಗಡಿಯೊಂದನ್ನು ಪ್ರಾರಂಭಿಸಿ, ಹಳ್ಳಿಯಲ್ಲೇ ಜೀವನ ಸಾಗಿಸ ತೊಡಗಿದರು. ಚಿಕ್ಕಣ್ಣನವರ ತಂದೆ ಊರಿನ ಅನರಕ್ಷತೆಯ ಪರಂಪರೆಯನ್ನು ಸರಿಸಿ, ಪ್ರಪ್ರಥಮವಾಗಿ ಅಕ್ಷರ ಕಲಿತು ಕೆಲವು ವರ್ಷ ಹೆಚ್. ಡಿ. ಕೋಟೆ ತಾಲ್ಲೂಕಿನ 'ಹೂವಿನ ಕೊಳ' ದಲ್ಲಿ ಶಿಕ್ಷಕರಾಗಿದ್ದರು. ಅಂತಹವರ ಮಗನಾಗಿ ಹುಟ್ಟಿದ ಚಿಕ್ಕಣ್ಣ. ಸರಳ, ಸಜ್ಜನಿಕೆಯ ಗುಣಗಳನ್ನು ಮೈಗೂಡಿಸಿಕೊಂಡಿದ್ದವರು.

ಹೆಗ್ಗಡೆದೇವನ ಕೋಟೆಯಿಂದ 12 ಕಿ. ಮೀ. ದೂರದಲ್ಲಿರುವ 'ನೇರಳೆ' ಭಾರತದ ಎಲ್ಲ ಹಳ್ಳಿಗಳಂತೆ ಹಲವಾರು ಗೊಂದಲಗಳನ್ನು ಒಡಲಲ್ಲಿ ಹುದುಗಿಸಿಕೊಂಡಿರುವ ಒಂದು ಹಳ್ಳಿ. 21-3-1988ರ ಸೋಮವಾರ ರಾತ್ರಿ ಚಿಕ್ಕಣ್ಣ ಮನೆ ತಲುಪಿದಾಗ ಅದೇ ಜಾತಿಯ ಅಂಚೆ ಪೇದೆ ಬಿ. ಲಿಂಗಯ್ಯ ಮತ್ತವನ ಗೆಳೆಯರು ಚಿಕ್ಕಣ್ಣನ ಮನೆಯವರ ಮೇಲೆ ಜಗಳಕ್ಕೆರಗಿದರು. ವಿದ್ಯುತ್ ಸರಬರಾಜು ಕಡಿತದಿಂದ ಗವ್ ಅನ್ನುವ ಕತ್ತಲೆ, ಮುಂದೆ ಬಂದೊದಗುವ ಕರಾಳರಾತ್ರಿಯ ಸಂಕೇತವಾಗಿತ್ತು. ಹೀಗೆ ಜಗಳಕ್ಕೆರಗಿದವರನ್ನು ಕಾರಣ ವಿಚಾರಿಸಲು ಬಿ. ಲಿಂಗಯ್ಯನ ಮನೆ ಬಳಿಗೆ ಹೋದಾಗ ಕತ್ತಲಲ್ಲಿ ಅವಿತಿದ್ದ ಪೋಸ್ಟ್‌ಮ್ಯಾನ್ ಕಡೆಯವರು ಚಿಕ್ಕಣ್ಣ ಮತ್ತು ಜೊತೆಗಿದ್ದವರ ಮೇಲೆ ಚಾಕು, ಚೈನುಗಳಿಂದ ದಾಳಿ ನಡೆಸಿದರು. ತಲೆಯನ್ನು ಮಚ್ಚಿನಿಂದ ಹೊಡೆದು, ಪುಪ್ಪಸಕ್ಕೆ ಚೂರಿಯಿಟ್ಟು ಜೀವಂತವಾಗಿ ಉಸಿರಾಡುತ್ತಿದ್ದ ಉಸಿರಿಗೆ ಸಾವಿನ ಪೆಟ್ಟು ಕೊಟ್ಟರು. ಪೋಸ್ಟ್ ಮಾರ್ಟಂ ಮಾಡಿದ ಕಬಿನಿಯ ಪ್ರಾಥಮಿಕ ಆರೋಗ್ಯ ವೈದ್ಯಾಧಿಕಾರಿಗಳು ಡಾ॥ ಡಿ. ಲಿಂಗಯ್ಯ ಹೇಳುವಂತೆ, ಹೊಟ್ಟೆಗೆ ಚುಚ್ಚಿದ ಚೂರಿ ಶ್ವಾಸಕೋಶದ ಚೀಲವನ್ನೇ ತೂತು ಮಾಡಿತ್ತು. ಇದರಿಂದ ಚಿಕ್ಕಣ್ಣ ಸ್ಥಳದಲ್ಲೇ ಕೊನೆಯುಸಿರೆಳೆದರು.

ಚಿಕ್ಕಣ್ಣನವರ ಪ್ರವೇಶ ತಲತಲಾಂತರಗಳಿಂದಲೂ ಜಾತಿಯ ನಾಯಕತ್ವ ವಹಿಸಿ, ದಬ್ಬಾಳಿಕೆ ನಡೆಸುತ್ತಿದ್ದ ಅದೇ ಊರಿನ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾಗಿದ್ದ ಮೇಷ್ಟ್ರು ಚಿಕ್ಕಣ್ಣಯ್ಯ ಮತ್ತವನ ಅಣ್ಣ ಮಾಜಿ ಪಂಚಾಯಿತಿ ಛೇರ್‌ಮನ್ ಸೋಮಣ್ಣ ಹಾಗೂ ಹೆಣ್ಣುಗಳನ್ನು ಅವಮಾನಿಸಿ, ಮಾನವಾಗಿ ಬದುಕಲು ಬಿಡದ ಪೋಸ್ಟ್ ಮ್ಯಾನ್ ಬಿ. ಲಿಂಗಯ್ಯ ಮುಂತಾದವರಿಗೆ ಹೊಟ್ಟೆಯಲ್ಲಿ ಮುಳ್ಳಾಡಿಸಿದಂತಾಯಿತು. ಯಾರದೇ ನೋವಿಗೂ ತುಡಿಯುತ್ತ, ಅವರ ಸಂಕಷ್ಟಗಳನ್ನು ಪರಿಹರಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಾ ಮುಂದುವರಿಯುತ್ತಿದ್ದ ಚಿಕ್ಕಣ್ಣ ಊರಿನವರ ಪ್ರೀತಿ ವಿಶ್ವಾಸಗಳಿಸುವುದರಲ್ಲಿ ಸಫಲರಾದರು. ಕೇವಲ 2 ವರ್ಷಗಳಲ್ಲಿಯೇ 'ನೇರಳೆ' ಹಳ್ಳಿಯ ಜನ ಜೀವನದ ಚರಿತ್ರೆಯ ಪುಟಗಳು ಬದಲಾದವು. ಮಾಜಿ ಛೇರ್ಮನ್ ಸೋಮಣ್ಣ ಮತ್ತು ಅವನ ತಮ್ಮ ಮೇಷ್ಟ್ರು ಚಿಕ್ಕಣ್ಣಯ್ಯ ಹಾಗು ಬಿ. ಲಿಂಗಯ್ಯ ಇವರ ಅಧಿಕಾರ ದರ್ಪಕ್ಕೆ, ಕುಯುಕ್ತಿಗೆ ಜನ ಸೊಪ್ಪು ಹಾಕದಾದರು, ಈ ರೀತಿ ಹಳ್ಳಿಯಲ್ಲಿ ಪ್ರಾಬಲ್ಯ ಕಳೆದುಕೊಂಡ ಈ ಕುಟುಂಬದವರು ಚಿಕ್ಕಣ್ಣನ ಮೇಲೆ ದ್ವೇಷ ಬೆಳೆಸಿಕೊಂಡರು.

ಮಳೆಗಾಲದ ಶಾಲಾ ದಿನಗಳಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡದೆ, ಹತ್ತಿರದಲ್ಲೇ ಇರುವ ತನ್ನ ಜಮೀನಿನಲ್ಲಿ ಮಕ್ಕಳಿಂದ ಕಳೆತೆಗೆಸುತ್ತಿದ್ದ ಮೇಷ್ಟ್ರು ಚಿಕ್ಕಣ್ಣಯ್ಯ ಮತ್ತು ಅನಾಚಾರಿಯಾಗಿದ್ದ ಬಿ. ಲಿಂಗಯ್ಯನ ವರ್ತನೆಗಳನ್ನು ಚಿಕ್ಕಣ್ಣ ತೀವ್ರವಾಗಿ ವಿರೋಧಿಸಿದ್ದೇ ಒಂದು ನೆಪವಾಗಿ ಚಿಕ್ಕಣ್ಣನ ಮೇಲೆ ಕತ್ತಿ ಮಸೆದರು. ಈ ಮಸೆದ ಕತ್ತಿಯ ಚೂಪಾದ ಅಲಗು 21–3–88ರ ರಾತ್ರಿ, ಹೆಣ್ಣು ಮಕ್ಕಳು ಮಾನವಾಗಿ ಬದುಕಬೇಕು ಅನ್ನುವ ಕಾಳಜಿ ಹೊಂದಿದ್ದೂ ಬಡತನದ ಕರುಳುಗಳ ಹಸಿವನ್ನು ನಿವಾರಿಸಲು ಪ್ರಯತ್ನಿಸುತ್ತಿದ್ದ ಚಿಕ್ಕಣ್ಣನವರ ಕರುಳನ್ನು ನಿರ್ದಯವಾಗಿ ಕತ್ತರಿಸಿಹಾಕಿತು. ಅಂದಿನಿಂದಲೇ ಕತ್ತಲೆ ತುಂಬಿಕೊಂಡ ನೇರಳೆ ಇನ್ನೂ ಬೆಳಕು ಕಾಣದಾಗಿದೆ.

ಹಲವಾರು ಕನಸುಗಳನ್ನು ಕಾಣುತ್ತಿದ್ದ 30 ವರ್ಷದ ಚಿಕ್ಕಣ್ಣನವರು ಒಂದೂವರೆ ವರ್ಷದ ಮಗು 'ಚಿಂತನ' ಮತ್ತು ಪತ್ನಿ ಪುಷ್ಪಾವತಿಯರನ್ನು 'ದಡ' ಸೇರುವ ಮೊದಲೇ ಬಿಟ್ಟು ಹೋಗಿದ್ದಾರೆ. ಮಗು 'ಚಿಂತನ' 'ಅಪ್ಪ ಬಿಸ್ಕತ್ತು ತರಲು ಕೋಟೆಗೆ ಹೋಗಿದ್ದಾನೆ. ಇನ್ನೇನು ಬರುತ್ತಾನೆ' ಅನ್ನುವ ಮನಸ್ಥಿತಿಯಲ್ಲಿಯೇ ಇದ್ದಾನೆ. ಚಿಂತನನ ತಾಯಿ ಪುಷ್ಪಾವತಿ ಬಾಳ ಸಂಗಾತಿಯನ್ನು ಮರೆಯಲಾರದೇ ದುಃಖಿತಪ್ತರಾಗಿದ್ದಾರೆ. ಚಿಕ್ಕಣ್ಣನವರ ಕೊಲೆ ಅವರ ಸಾವಿರಾರು ಗೆಳೆಯರ ಮನಸ್ಸಿಗೆ ಆಘಾತ ತಂದು ವೇಧನೆಯಿಂದ ಹೊರ ಬಾರದೇ ತೊಳಲಾಡುತ್ತಿದ್ದಾರೆ.

ಕೊಲೆ ಮಾಡಿದ ಮತ್ತು ಕೊಲೆಗೆ ಶಾಮೀಲಾದ ಎಲ್ಲ ಅಪರಾಧಿಗಳನ್ನು (ದೊಡ್ಡಪ್ಪಾಜಿ ಅನ್ನುವನನ್ನು ಬಿಟ್ಟು) ಸರಗೂರು ಪೋಲೀಸ್ ಠಾಣೆಯ ಪೋಲೀಸರು ಬಂಧಿಸಿದ್ದಾರೆ. ಕಾನೂನಿಗೆ ಕಣ್ಣಿದ್ದರೆ, ಅದಕ್ಕೆ ಹೃದಯವಿದ್ದರೆ ಅಪರಾಧಿಗಳನ್ನು ಶಿಕ್ಷಿಸಿ, ದಲಿತರ ಬಾಳಿಗೆ ದೀಪವಾಗಿದ್ದ ಚಿಕ್ಕಣ್ಣನವರ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಲಿ.

● ಆರ್. ಸ್ವಾಮಿ ಆನಂದ

ಪಂಚಮ



ಡಾ॥ ಬಿ.ಆರ್. ಅಂಬೇಡ್ಕರ್ ಜನ್ಮದಿನ ವಿಶೇಷಾಂಕ

ಧರ್ಮಬೇಧ, ವರ್ಣಬೇಧ, ಜಾತಿಬೇಧ ಮುಂತಾದ ತಾರತಮ್ಯಗಳ ತವರಾದ ಇಂಡಿಯಾ ಉರಿಯುತ್ತಿರುವ ಮನೆ. ಇದು ಯಾವಾಗಲೂ ಉರಿಯುತ್ತಲೇ ಇರುತ್ತದೆ. ಈ ಉರಿಯುತ್ತಿರುವ ಮನೆಯಲ್ಲಿ ಗಳ ಹಿರಿಯುವ ನೀಚ ಮನೋವೃತ್ತಿಯನ್ನು ಜಾತಿ ಬಲಪಡಿಸುತ್ತದೆ.

ಅಂಬೇಡ್ಕರರ ಜಾತಿವಿನಾಶ ಹೋರಾಟದ ಹಿನ್ನೆಲೆಯಲ್ಲಿ ಸನಾತನ ಜಾತಿ ವ್ಯವಸ್ಥೆಯ ಮೇಲೆ ಒಂದು ನೋಟ.

ಕುಮಾರ ಕಕ್ಕಯ್ಯ ಪೋಳ

ದಲಿತರ ಭಾಗ್ಯವಿಧಾತ ಡಾ॥ ಬಾಬಾ ಸಾಹೇಬ ಅಂಬೇಡ್ಕರರು, ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ, ದಾಮೋಲಿ ಗ್ರಾಮದಲ್ಲಿ, ದಿ. 14-4-1891ರಂದು ಅಸ್ಪೃಶ್ಯ ಜನಾಂಗದ, ಮಹಾರ್ ಕುಟುಂಬದಲ್ಲಿ ಜನಿಸಿದರು. ಮಹಾರ್ ಎಂದರೆ, ಮಹಾ+ಅರಿ= ದೊಡ್ಡ+ವೈರಿ= ಕಡುವೈರಿ ಎಂದು ಅರ್ಥ. ಇದು ಸಂಸ್ಕೃತ ಮೂಲದ ಶಬ್ದ. ಈ ಜನಾಂಗಕ್ಕೆ ಈ 'ಮಹಾರ್' ಎಂಬ ಹೆಸರು ಯಾಕೆ ಬಂತು ? ಯಾವ ಕಾಲಕ್ಕೆ ಇವರು ಯಾರ ವೈರಿಗಳಾದರು ? ಡಾ॥ ಅಂಬೇಡ್ಕರರು ಮನಸ್ಮೃತಿಯನ್ನು ಯಾಕೆ ಸುಟ್ಟು ಹಾಕಿದರು ? ಇದಕ್ಕೆ ಉತ್ತರ ? ಕಾಲನ ಗರ್ಭದಲ್ಲಿ ಈಗ ಅದೆಲ್ಲವೂ ಹೂತು ಹೋಗಿದೆ !!

ನಮ್ಮ ಸಂಶೋಧಕರು ಹೇಳುವಂತೆ, ಪುರಾತನ ಪಟ್ಟಣಗಳಾದ ಹರಪ್ಪ, ಮೋಹಂಜೋದಾರೊ, ನಾಗಾರ್ಜುನಕೊಂಡ ಇತ್ಯಾದಿ ಸ್ಥಳಗಳಲ್ಲಿ ಸಿಕ್ಕ ಅವಶೇಷಗಳ ಪ್ರಕಾರ. ಕೆಲವೊಂದು ಸಾವಿರ ವರ್ಷಗಳ ಹಿಂದೆ, ಆರ್ಯರು ಭಾರತಕ್ಕೆ ಬರುವ ಮೊದಲು, ಇಲ್ಲಿ ದ್ರಾವಿಡ ಜನಾಂಗವಿತ್ತು. ಭಾರತ ಮೂಲ ನಿವಾಸಿಗಳಾದ ಅವರಿಗೆ ಅವರದೇ ಆದ ಸಮ್ಮತಿ ಮತ್ತು ಧರ್ಮವಿತ್ತು. ಹೊರಗಿನಿಂದ ಬಂದ ಆರ್ಯರು, ತಮ್ಮ ಧನುರ್ವಿದ್ಯೆಯ ತಂತ್ರಗಾರಿಕೆಯಿಂದ, ಈ ದ್ರಾವಿಡರನ್ನು ಸೋಲಿಸಿ, ಅವರನ್ನು ಬಗ್ಗುಬಡಿದು, ಅವರ ಮೇಲೆ ಬಲಾತ್ಕಾರವಾಗಿ ತಮ್ಮ ಸಂಸ್ಕೃತ ಮತ್ತು ಧರ್ಮವನ್ನು ಹೇರಿದರು. ಅಂದಿನ ಆರ್ಯ ದ್ರಾವಿಡರ ಘರ್ಷಣೆಯ ಫಲವೇ ಇಂದಿನ ಚಾತುರ್ವರ್ಣ, ಜಾತಿ ಪದ್ಧತಿ ಧರ್ಮ-ಎಂಬುದನ್ನು ಮರೆಯಲಿಕ್ಕಾಗದು. ಆರ್ಯ-ಅನಾರ್ಯರ ಈ ವರ್ಗ ಹೋರಾಟದಲ್ಲಿ, ಗೆದ್ದವರು ದೇವರಗಳೆನಿಸಿದರು. ಸೋತವರು ದಾನವರೆನಿಸಿದರು. ರಾಕ್ಷಸರೆನಿಸಿದರು. ಮಹಾರ್‌ರೆನಿಸಿದರು, ದುಷ್ಟರೆನಿಸಿದರು, ದಸ್ಯುಗಳೆನಿಸಿದರು, ಕೊನೆಗೆ ಅಸ್ಪೃಶ್ಯರೆನಿಸಿದರು.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ, ಪುರಾತನ ಕಾಲದಲ್ಲಿ ಗುಲಾಮಗಿರಿ ಪದ್ಧತಿ ಇತ್ತು. ಅವರಲ್ಲಿ ಮನೆ ಮನೆಗೆ ಗುಲಾಮರಿರುತ್ತಿದ್ದರು. ಅದೇ ಪ್ರದೇಶ ಮತ್ತು ಅದೇ ಸಂಗತಿಯಿಂದ ಬಂದ ಆರ್ಯರು, ಭಾರತದಲ್ಲಿ ಗುಲಾಮಗಿರಿ ಪದ್ಧತಿ ಇರದ ಕಾರಣ ಮತ್ತು ಇಲ್ಲಿ ಗುಲಾಮರು ಮಾರಾಟಕ್ಕೆ ಸಿಗದ ಕಾರಣ, ಪಾಖಂಡಿಗಳೂ ದೂರ್ತರೂ ಆದ ಇವರು, ದೇವರು ಮತ್ತು ಧರ್ಮದ ಹೆಸರಲ್ಲಿ, ಇಲ್ಲಿಯ ಮೂಲ ದ್ರಾವಿಡರನ್ನು ಸಾಮೂಹಿಕ ಗುಲಾಮರನ್ನಾಗಿ ಪರಿವರ್ತಿಸಿ, ಅವರ ಎಲ್ಲ ಮಾನವೀಯ ಹಕ್ಕುಬಾಧ್ಯತೆಗಳನ್ನು ನಷ್ಟಮಾಡಿ. ಅವರನ್ನು ಶೂದ್ರರು, ಅಸ್ಪೃಶ್ಯರು ಅಂತ್ಯಜರು-ಎಂದು ಸಾರಿದರು.

ಅಂದಿನ ಆರ್ಯರ. ವೈದಿಕ ಧರ್ಮದ ಸಂವಿಧಾನವೆಂದು ಹೇಳಲ್ಪಡುವ 'ಮನುಸ್ಮೃತಿ'ಯಲ್ಲಿ. ಅಸ್ಪೃಶ್ಯರಿಗಾಗಿ ಮಾಡಿದ ಕೆಲವೊಂದು ಧಾರ್ಮಿಕ ಕಟ್ಟಳೆಗಳು ಹೀಗೆ ಹೇಳುತ್ತವೆ. 1) ಪೂರ್ವಜನ್ಮದ ಪಾಪದ ಫಲವನ್ನು ಅನುಭವಿಸುವದಕ್ಕಾಗಿ ಅವರು ಅಸ್ಪೃಶ್ಯರಾಗಿ ಹುಟ್ಟಿಬರುತ್ತಾರೆ. ಅವರ ಹೀನಬಾಳಿಗಾಗಿ ಕನಿಕರಪಡುವ ಕಾರಣವಿಲ್ಲ. ಅವರ ಹತ್ಯೆ ಪಶುಪಕ್ಷಿಗಳ ಹತ್ಯೆಗೆ ಸಮಾನ. 2) ಅವರಿಗೆ ಬುದ್ಧಿ 'ಅನ್ನ' ಹವಿಸ್ಸು ಧರ್ಮವ್ರತ ಇತ್ಯಾದಿಗಳನ್ನು ಹೇಳಬಾರದು ಮತ್ತು ಕೊಡಬಾರದು. 3) ಅವರು ಧರ್ಮದ ಬಗ್ಗೆ ಚರ್ಚೆ ಮಾಡಿದರೆ, ಕಾಸಿದ ಶೀಸ ಅಥವಾ ಕಾಸಿದ ಎಣ್ಣೆಯನ್ನು ಅವರ ಕಿವಿಯಲ್ಲಿ ಸುರವಿ ಮುಖಕ್ಕೆ ಎರಚಬೇಕು. 4) ಅವರು ಮೇಲ್ವರ್ಗದವರ ಸರಿಸಮಾನವಾಗಿ ಕುಳಿತುಕೊಳ್ಳಲು ಬಂದರೆ, ಅವರ ಸೊಂಟಕ್ಕೆ ಬರೆಹಾಕಬೇಕು. ತಿಗ ಕೆತ್ತಬೇಕು. 5) ಅವರು ಊರ ಹೊರಗೆ ವಾಸಿಸಬೇಕು. ನಾಯಿ ಕತ್ತೆಗಳೇ ಅವರ ಆಸ್ತಿ. ಅವರು ಯಾವುದೇ ಆಸ್ತಿ ಮಾಡಿದರೆ ಅದನ್ನು ಕಸಿದುಕೊಳ್ಳಬೇಕು. 6) ಶವಗಳ ಮೇಲಿನ ಬಟ್ಟೆಗಳೇ ಅವರ ಉಡಿಗೆ. ಹಳಸಿದ ಪದಾರ್ಥಗಳೇ ಅವರ ಆಹಾರ. 7) ಅವರು ಗ್ರಾಮದ ಬೀದಿಗಳಲ್ಲಿ ಸಂಚರಿಸುವಾಗ ಕೊರಳಲ್ಲಿ ಮಗಿ ಕಟ್ಟಬೇಕು. ಅವರ ಪಾದದ ಗುರ್ತು ಅಳಿಸಲು ಸೊಂಟಕ್ಕೆ ಕಟ್ಟಿದ ಬೋರಿಗೆ ಹಿಂದೆ ಎಳೆಯುತ್ತಿರಬೇಕು. 8) ಅವರು ಹುಟ್ಟಬರುವದೇ ಮೇಲ್ವರ್ಗದವರ ಸೇವೆಗಾಗಿ. ಅವರ ಸ್ತ್ರೀಯರನ್ನು ಮೇಲ್ವರ್ಗದವರು ಭೋಗಿಸಬಹುದು. ಆದರೆ ಅವರ ಗಂಡಸರು ಮೇಲ್ವರ್ಗದವರ ಸ್ತ್ರೀಯರನ್ನು ಮುಟ್ಟಿದ್ದೇ ಆದರೆ ಅವರನ್ನು ಜೀವಂತ ಸುಡಬೇಕು. ದೇವರು ಧರ್ಮ ಮತ್ತು ಪಾಪಪುಣ್ಯದ ಹೆಸರಿನಲ್ಲಿಯೋ ಇಂಥ ಘೋರ ಜಾತಿ ಪದ್ಧತಿ ಧರ್ಮವನ್ನು ಸೃಷ್ಟಿಸಿದವರು ಮನುಷ್ಯರೋ ಅಥವಾ ಪಿಶಾಚಿಗಳೋ ಎಂಬುದನ್ನು ಗ್ರಹಿಸಬಹುದು.

"ತಾಯಿ ಮೊಲೆ ಹಾಲು ನಂಜಾಗಿ ಕೊಲುವಡೆ ಇನ್ನಾರಿಗೆ ದೂಗವೆ ?"—ಎನ್ನುವಂತೆ, ದೇವರು ಮತ್ತು ಧರ್ಮದ ಹೆಸರಿನಲ್ಲಿಯೋ ಈ ಚಾತುರ್ವರ್ಣ ಜಾತಿ ಪದ್ಧತಿ ಹುಟ್ಟಿಕೊಂಡಿರುವಾಗ. ಇನ್ನು ಇವರು ರೋಧಿಸುವುದಾದರೂ ಯಾರ ಮುಂದೆ ? ಈ ಭಾರತದಲ್ಲಿ. ದೀನ ದಲಿತರ ಘೋರ ಬಾಳು, ಅವರ ಬೆವರ ಕಣ್ಣೀರ ರಕ್ತದಿಂದ ತೊಯ್ದ ಭೂಮಾತೆಗೇ ಗೊತ್ತು !! ಸಹಸ್ರಾರು ವರುಷಗಳ ಹಿಂದಿನ ಮಾತು ಹೋಗಲಿ, ನಮ್ಮ ನೆರೆಯಲ್ಲಿಯೋ ಇತ್ತಿತ್ತಲಾಗಿ ಆಗಿ ಹೋದ ಪೇಶ್ವೆಯರ ಆಳಿಕೆಯಲ್ಲಿಯೂ ಸಹ ಪಟ್ಟಣ ಪಟ್ಟಣದ ಪ್ರಮುಖ ಬೀದಿಗಳಲ್ಲಿ ತಿರುಗಾಡಲು ಅಸ್ಪೃಶ್ಯರಿಗೆ ನಿರ್ಬಂಧವಿತ್ತು. ಊರ ಹೊರವಲಯದಲ್ಲಿ ಮಾತ್ರ ಅವರು ತಮ್ಮ ಕೊರಳಲ್ಲಿ ಮಗಿ ಕಟ್ಟಿಕೊಂಡು ಅಡ್ಡಾಡಬಹುದಿತ್ತು. ಮದ್ರಾಸಿನಲ್ಲಿಯೂ ಸಹ. ಕೆಲವೊಂದು ಬೀದಿಗಳಲ್ಲಿ ತಿರುಗಾಡಲು ಅಸ್ಪೃಶ್ಯರಿಗೆ ನಿಷಿದ್ಧ ಇತ್ತು. ಈ ಬಹಿಷ್ಕಾರವನ್ನು ಶ್ರೀ ರಾಮಸ್ವಾಮಿ ಪೆರಿಯಾರ ಅವರು ಬಲವಾಗಿ ಪ್ರತಿಭಟಿಸಿ ವೈದಿಕ ಧರ್ಮದ ವಿರುದ್ಧ ದೊಡ್ಡ ಕ್ರಾಂತಿಯನ್ನೇ ಮಾಡಿದರು. ಪೂಣಾದಲ್ಲಿದ್ದ ಸಂಸ್ಕೃತ ಪಾಠಶಾಲೆಯನ್ನು 1821ರಲ್ಲಿ

ಪಂಚಮ



ಡಾ॥ ಬಿ.ಆರ್. ಅಂಬೇಡ್ಕರ್
ಜನ್ಮದಿನ ವಿಶೇಷಾಂಕ

ಜಯಂತಿಯೆಂದರೆ, ವರುಷಕ್ಕೊಮ್ಮೆ ಅವರ ಭಾವಚಿತ್ರದ ಮೆರವಣಿಗೆ ಮಾಡಿ ಉದ್ದುದ್ದ ಭಾಷಣ ಬಿಗಿಯುವದಲ್ಲ. ಅವರ ತತ್ವಗಳೇನು? ಅವರ ಉದ್ದೇಶವೇನಿತ್ತು? ಮೊದಲು ನಾವು ಹೇಗಿದ್ದೆವು. ಈಗೇನಾಗಿದ್ದೇವೆ? ಮುಂದೆ ಏನಾಗಬೇಕಾಗಿದೆ? ಇವೆಲ್ಲವುಗಳ ಚಿಂತನೆ ಮಾಡಬೇಕು.

ಪ್ರತಿ ವರುಷ ಅವರ ಜಯಂತಿ ಮಾಡುವ ನಾವು, ಅವರು ಗತಿಸಿ ಇಂದಿಗೆ 22 ವರ್ಷಗಳೇ ಕಳೆದು ಹೋದರೂ, ಅವರು ಕಂಡ ಕನಸು ನನಸಾಗುವಂತೆ, ಏನಾದರೂ ಪ್ರಯತ್ನ ಅಥವಾ ಸೃಜನಾತ್ಮಕ ಕೆಲಸ ಮಾಡಿದ್ದೇವೆಯೋ ಎಂಬುದನ್ನು ಆತ್ಮಸಾಕ್ಷಿಯಾಗಿ ಸ್ಮರಿಸಿಕೊಳ್ಳಬೇಕಿದೆ.

ಬ್ರಿಟಿಷರು, ಸಾರ್ವಜನಿಕ ಪ್ರವೇಶಕ್ಕೆ ಮುಕ್ತ ಮಾಡಿದಾಗ, ಅಲ್ಲಿಯ ಬ್ರಾಹ್ಮಣ ಶಿಕ್ಷಕರೆಲ್ಲರೂ, ಸಾಮೂಹಿಕವಾಗಿ ತಮ್ಮ ರಾಜಿನಾಮೆಗಳನ್ನು ಸಲ್ಲಿಸಿ ಪ್ರತಿಭಟಿಸಿದರಂತೆ. ಸಾತಾರಾ ಮಹಾರಾಜಾ ರಾತ್ರಿ ವೇಳೆಯಲ್ಲಿ ಪಾಠ ಹೇಳಿಸಿಕೊಳ್ಳುತ್ತಿದ್ದರಂತೆ. ಅಷ್ಟೇ ಏಕೆ? ನಮ್ಮ ರಾಷ್ಟ್ರಪಿತನೆನಿಸಿದ ಗಾಂಧೀಜಿ ಬಾಲಕನಿದ್ದಾಗ, ಅವನು ಅಪ್ಪಿತಪ್ಪಿ ಯಾವನಾದರೂ ಅಸ್ಪೃಶ್ಯನಿಗೆ ಮುಟ್ಟಿದರೆ, ಆ ಸೂತಕ ಕಳೆಯಲು, ಮತ್ತೊಬ್ಬ ಮುಸಲ್ಮಾನನಿಗೆ ಮುಟ್ಟಬೇಕು'–ಎಂದು ಅವರ ತಾಯಿ ಹೇಳಿಕೊಟ್ಟಿದ್ದಳಂತೆ. ಮೊದಮೊದಲು ಗಾಂಧೀಜಿಯವರು. ಅಸ್ಪೃಶ್ಯರು ದೇವಾಲಯಗಳನ್ನು ಪ್ರವೇಶ ಮಾಡಲು ವಿರೋಧಿಗಳಾಗಿದ್ದರು. ಆದರೆ ಅವರಿಗೆ ಅಸ್ಪೃಶ್ಯತೆಯ ಅರಿವು ಮೂಡಿಬಂದದ್ದು 1921ರಲ್ಲಿ. ಅಹಮದಾಬಾದಿನಲ್ಲಿ ಜರುಗಿದ ಹಿಂದುಳಿದ ಜನರು ಹಕ್ಕುಬಾಧ್ಯತೆಗಳಿಗಾಗಿ ಮಾಡಿದ ಸಮ್ಮೇಳನದಲ್ಲಿ. ಅವರ ಆಯುಷ್ಯದ 52 ವರುಷಗಳ ತರುವಾಯ. ಅದೂ ಸಹ ಡಾ॥ ಅಂಬೇಡ್ಕರರ ಹೋರಾಟ ಮತ್ತು ರಾಜಕೀಯ ಬಿಕ್ಕಟ್ಟಿನಿಂದಾಗಿ ಎಂಬುದನ್ನು ಮರೆಯಲಿಕ್ಕಾಗದು. ಕೊನೆಯವರೆಗೂ ಅವರು ಚಾತುರ್ವರ್ಣ, ಜಾತಿ ಪದ್ಧತಿಯನ್ನು ನಂಬಿದವರಾಗಿದವ್ದರು.

ಧರ್ಮಭೇಧ, ವರ್ಣಭೇದ. ಜಾತಿಭೇದ, ಇದು ಉರಿ ಹತ್ತಿದ ಮನೆಯಂತೆ. ಅದು ಯಾವಾಗಲೂ ಉರಿಯುತ್ತಲೇ ಇರುವುದು. ಅಂಥ ಉರಿ ಹತ್ತಿದ ಮನೆಯಲ್ಲಿ ಹಿರಿದದ್ದೇ ಲಾಭ. ಹೀಗೆ ಹಿರಿಹಿರಿದೇ ಪರಧರ್ಮಗಳು ಭಾರತದಲ್ಲಿ ಧಾರಾಳವಾಗಿ ಬೆಳೆದು ಬಂದವು. ತತ್ಪರಿಣಾಮ, ಪರಕೀಯರ ಪರಧರ್ಮ ಅವರಿಗೆ ಕಂಟಕವಾದರೆ ಚಾತುರ್ವರ್ಣ, ಜಾತಿ ಪದ್ಧತಿ ಹಿಂದುಗಳು, ತಮ್ಮ ಧರ್ಮದವರಿಗೆ ತಾವೇ ಕಾಲಕಂಟಕರಾದರು. ಹೀಗಾಗಿ, ಅಸ್ಪೃಶ್ಯತೆ ದೇಶಕ್ಕೆ ದೊಡ್ಡ ಶಾಪವಾಯಿತು. ಮಾನವೀಯತೆಗೆ ಕಲಂಕ ತಂದಿತು. ರಾಷ್ಟ್ರದ ಅಳಿಗಾಲ ಪ್ರಾರಂಭವಾಯಿತು. ಭಾರತ, ಸಹಸ್ರ ಸಹಸ್ರ ವರುಷದ ಗುಲಾಮಗಿರಿಗೆ ತುತ್ತಾಯಿತು. ಅಸ್ಪೃಶ್ಯ ಉದ್ಧಾರದ ಮಾತು ಇಂದು ನಿನ್ನೆಯದಲ್ಲ. ಎಂದು ಈ ಅನಿಷ್ಟ ಚಾತುರ್ವರ್ಣ ಹುಟ್ಟಿತೋ, ಅಂದಿನಿಂದಲೇ ಕೆಲವೊಂದು ಜನ ಮಹಾತ್ಮರು, ಅದರ ವಿರುದ್ಧ ಹೋರಾಡುತ್ತಲೇ ಬಂದಿದ್ದಾರೆ. ಭಗವಾನ್ ಬುದ್ಧ, ಬಸವಣ್ಣ ಡಾ॥ ಅಂಬೇಡ್ಕರ ಮುಂತಾದ – ಮೇಧಾವಿಗಳು ದಲಿತರೂ ಶರಣರೂ ಇತ್ಯಾದಿಯರು ಸಾಕಷ್ಟು ಶ್ರಮಿಸಿದ್ದಾರೆ. ಆದರೆ ಜಾತ್ಯಾಂಧರ ಕಡುಸ್ವಾರ್ಥ ಮತ್ತು ದೂರ್ತರ ಕುಟಿಲ ತಂತ್ರಗಳಿಂದಾಗಿ ಅದು ಅಂದಿನಿಂದ ಇಂದಿನವರೆಗೆ ಹಾಗೆಯೇ ಉಳಿದುಕೊಂಡು ಬಂದಿದೆ.

ಹೆರಿಗೆಯ ನೋವು ಹೆರುವವಳಿಗಲ್ಲದೆ ಸೂಲಗಿತ್ತಿಗೆ ಬಾರದು. ಸಾವಿನ ನೋವು ಸಾವಿನೊಡನೆ ಸೆಣಸಾಡುವ ಇಲಿಗಲ್ಲದೆ ಬೆಕ್ಕಿಗೆ ತಿಳಿಯದು, ಅಸ್ಪೃಶ್ಯರ ನೋವು ಅಸ್ಪೃಶ್ಯರಿಗಲ್ಲದೆ ಬೇರೆಯವರಿಗೆ ಕಾಣದು, ಅಸ್ಪೃಶ್ಯತೆಯ ನೋವನ್ನು ಸ್ವತಃ ಕಂಡುಂಡು ಅನುಭವಿಸಿದ ಡಾ॥ ಅಂಬೇಡ್ಕರ್‌ರವರು ತಮ್ಮ ಜೀವನವನ್ನೇ ದೀನದಲಿತರ ಉದ್ಧಾರಕ್ಕಾಗಿ ಮೀಸಲಿಟ್ಟರು. ಅವರಿಗಾಗಿ ಹಗಲಿರಳೂ ದುಡಿದರು. ದಿನದ 18 ತಾಸು, ಎಲ್ಲ ದೇಶಗಳ, ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಗ್ರಂಥಗಳ ಆಳವಾದ ಅಭ್ಯಾಸಮಾಡಿ, ಧರ್ಮದ ಹೆಸರಿನಲ್ಲಿ ಅಸ್ಪೃಶ್ಯರ ಮೇಲೆ ಆಗುತ್ತಿರುವ ಶೋಷಣೆ, ಅನ್ಯಾಯ ಅತ್ಯಾಚಾರ ದಬ್ಬಾಳಿಕೆ ದೌರ್ಜನ್ಯಗಳನ್ನು ಖಂಡತುಂಡವಾಗಿ ಬಯಲಿಗೆಳೆದರು. ದೀನದಲಿತರ ಉದ್ಧಾರಕ್ಕಾಗಿ, ಅಪಾರಕ್ರಾಂತಿಕಾರಿ ಸಾಹಿತ್ಯವನ್ನು ಸೃಷ್ಟಿಸಿದರು. ಶ್ರೀಗಂಧದ ಕೊರಡಿನಂತೆ, ಅಸ್ಪೃಶ್ಯರ ಏಳ್ಗೆಗಾಗಿ ತಮ್ಮ ಆಯುಷ್ಯವನ್ನೇ ತೇಯ್ದರು. ಇದಕ್ಕಾಗಿ ಅವರು ಅದೆಷ್ಟೋ ಜನ ವಾಮಪಂಥೀಯ ರಾಷ್ಟ್ರನಾಯಕರನ್ನು ಎದುರು ಹಾಕಿಕೊಂಡರು. ಮಂತ್ರಿಪದವಿಯನ್ನೂ ತ್ಯಜಿಸಿದರು. ಆದರೂ ಅವರು ಕೊನೆಗೆ ತಮ್ಮ ಛಲವನ್ನು ಸಾಧಿಸಿದರು. ಅಸ್ಪೃಶ್ಯರಿಗೆ ಅವರ ಮಾನವೀಯ ಹಕ್ಕುಬಾಧ್ಯತೆಗಳನ್ನು ಮತ್ತು ಸಂವಿಧಾನಾತ್ಮಕ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟರು. ದೀನದಲಿತರ ಕಣ್ಮಣಿಯಾದರು. ಏಕೈಕ ನೇತಾರನೆನಿಸಿದರು, ಪೂಜ್ಯರಾದರು.

ಇಂದು ನಾವು ಅವರ 98ನೆಯ ಜಯಂತಿಯನ್ನು ಆಚರಿಸುತ್ತಲಿದ್ದೇವೆ. ಜಯಂತಿಯೆಂದರೆ, ವರುಷಕ್ಕೊಮ್ಮೆ ಅವರ ಭಾವಚಿತ್ರದ ಮೆರವಣಿಗೆ ಮಾಡಿ ಉದ್ದುದ್ದ ಭಾಷಣ ಬಿಗಿಯುವದಲ್ಲ. ಅವರ ತತ್ವಗಳೇನು? ಅವರ ಉದ್ದೇಶವೇನಿತ್ತು? ಮೊದಲು ನಾವು ಹೇಗಿದ್ದವು? ಈಗೇನಾಗಿದ್ದೇವೆ? ಮುಂದೆ–ಏನಾಗಬೇಕಾಗಿದೆ? ಇವೆಲ್ಲವುಗಳ ಚಿಂತನೆ ಮಾಡಬೇಕು. ಪ್ರತಿ ವರುಷ ಅವರ ಜಯಂತಿ ಮಾಡುವ ನಾವು, ಅವರು ಗತಿಸಿ ಇಂದಿಗೆ 22 ವರುಷಗಳೇ ಕಳೆದ ಹೋದರೂ, ಅವರು ಕಂಡ ಕನಸು ನನಸಾಗುವಂತೆ, ಏನಾದರೂ ಪ್ರಯತ್ನ ಅಥವಾ ಸೃಜನಾತ್ಮಕ ಕೆಲಸ ಮಾಡಿದ್ದೇವೆಯೋ—ಎಂಬುದನ್ನು ಆತ್ಮಸಾಕ್ಷಿಯಾಗಿ ಸ್ಮರಿಸಿಕೊಳ್ಳಬೇಕು. ಇದನ್ನು ಬಿಟ್ಟು, ಬರೀ ಅವರ ಹುಟ್ಟಿನಿಂದ ಸಾಯುವವರೆಗೆ, ಜೀವನ ಚರಿತ್ರೆಯ ಕುರಿತು ಮಾತಾಡಿದರೆ ಸಾಲದು. ಅದನ್ನು ಆಚರಣೆಯಲ್ಲಿ ತರಬೇಕು.

ಇದು ನಮ್ಮ ಎಲ್ಲ ವಿದ್ಯಾವಂತರ ಆದ್ಯ ಕರ್ತವ್ಯ. ಡಾ॥ ಬಾಬಾಸಾಹೇಬ ಅಂಬೇಡ್ಕರರ, ಸಂದೇಶವನ್ನು ಮತ್ತು ಅವರ ಅಪಾರ ಕ್ರಾಂತಿಕಾರಿ ಸಾಹಿತ್ಯವನ್ನು ದೇಶದ ತುಂಬ ಊರೂರಿಗೆ, ಕೇರಿಕೇರಿಗೆ, ಮನೆಮನೆಗೆ, ಗುಡಿಸಲು ಗುಡಿಸಲಿಗೆ ಮುಟ್ಟಿಸಬೇಕು. ಚರ್ಚಿಸಬೇಕು. ಮೂರ್ತಿ ಭಂಜಕರಾದ ಡಾ॥ ಅಂಬೇಡ್ಕರರು ಮೂರ್ತಿ ಪೂಜೆಯನ್ನು ಬಲವಾಗಿ ಖಂಡಿಸಿದ್ದಾರೆ. ಮೂರ್ತಿಗಳನ್ನು ಕುಟ್ಟಿ ಪುಡಿಪುಡಿ ಮಾಡುವುದರಲ್ಲಿಯೇ ತಮಗೆ ಅಪಾರ ನಂಬುಗೆಯೆಂದು ಸಾರಿದ್ದಾರೆ, ಆದಕಾರಣ, ದೀನದಲಿತ ಜನಗಳಿಗೆ ತಮ್ಮ ಪಾರಂಪರಿಕ ಸಾಂಪ್ರದಾಯ, ಅಂಧಶ್ರದ್ಧೆ, ಮೂಢನಂಬಿಕೆ ಕಂದಾಚಾರಗಳನ್ನು ಬಿಡಲು ಬೋಧಿಸಬೇಕು ಮತ್ತು ಕಟ್ಟುನಿಟ್ಟಾಗಿ ಬಿಡಿಸಬೇಕು. ಹಳ್ಳಿಹಳ್ಳಿಗಳಲ್ಲಿ ಪ್ರತಿಯೊಬ್ಬರೂ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡುವಂತೆ ಜನರನ್ನು ಜಾಗ್ರತಗೊಳಿಸಬೇಕು. ಅಂದಾಗ ಮಾತ್ರ ನಾವು ಅವರ ಜಯಂತಿಯನ್ನು ಆಚರಿಸಿದ್ದಕ್ಕೆ ಸಾರ್ಥಕ ಮತ್ತು ಅವರ ಆತ್ಮಕ್ಕೂ ಶಾಂತಿ ನಮಗೂ ನೆಮ್ಮದಿ.



ಡಾ॥ ಅಂಬೇಡ್ಕರ್: ಚಿಂತನೆ-ಹೋರಾಟ ಒಂದು ಅವಲೋಕನ

ರುದ್ರಸ್ವಾಮಿ

"ಭಾರತೀಯ ಸಾಮಾಜಿಕ ವ್ಯವಸ್ಥೆಯ ಮೂಲಭೂತ ಬದಲಾವಣೆಯನ್ನು ಬಯಸುವ ಜನರು ಅಂಬೇಡ್ಕರರ ಚಿಂತನೆಗಳನ್ನು ಮರೆಯುವಂತಿಲ್ಲ. ಸಮಕಾಲೀನ ದಲಿತ ಸಂಘಟನೆಗಳು ಇತಿಹಾಸದ ಪಾಠಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕು" ಎನ್ನುತ್ತಾರೆ ಈ ಲೇಖನದಲ್ಲಿ ರುದ್ರಸ್ವಾಮಿ.

ಅಂಬೇಡ್ಕರರ ತಾತ್ವಿಕ ಚಿಂತನೆಯನ್ನು ನಾಡಿನಾದ್ಯಂತ ದಲಿತರ ಅಂತರಂಗದ ಹತ್ತಿರ ಒಯ್ಯುತ್ತಿರುವ ರುದ್ರಸ್ವಾಮಿ ದಲಿತ ವಿದ್ಯಾರ್ಥಿ ಒಕ್ಕೂಟದ ರಾಜ್ಯ ಸಂಚಾಲಕರೂ ಆಗಿದ್ದಾರೆ.

ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್. ಇಂದು ವಿವಿದ ಕಾರಣಗಳಿಂದಾಗಿ ಜನಮನದಲ್ಲಿ ಚಲಾವಣೆಯಲ್ಲಿದ್ದಾರೆ. ಶತಮಾನಗಳಿಂದ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅತ್ಯಂತ ಕ್ರೂರವಾದ ದಬ್ಬಾಳಿಕೆಗೆ ಒಳಗಾದ ಜನಸಮುದಾಯದ ಪ್ರತಿಭಟನೆಯ ಸಂಕೇತವಾದ ಅಂಬೇಡ್ಕರ್; ಅವರ ವಿಚಾರಗಳು ಶೋಷಿತ ಸಮೂಹಗಳಲ್ಲಿ ಪ್ರತಿಭಟನೆಯ ಸೆಲೆ ಸೃಷ್ಟಿಸುತ್ತಿವೆ. ಅವರ ಚಿಂತನೆಗಳು ಭಾರತೀಯ ಪಟ್ಟಭದ್ರ ಹಿತಾಸಕ್ತಿಗಳಿಗೆ, ಹಿಂದೂ ಕೋಮುವಾದಿಗಳಿಗೆ ಸಿಂಹಸ್ವಪ್ನವಾಗಿವೆ.

ಭಾರತೀಯ ಸಾಮಾಜಿಕ ವ್ಯವಸ್ಥೆಯ ಮೂಲಭೂತ ಬದಲಾವಣೆಯನ್ನು ಬಯಸುವ ಜನರು ಅಂಬೇಡ್ಕರ್‌ರವರ ಚಿಂತನೆಗಳನ್ನು ಮರೆಯುವಂತಿಲ್ಲ. ಆದರೆ ಅಂಬೇಡ್ಕರ್ ಅವರ ಹೋರಾಟಮಯ ಬದುಕಿನಿಂದ ಸ್ಫೂರ್ತಿ ಪಡೆದ ಸಮಕಾಲೀನ ದಲಿತ ಸಂಘಟನೆಗಳು ಇತಿಹಾಸದ ಪಾಠಗಳನ್ನು ಸರಿಯಾಗಿ ಗಮನಿಸಿದಂತಿಲ್ಲ. ಅಂಬೇಡ್ಕರ್‌ರವರಿಗಿದ್ದ ದೂರಗಾಮಿ ಆಲೋಚನೆ ಶೋಷಿತರ ಹಿತಾಸಕ್ತಿಗಳಿಗಾಗಿ 'ಕೊಟ್ಟು-ತೆಗೆದು' ಕೊಳ್ಳುವ ಪ್ರವೃತ್ತಿ ಸಮಗ್ರ ಸಮಾಜದ ನೈಜ ಪ್ರವೃತ್ತಿಗಳ ಪರಿಜ್ಞಾನವಿಲ್ಲದವರಂತೆ ವರ್ತಿಸುತ್ತಿವೆ. ಇಂಡಿಯಾದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ದಲಿತ ಚಳುವಳಿಗಳು ಅಂಬೇಡ್ಕರ್, ತನ್ನ ಹೋರಾಟವನ್ನು ನಿಲ್ಲಿಸಿದ್ದರಿಂದ ಮುಂದುವರೆಯದೆ, ಅವರು ಪ್ರಾರಂಭಿಸಿದ 'ಶಿಕ್ಷಣ-ಸ್ವಾವಲಂಬನೆ-ಸವಲತ್ತು'ಗಳ ಸುತ್ತಾ ಸುತ್ತುತ್ತಿವೆ. ಊಳಿಗಮಾನ್ಯ ಸಾಮಾಜಿಕ ವ್ಯವಸ್ಥೆಯ ಅವಶೇಷಗಳಿಂದ ಉಂಟಾಗುತ್ತಿರುವ ನಿರಂತರ ಕೊಲೆ-ಸುಲಿಗೆಗಳ ವಿರುದ್ಧ ಪ್ರತಿಭಟಿಸುತ್ತಿವೆ. ಶೋಷಣೆ-ಕ್ರೌರ್ಯದ ಮೂಲಬೇರುಗಳು, ನಮ್ಮ ಸಾಮಾಜಿಕ-ಆರ್ಥಿಕ ಮತ್ತು ಧಾರ್ಮಿಕ ರಚನೆಯಲ್ಲಿವೆ. ಅವುಗಳ ಮೂಲ ಪರಿವರ್ತನೆಗೆ ಪ್ರಯತ್ನಿಸದೇ ದಬ್ಬಾಳಿಕೆಗಳ ವಿರುದ್ಧದ ಪ್ರತಿಭಟನೆಗಳು "ಹಾವು ಬಿಟ್ಟು ಹುತ್ತ ಬಡಿದಂತೆ"

ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಬದುಕಿನ ಅಪರಿಚಿತ ಮುಖಗಳ ಬಗ್ಗೆ ಪ್ರಸ್ತಾಪಿಸಲು ಪ್ರಯತ್ನಿಸುತ್ತೇನೆ. ಅಂಬೇಡ್ಕರ್ ಜಗತ್ತಿನ ಶ್ರೇಷ್ಠ ವಿಶ್ವವಿದ್ಯಾನಿಲಯಗಳಲ್ಲಿ ಕ್ರಮಬದ್ಧವಾದ ಜ್ಞಾನವನ್ನು ಪಡೆದುಕೊಂಡವರು. ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ತತ್ವಜ್ಞಾನ, ಸಮಾಜಶಾಸ್ತ್ರಗಳ ಆಳವಾದ ಅದ್ಯಯನ ಮಾಡಿದ್ದವರು. ಅಗಾಧವಾದ ಚಾರಿತ್ರಿಕ ಪ್ರಜ್ಞೆಯುಳ್ಳ, ಕಾಲದ ಸನ್ನೆಗಳಿಗೆ ಓಗೊಟ್ಟು ಶೋಷಿತ ವಿಮೋಚನೆಗೆ ನಿರಂತರ ಶ್ರಮಿಸಿದ ಧೀಮಂತ ಮಾನವತಾವಾದಿ.

1924 ಮಾ. 9ರಂದು ಮಹಾರಾಷ್ಟ್ರದಲ್ಲಿ ಸ್ಥಾಪಿತವಾದ ಅಸ್ಪೃಶ್ಯರ ಮೊದಲ ಸಂಘಟನೆ "ಬಹಿಷ್ಕೃತ ಹಿತಕಾರಿಣಿ ಸಭಾ"ದಿಂದ ಅಂಬೇಡ್ಕರ್‌ರವರ ಹೋರಾಟ

ಪ್ರಾರಂಭವಾಗಿ.1956ರಲ್ಲಿ ಅವರು ಸ್ಥಾಪಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದ 'ರಿಪಬ್ಲಿಕನ್ ಪಕ್ಷದ'ವರೆಗೆ ಅವರ ನಿರಂತರ ಬೆಳವಣಿಗೆಗಳನ್ನು ಗುರುತಿಸಬಹುದು. ಅಸ್ಪೃಶ್ಯರ ಜೊತೆಗೆ ಸಾಮಾಜಿಕವಾಗಿ ವಂಚಿತರಾದ ಅವಮಾನಿತ ಕೆಳಜಾತಿ/ವರ್ಗಗಳನ್ನು ತಮ್ಮ ಸಂಘಟನೆಯ ಒಳಗೆ 1936ರಷ್ಟರಲ್ಲಿ ತಂದುಕೊಂಡಿದ್ದಾರೆ. ಅವರ ಹೋರಾಟದ ನೆಲೆ, ಅತ್ಯಂತ ಶೋಷಿತರಾದ ಅಸ್ಪೃಶ್ಯರ ಜೊತೆಗೆ ಉಳಿದ ಹಿಂದುಳಿದ ವರ್ಗಗಳವರೆಗೆ ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದ್ದು ಗಮನಾರ್ಹವಾದುದ್ದು. 1935 ರಲ್ಲಿ ಭಾರತದ ಇತಿಹಾಸದಲ್ಲಿ ಪ್ರಮುಖ ಬೆಳವಣಿಗೆಗಳು ಸಂಭವಿಸಿವೆ. ಬ್ರಿಟೀಷರು ಸ್ಥಳೀಯ ವಿವಿಧ ವರ್ಗಗಳಿಗೆ ಪ್ರಾತಿನಿಧ್ಯ ಕೊಡಲು ವಿಶೇಷ ಕಾಯಿದೆಯನ್ನು ಜಾರಿಗೆ ತಂದರು. ಆ ಸಂದರ್ಭದಲ್ಲಿ 1936 ಆಗಸ್ಟ್ ತಿಂಗಳಲ್ಲಿ ಡಾ।। ಅಂಬೇಡ್ಕರ್‌ರವರು ಮುಂಬೈ ಪ್ರಾಂತ್ಯದಲ್ಲಿ 'Independent Labour Party' ಕಟ್ಟಿದರು. ಆಗ ನಡೆದ ಚುನಾವಣೆಯಲ್ಲಿ ಅತ್ಯಂತ ದೊಡ್ಡ ಪಕ್ಷವಾಗಿದ್ದ ಕಾಂಗ್ರೆಸ್ ಪಕ್ಷದ ವಿರುದ್ಧ 17 ಸ್ಥಾನಗಳಿಗೆ ತನ್ನ ಪಕ್ಷದ ಪ್ರತಿನಿಧಿಗಳನ್ನು ನಿಲ್ಲಿಸಿ 15 ಸ್ಥಾನಗಳಲ್ಲಿ ಜಯಗಳಿಸಿಕೊಂಡಿದ್ದರು. ಮತ್ತು ಅವರು ಮುಂಬೈ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿ ಪ್ರಮುಖ ಪಾತ್ರ ನಿರ್ವಹಿಸಿದ್ದರು.

ಅವರ I.L.P.ಯ ಪ್ರನಾಳಿಕೆಯಲ್ಲಿ 'States and minorities' ಪುಸ್ತಕಗಳಲ್ಲಿ ಅವರ ಆರ್ಥಿಕ ಚಿಂತನೆಗಳನ್ನು ಗುರಿತಿಸಬಹುದಾಗಿದೆ. ಭೂಮಿಯ ರಾಷ್ಟ್ರೀಕರಣ; ಬೃಹತ್ ಕೈಗಾರಿಕೆಗಳ ರಾಷ್ಟ್ರೀಕರಣ; ಸಹಕಾರಿ ಬೇಸಾಯ ಪದ್ಧತಿ, "ಕೃಷಿ ಕಾರ್ಮಿಕರಿಗೆ ವಿಮಾ ಪದ್ಧತಿಯಂತಹ ಪ್ರಗತಿ ಪರವಾದ ಯೋಜನೆಗಳನ್ನು ಪ್ರಕಟಿಸಿದ್ದರು. 1942ರಿಂದ 1947ರ ವರೆಗೆ ಅಂಬೇಡ್ಕರ್ 'National Executive Council'ನ ಸದಸ್ಯರಾಗಿ ಕಾರ್ಮಿಕ ಮಂತ್ರಿಗಳಾಗಿದ್ದರು. ನಮ್ಮ ದೇಶದ ಪ್ರಥಮ Labour Policy' ಅಂಬೇಡ್ಕರ್‌ರವರಿಂದ ರಚಿತವಾದುದ್ದು. ಬಹುಮುಖ್ಯವಾಗಿ ಕಾರ್ಮಿಕರಿಗೆ "ಮುಷ್ಕರದ ಹಕ್ಕು" (Workers Right to Strike ಒದಗಿಸಿಕೊಟ್ಟ ಕೀರ್ತಿ ಅಂಬೇಡ್ಕರ್‌ರವರದ್ದು.

"ಕಾರ್ಮಿಕ ಶಕ್ತಿ ಮತ್ತು ಸಂಘಟನಾತ್ಮಕ ಚಳುವಳಿಗಳು ಒಗ್ಗೂಡಿ "ಸಾಮಾಜಿಕ ನ್ಯಾಯ" ಸ್ಥಾಪನೆಗೆ ಶ್ರಮಿಸಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

ಕಾರ್ಮಿಕರ 'Minimum Wage Act ಮತ್ತು Compulsory Insurance Scheme under Compensation Act' ಸಹ ಅಂಬೇಡ್ಕರ್‌ರ ಹೋರಾಟ ಮತ್ತು ಶ್ರಮದಿಂದ ಆದ ಬ್ರಿಟಿಷ್ ಭಾರತದ ಪ್ರಮುಖ ಕಾಯಿದೆಗಳು.

ಕಾರ್ಮಿಕ ನಾಯಕರಾಗಿ ಮುಖ್ಯ ಹೋರಾಟಗಳಲ್ಲಿ ಭಾಗವಹಿಸಿದ್ದರು. ದುಡಿಯುವ ವರ್ಗದ ಇಬ್ಬರು ಪ್ರಮುಖ ಶತ್ರುಗಳು, "ಬಂಡವಾಳಶಾಹಿ ನೀತಿ ಮತ್ತು ಬ್ರಾಹ್ಮಣಿಕೆ" ಈ ಎರಡು ಶಕ್ತಿಗಳ ವಿರುದ್ಧ ಕಾರ್ಮಿಕ

ಪಂಚಮ



ಡಾ।। ಬಿ.ಆರ್. ಅಂಬೇಡ್ಕರ್
ಜನ್ಮದಿನ ವಿಶೇಷಾಂಕ

ರೈತರೊಡನೆ ಕೂಡಿ ಹೋರಾಡಬೇಕೆಂಬುದು ಅವರ ಆಶಯವಾಗಿತ್ತು. ಅವರ ಪ್ರಕಾರ "ಬ್ರಾಹ್ಮಣಿಕೆ-ಎಂದರೆ ಬ್ರಾಹ್ಮಣ ಜಾತಿಯಲ್ಲ, ದುಡಿಯುವ ವರ್ಗದ ವಿರೋಧಿಯಾದ, ಮೇಲು - ಕೀಳು ಭಾವನೆಗಳನ್ನು ಉದ್ದೀಪನಗೊಳಿಸುವ ಮಾನಸಿಕ ಪ್ರವೃತ್ತಿ" ಎಂದು ಅಭಿಪ್ರಾಯಪಟ್ಟಿದ್ದಾರೆ. ಸ್ವಾತಂತ್ರ್ಯ ಪೂರ್ವ ಕಾಂಗ್ರೆಸ್‌ನ ಕಟು ಟೀಕಾಕಾರರಾಗಿದ್ದ ಅಂಬೇಡ್ಕರ್ ಕಾಂಗ್ರೆಸ್‌ನ್ನು ಬಂಡವಾಳಶಾಹಿಗಳು ಮತ್ತು ದೊಡ್ಡ ಭೂಮಾಲೀಕರ ಬೆಂಬಲ ಪಡೆದ "ಬ್ರಾಹ್ಮಣ-ಬನಿಯಾಗಳ" ಒಕ್ಕೂಟವೆಂದು ಕರೆದಿದ್ದರು.

ಡಾ।। ಅಂಬೇಡ್ಕರ್ ರೈತ ಸಮುದಾಯ ಮತ್ತು ಕೃಷಿ ಕಾರ್ಮಿಕರ ಹಕ್ಕುಗಳಿಗಾಗಿ ಸಹ ತಮ್ಮ ವಿಶಿಗಳಲ್ಲಿ ಶ್ರಮಿಸಿದ್ದಾರೆ. 1938ರಲ್ಲಿ ಮುಂಬೈ ಸರ್ಕಾರ ಮಹಾರಾಷ್ಟ್ರದಲ್ಲಿದ್ದ 'The Khoti System'ನ ವಿರುದ್ಧ ಬೃಹತ್ ಪ್ರತಿಭಟನಾ ಮೆರವಣಿಗೆಗಳನ್ನು ರಾಜ್ಯಾದ್ಯಂತ ತೆಗೆದು 'The Khoti Abolition Bill' ತರುವಂತೆ ಮಾಡುವಲ್ಲಿ ಸಕ್ರಿಯ ಪ್ರಯತ್ನ ನಡೆಸಿದ್ದರು. ಈ ಕಾಯಿದೆಯ ಪ್ರಕಾರ"ಭೂಮಾಲೀಕರ ಜಮೀನುಗಳಲ್ಲಿ ಗೇಣಿದಾರರಾಗಿ ದುಡಿಯುತ್ತಿದ್ದ ರೈತರಿಗೇ ಜಮೀನು ದೊರಕಿಸಿಕೊಡುವ ಅವಕಾಶ ಮತ್ತು ಇನಾಂ ಜಮೀನುಗಳನ್ನು ಉಳುವವರಿಗೇ ಕೊಡುವ ಅವಕಾಶಗಳು ಲಭ್ಯವಾದವು. ಇದರಿಂದ ಆ ಕಾಲದಲ್ಲಿ ಪ್ರಬಲ ವಿರೋಧವನ್ನು ಎದುರಿಸಿದ್ದರು. ಜೊತೆಗೆ ಮುಂಬೈ ಪ್ರಾಂತ್ಯದಲ್ಲಿ ಸಣ್ಣ ಹಿಡುವಳಿದಾರ ರೈತರ ಮೇಲೆ ಹಾಕಿದ ಕರದಲ್ಲಿ 50 ಶೇಕಡ ವಿನಾಯ್ತಿಗಾಗಿ ಹೋರಾಟ ನಡೆಸಿದ್ದರು. ಅಂಬೇಡ್ಕರ್ ಕೇವಲ ಅಸ್ಪೃಶ್ಯರ ರಾಜಕೀಯ ಸವಲತ್ತುಗಳಿಗಾಗಿ ಹೋರಾಟ ಮಾಡಿದರೆಂದು ಮಾತ್ರ ತಿಳಿದಿರುವ ಜನರು, ಅವರ ಈ ಪ್ರಮುಖ ಘಟನೆಗಳನ್ನು ಮರೆಮಾಚುವುದು ಇತಿಹಾಸಕ್ಕೆ ಮಾಡಿದ ಅಪಚಾರವಾಗುತ್ತದೆ.

1942ರಲ್ಲಿ ಒಂದು ಪ್ರಮುಖ ಘಟನೆ ಅಂಬೇಡ್ಕರ್‌ರವರ ಹೋರಾಟಕ್ಕೆ ದೊಡ್ಡ ದಿಶೆಯನ್ನು ಹಾಕಿತ್ತು. ಅದು ಬ್ರಿಟಿಷ್ ಸೈಮನ್-ಕಮಿಷನ್ ಭಾರತಕ್ಕೆ ಭೇಟಿ ಕೊಟ್ಟಾಗ ಅಂಬೇಡ್ಕರ್ ಕಮಿಷನ್ ಜತೆ ಮಾತುಕತೆ ಮಾಡಿದಾಗ ತನ್ನ ಹೋರಾಟಕ್ಕೆ ಸಧೃಡ ದಿಶೆ ಹೇರಿಕೊಂಡಂತೆ ಕಾಣುತ್ತದೆ. ಆ ಕಾಲ ಅಂಬೇಡ್ಕರ್ "ಅಸ್ಪೃಶ್ಯರ ವಿಶೇಷ ರಾಜಕೀಯ ಸವಲತ್ತುಗಳಿಗಾಗಿ ಹೋರಾಡುತ್ತಿದ್ದ ಸಂದರ್ಭ; "ಬ್ರಿಟಿಷ್‌ರು ಮತ್ತು ಭಾರತೀಯ ಮೇಲ್ ವರ್ಗಗಳ ಮೇಲೆ ಏಕ ಕಾಲದಲ್ಲಿ ಜನಾಭಿಪ್ರಾಯ ಮತ್ತು ತನ್ನ ಜನಸಮುದಾಯಕ್ಕೆ ಶತಮಾನಗಳಿಂದ ಆದ ಅನ್ಯಾಯದ ವಿರುದ್ಧ ಸೂಕ್ತ ನ್ಯಾಯಕ್ಕಾಗಿ ಹೋರಾಡುತ್ತಿದ್ದ ಕಾಲ; ಸೈಮನ್ ಅಂಬೇಡ್ಕರ್‌ರನ್ನು ಕುರಿತು" ನೀವು ಕಾರ್ಮಿಕರನ್ನು ಪ್ರತಿನಿಧಿಸುತ್ತೀರೋ ? ಅಥವಾ Depressed Class ಗಳನ್ನು ಪ್ರತಿನಿಧಿಸುತ್ತೀರೋ ? ಎಂದು ನಿಖರವಾದ ಉತ್ತರ ಕೊಡಬೇಕೆಂದು ಒತ್ತಾಯಿಸುತ್ತಾರೆ: ಆಗ I.L.P.ಯ ನಾಯಕರಾಗಿದ್ದ ಅಂಬೇಡ್ಕರ್ "ಈ ಎರಡೂ ವರ್ಗಗಳನ್ನು ಪ್ರತಿನಿಧಿಸುತ್ತೇನೆ" ಎಕೆಂದರೆ Depressed Class ಗಳೆ ಭಾರತದ ಕಾರ್ಮಿಕರು ಎನ್ನುತ್ತಾರೆ. ಸೈಮನ್ ಈ ಎರಡು ವರ್ಗಗಳಲ್ಲಿ ಯಾವ ಸಮಸ್ಯೆಗೆ ಮಹತ್ವ ನೀಡುತ್ತಿರಿ ? ಎನ್ನುತ್ತಾರೆ. "ಶೋಷಿತ ದಲಿತ ವರ್ಗಕ್ಕೆ! ಎಂದು ಅಂಬೇಡ್ಕರ್ ಉತ್ತರಿಸುತ್ತಾರೆ: ಆ ನಂತರ ಇತಿಹಾಸದ ಒತ್ತಡದಿಂದಾಗಿ I.L.P. All India Scheduled Castes Federation ನ್ನು ಸ್ಥಾಪಿಸುತ್ತಾರೆ (1942) ಈ ಘಟನೆಗೆ ಕಾರಣ ಮತ್ತು ಒತ್ತಡವನ್ನು ಚಾರಿತ್ರಿಕ ಸಂಶೋಧನೆಗೆ ಒಳಪಡಿಸಬೇಕಾಗಿದೆ.

ಅಂಬೇಡ್ಕರ್ ನಿರಂತರವಾಗಿ ಗುಲಾಮಗಿರಿ, ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯ ವಿರುದ್ಧ ಹೋರಾಡುತ್ತಾ ಈ ವರ್ಗಕ್ಕೆ ನಾಗರೀಕ ಸವಲತ್ತು-ಸಮಾನತೆ ದೊರಕಿಸಿ ಕೊಡಲು ಶ್ರಮಿಸಿದ್ದಾರೆ. ಬಹುಮುಖ್ಯವಾಗಿ ಅಸ್ಪೃಶ್ಯ ಸಮೂಹಗಳಿಗೆ, 'ಮತದಾನದ ಹಕ್ಕು ಮತ್ತು ರಾಜಕೀಯ ಮೀಸಲಾಯಿತಿಯನ್ನು ಒದಗಿಸಿ ಕೊಟ್ಟಿದ್ದು ಮಹಾಸಾಧನೆ. ಇಂದು ಇವುಗಳ ಪರಿಣಾಮಗಳೇನೇ ಆಗಿರಲಿ. ಜಗತ್ತಿನ ಗಮನ ಸೆಳೆದಿರುವ ದಕ್ಷಿಣ ಆಫ್ರಿಕಾದ ನಮ್ಮ ಕಪ್ಪು ಸಹೋದರರ ಹೋರಾಟ ನೆನಪಿಸಿಕೊಂಡರೆ, ಇಂದಿಯಾದ ದಲಿತರು ರಾಜಕೀಯವಾಗಿ ಪ್ರಬಲವಾದ ಅಸ್ತ್ರ ಪಡೆದು ಕೊಂಡಿದ್ದಾರೆ.

ಅಂಬೇಡ್ಕರ್ ಇಂದಿಯಾದ ಸ್ವಾತಂತ್ರ್ಯ ಚಳುವಳಿಗೆ ತನ್ನದೇ ಆದ ರೀತಿಯಲ್ಲಿ ಹೋರಾಟ ನಡೆಸಿದ್ದಾರೆ. ಅವರು ಲಂಡನ್‌ನಲ್ಲಿ ನಡೆದ ಪ್ರಥಮ ಮತ್ತು ದ್ವಿತೀಯ ದುಂಡು ಮೇಜಿನ ಪರಿಷತ್‌ನಲ್ಲಿ ಬ್ರಿಟಿಷರ ದುರಾಡಳಿತವನ್ನು ತೀವ್ರವಾಗಿ ಖಂಡಿಸಿದ್ದರು. 'ಬ್ರಿಟಿಷ್ ತಪ್ಪು ಆರ್ಥಿಕ ನೀತಿಯ ಬಗ್ಗೆ ಲೇಖನಗಳನ್ನು ಬರೆದಿದ್ದರು.ಅದಷ್ಟು ಬೇಗ ಬ್ರಿಟಿಷರು

(12ನೇ ಪುಟಕ್ಕೆ)



ಅಂಬೇಡ್ಕರ್ ವಾದ ಮತ್ತು ಜಾತಿವಿನಾಶ

ಡಾ॥ ಎಸ್. ಚಂದ್ರಶೇಖರ್

ಯಾವುದೇ ಚಿಂತನೆ ಅಥವಾ ವಿಚಾರ ನಿಂತ ನೀರಲ್ಲ. ಈ ನಿಜವನ್ನು ಮನಗಾಣದೆ ಹೋದಲ್ಲಿ ಆರಾಧಿಸುವ ಯಾ ಸಾರಾ ಸಗಟು ತಿರಸ್ಕರಿಸುವ ಅಪಾಯದತ್ತ ವಾಲುವ ಸಾಧ್ಯತೆಯೇ ಹೆಚ್ಚು.

1920ರಿಂದ 60ರ ದಶಕದ ಮಧ್ಯಭಾಗದವರೆಗೂ ವಿವಾದದ ಚಂಡ ಮಾರುತಗಳನ್ನೇ ಸೃಷ್ಟಿಸಿದ ಅಂಬೇಡ್ಕರ್‌ರ ವಿಚಾರದಲ್ಲಂತೂ ಈ ಮಾತು ಇನ್ನಷ್ಟು ಸತ್ಯ. ಹೀಗಾಗುವುದು ಚಾರಿತ್ರಿಕ ದುರಂತವೇ ಸರಿ. ಇತಿಹಾಸದಿಂದ ಪಾಠ ಕಲಿಯ ಬಯಸುವವರಿಗೆ ಈ ಎರಡಕ್ಕೂ ಹೊರತಾದ ವಸ್ತುನಿಷ್ಠ ದೃಷ್ಟಿಕೋನದ ಅಗತ್ಯವಿದೆ.

ಇಂಥ ಅಪರೂಪದ ವಸ್ತುನಿಷ್ಠ ಚಿಂತಕರಲ್ಲಿ ಡಾ॥ ಎಸ್. ಚಂದ್ರಶೇಖರ್ ಪ್ರಮುಖರು.

ಡಾ॥ ಅಂಬೇಡ್ಕರರ ಚಿಂತನೆ, ಹೋರಾಟಗಳನ್ನು ತುಂಬಾ ಎಚ್ಚರದಿಂದ ಆಳವಾಗಿ ಅಧ್ಯಯನ ಮಾಡಿರುವ ಅವರು ತಮ್ಮ ಅಭಿಪ್ರಾಯಗಳನ್ನು ಇಲ್ಲಿ ಮಂಡಿಸಿದ್ದಾರೆ.

ಪಂಚಮ

ಈ ಲೇಖನ ಅಂಬೇಡ್ಕರ್ ಅವರ ಕೃತಿ-ಕಾರ್ಯಗಳ ಸಮಗ್ರ ವಿಶ್ಲೇಷಣೆಯಲ್ಲ. "ಜಾತಿನಿನಾಶ"ದ ಬಗ್ಗೆ ಅವರ ಚಿಂತನೆ, ಸಂಘಟನೆ, ಹೋರಾಟಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅವುಗಳು ಆ ನಿಟ್ಟಿನಲ್ಲಿ ಹೇಗೆ ಪ್ರಸ್ತುತ ಮತ್ತು ಸಹಾಯಕ ಎನ್ನುವ ಬಗ್ಗೆ ಮಾತ್ರ ಇಲ್ಲಿ ವಿಚಾರಮಾಡಲಾಗಿದೆ.

ಅಂಬೇಡ್ಕರ್, ಇಲ್ಲಿಗೆ ಸುಮಾರು ಐವತ್ತು ವರ್ಷಗಳ ಹಿಂದೆ "ಜಾತಿವಿನಾಶ"ದ ಬಗ್ಗೆ ಬರೆಯುತ್ತಾ ತಮ್ಮ ಚಿಂತನೆಯನ್ನು ಹೀಗೆ ದಾಖಲಿಸಿದ್ದಾರೆ.

"ಯಾವುದೂ ಎಲ್ಲಕಾಲಕ್ಕೂ ಸಲ್ಲುವುದಿಲ್ಲ. ಯಾವುದೂ ಸನಾತನವಲ್ಲ. ಎಲ್ಲವೂ ಬದಲಾಗುತ್ತಿದೆ. ಬದಲಾವಣೆ ವ್ಯಕ್ತಿಗಳ ಮತ್ತು ಸಮಾಜ ಜೀವನದ ನಿಯಮ". (1)

ಈ ನಿಯಮಕ್ಕೆ ಅಂಬೇಡ್ಕರರೂ ಸೇರಿದಂತೆ ಯಾರೂ ಹೊರತಾಗಲಿಲ್ಲ. ಹೊರತಾಗಲು ಸಾಧ್ಯವೂ ಇಲ್ಲ, ಹೋರಾಟದ ಅನುಭವ ಹರಳುಗಟ್ಟಿದಂತೆ ಅವರೂ ಬದಲಾಗುತ್ತಾ ಹೊಸದಿಕ್ಕುಗಳತ್ತ ಮುನ್ನಡೆದರು.

ಜಾತಿವಿನಾಶದ ಬಗ್ಗೆ ಆಳವಾಗಿ ಯೋಚಿಸಿದವರಲ್ಲಿ ಅಂಬೇಡ್ಕರ್ ಮೊದಲ ಭಾರತೀಯರು ಮತ್ತು ಬಹಳ ಮುಖ್ಯರು. ಇದಕ್ಕೆ ಸಂಬಂಧಪಟ್ಟ ವಿಚಾರಗಳು ಅವರ ಹಲವಾರು ಕೃತಿ–ಕಾರ್ಯಚಟುವಟಿಕೆಗಳಲ್ಲಿ ಅಡಕವಾಗಿವೆ. ಅಂದಿನ ಧಾರ್ಮಿಕ-ಸಾಮಾಜಿಕ ಪರಿಸರದಲ್ಲಿ, ಎಲ್ಲಕ್ಕೂ ಧರ್ಮಶಾಸ್ತ್ರಗಳ ಅನುಮತಿಯನ್ನೇ ಎಲ್ಲರೂ ಬಯಸುತ್ತಿದ್ದ ಸನ್ನಿವೇಶದಲ್ಲಿ ಅಂಬೇಡ್ಕರ್ ಕೂಡಾ ಆ ಪರಿಭಾಷೆಯಲ್ಲೇ ತಮ್ಮ ಚಿಂತನೆ ಹೋರಾಟವನ್ನು ರೂಪಿಸಿಕೊಳ್ಳುವುದು ಒಂದು ರೀತಿ ಅನಿವಾರ್ಯವಾಗಿತ್ತು. ಮೊದಲನೆಯದಾಗಿ ಅವರು ಹಿಂದೂ ಧರ್ಮದ ತಾತ್ವಿಕ ತಳಹದಿಯನ್ನೇ ಬದಲಿಸಬೇಕು. ಯಾಕೆಂದರೆ ಜಾತಿ, ಹಿಂದೂ ಧರ್ಮ ಶಾಸ್ತ್ರಗಳಿಂದ ಪೋಷಿತವಾಗಿದೆ, ಅವುಗಳ ಆಧಾರಗಳಾದ ಶಾಸ್ತ್ರ-ಸ್ಮೃತಿಗಳನ್ನು ತಿರಸ್ಕರಿಸಬೇಕು. ಅಂತರ್‌ಜಾತಿ ವಿವಾಹಗಳಾಗಬೇಕು. ಪೌರೋಹಿತ್ಯ ವಂಶಪಾರಂಪರ್ಯವಾಗಿರುವುದನ್ನು ತಪ್ಪಿಸಿ, ಅರ್ಹತೆಯಿರುವ ಯಾರಾದರೂ ಪುರೋಹಿತರಾಗಲು ಅವಕಾಶವಿರಬೇಕು, ಆದರೆ ಪೌರೋಹಿತ್ಯ ಸಮಾಜೀಕರಣವಾಗಬೇಕು. ಹಿಂದೂ ಧರ್ಮಗ್ರಂಥ ಒಂದೇ ಇರಬೇಕು. ಇದರ ಮೂಲಕ ಜಾತಿವಿನಾಶ ಸಾಧ್ಯ ಎಂಬ ಅಭಿಪ್ರಾಯ ಹೊಂದಿದ್ದರು. ಈ ಹಂತದಲ್ಲಿ ಅವರು ಹಿಂದೂ ಧರ್ಮದ ಚೌಕಟ್ಟಿನೊಳಗೇ ಜಾತಿವಿನಾಶಕ್ಕೆ ಅವಕಾಶವಿದೆ ಎಂದು ನಂಬಿದ್ದರು. –2

ಆದರೆ ಹಿಂದೂ ಧಾರ್ಮಿಕ ಚೌಕಟ್ಟಿನೊಳಗೆ ಸುಧಾರಣೆ ಸಾಧ್ಯವಿಲ್ಲ. ಆ ಧರ್ಮದ ಅವಿಭಾಜ್ಯ ಅಂಗವಾದ "ಜಾತಿಯ ವಿನಾಶ" ತಾವು ಅಂದು ಕೊಂಡ ರೀತಿಯಲ್ಲಿ ಸಾಧ್ಯವಿಲ್ಲವೆಂದು ಮತಾಂತರದ ಬಗ್ಗೆ ಯೋಚನೆ ಹರಿಯಬಿಟ್ಟರು. ಆಧುನಿಕ ಕಾಲದಲ್ಲಿ ಪಟ್ಟಭದ್ರರ ಹಿತರಕ್ಷಿಸುವ "ಜಾತಿಯ ವಿನಾಶ" ಸುಲಭ ಸಾಧ್ಯವಲ್ಲ ಎಂದು ಮನಗಂಡರು. ಎಲ್ಲ ಧರ್ಮಗಳಲ್ಲಿಯೂ ಏರು–ಪೇರು, ಅಸಮತೆಗಳಿವೆ ಎನ್ನುವುದನ್ನೂ ಅವರು ಗ್ರಹಿಸಿದ್ದರು. ಆದರೂ ಒಂದ ಸಾಂಸ್ಕೃತಿಕ ಧರ್ಮದ–ಅದೂ ವಿಶಾಲಾರ್ಥದಲ್ಲಿ ಹಿಂದೂ-ಸಂಸ್ಕೃತಿಯ ಚೌಕಟ್ಟಿನೊಳಗೇ ಬರುವ ಅನಿವಾರ್ಯತೆ ಇದೆ ಎಂದು ಕಡೆಯವರೆವಿಗೂ ಅವರು ತಿಳಿದಿದ್ದರು. ಆದರಿಂದಲೇ ಅವರು ಇಸ್ಲಾಂ, ಕ್ರೈಸ್ತ ಧರ್ಮಗಳು ಪರಕೀಯವೆಂದು, ಒಂದು ಹಂತದಲ್ಲಿ ಸಿಖ್‌ಧರ್ಮ ನಂತರದಲ್ಲಿ ಬೌದ್ಧಧರ್ಮದಲ್ಲಿ ಉತ್ಸಾಹ ಬೆಳೆಸಿಕೊಂಡರು. -3 ಆದರೂ ಬಹಳ ಕಾಲ ಮತಾಂತರವಾಗದೆ, ಸವರ್ಣಿಯರು, ಅಸ್ಪೃಶ್ಯರ ಬಗ್ಗೆ ತಮ್ಮ ಭಾವನೆಗಳನ್ನು ಬದಲಾಯಿಸಿಕೊಳ್ಳಬಹುದೆಂದು ಕಾದರು.



> ವಿದ್ಯಾವಂತ-ಬುದ್ಧಿವಂತರೆಲ್ಲಾ "ರಾಷ್ಟ್ರೀಯ" ಚಳವಳಿಯ ಬಗ್ಗೆ ಆಕರ್ಷಿತರಾಗಿದ್ದ ಕಾಲದಲ್ಲಿ–ಅಸ್ಪೃಶ್ಯರ ನೋವು – ಅವಮಾನಗಳ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳದೆ ಇದ್ದಾಗ ಈ ವರ್ಗದಿಂದಲೇ ಬಂದ ಅಂಬೇಡ್ಕರ್ ಈ ಅಭಾಗ್ಯರ ವಿಮೋಚನೆ ಕಡೆ ಸಹಜವಾಗಿ ಆಕರ್ಷಿತರಾದರು.

ಅಂದಿನ ಸಾಮಾಜಿಕ-ಚಾರಿತ್ರಿಕ ಪರಿಸರದಲ್ಲಿ, ಧಾರ್ಮಿಕ–ಸಾಮಾಜಿಕ ಸಮಾನತೆಯ ಗೀಳು ಅಂಬೇಡ್ಕರರಲ್ಲಿ ಅತಿಯಾಗಿ ಇದ್ದದ್ದು ಸಹಜ. ಅವರಿಗೆ ಸ್ವತಹ ಇತರರಿಂದ ಆದ ಅವಮಾನ ಮತ್ತು ಅಸ್ಪೃಶ್ಯರ ಸ್ಥಿತಿ-ಗತಿ ಅವರನ್ನು ರೊಚ್ಚಿಗೆಬ್ಬಿಸಿ ಅವರನ್ನು ಸಾಮಾಜಿಕ ಕ್ರಾಂತಿಕಾರಿಯಾಗಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ವಿದ್ಯಾವಂತ-ಬುದ್ಧಿವಂತರೆಲ್ಲಾ "ರಾಷ್ಟ್ರೀಯ" ಚಳವಳಿಯ ಬಗ್ಗೆ ಆಕರ್ಷಿತರಾಗಿದ್ದ ಕಾಲದಲ್ಲಿ–ಅಸ್ಪೃಶ್ಯರ ನೋವು-ಅವಮಾನಗಳ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳದೆ ಇದ್ದಾಗ ಈ ವರ್ಗದಿಂದಲೇ ಬಂದ ಅಂಬೇಡ್ಕರ್ ಈ ಅಭಾಗ್ಯರ ವಿಮೋಚನೆ ಕಡೆಸಹಜವಾಗಿ ಆಕರ್ಷಿತರಾದರು. "ಜಾತಿ" ಎನ್ನುವ ದೈತ್ಯನನ್ನು ಕೊಲ್ಲದ ಆರ್ಥಿಕ-ರಾಜಕೀಯ ಸುಧಾರಣೆ ಸಾಧ್ಯವಿಲ್ಲ"ವೆಂದು ಅವರು ಗುಡುಗಿದ್ದು ಈ ಹಿನ್ನೆಲೆಯಲ್ಲಿ ಅರ್ಥಪೂರ್ಣ. –4

ಆರ್ಥಿಕ ಸಮಾನತೆಯನ್ನು ಸಾಧಿಸಿದರೆ ಬೇರೆಲ್ಲಾ ಸರಿಹೋಗುತ್ತದೆ ಎನ್ನುವ ಸಮಾಜವಾದಿಗಳನ್ನು ಅವರು ಇದೇ ರೀತಿ ತರಾಟೆಗೆ ತೆಗೆದುಕೊಂಡರು. "ಆರ್ಥಿಕ ಸಮಾನತೆ ತರಲು ಅಧಿಕಾರವಿರಬೇಕು. ಈ ಅಧಿಕಾರ ಕೂಡ ದುಡಿಯುವ ವರ್ಗದ ಕ್ರಾಂತಿಯಿಂದ ಬರಬೇಕಾದದ್ದೇ. ಆದರೆ ಈ ಕ್ರಾಂತಿಯನ್ನು ಮಾಡಲು ಭಾರತದ ದುಡಿಯುವ ವರ್ಗದವರೆಲ್ಲರೂ ಜೊತೆಗೂಡುತ್ತಾರೊ ? ಬೇರೆಲ್ಲಾ ಸರಿಯಿದ್ದು ಕ್ರಾಂತಿಯ ನಂತರ ಎಲ್ಲರೂ ಸಮಾನರು, ಜಾತಿ–ವರ್ಗಭೇಧಗಳಿರುವುದಿಲ್ಲ ಎಂದಾದರೆ, ಶೋಷಿತರೆಲ್ಲರೂ ಸಮ ಸಮಾಜ ತರುವ ಈ ಕ್ರಾಂತಿಯಲ್ಲಿ ಪಾಲ್ಗೊಳ್ಳುತ್ತಾರೆ. ಆದರೆ ಕೇವಲ ಸಮಾಜವಾದಿಯೊಬ್ಬನ ಭರವಸೆಯೊಂದೇ ಇದಕ್ಕೆ ಸಾಕಾಗುವುದಿಲ್ಲ". 5–ಇದು ಅವರ ಅಭಿಪ್ರಾಯ.

ಭಾರತದ ಅಂದಿನ ಚಾರಿತ್ರಿಕ ಘಟ್ಟದಲ್ಲಿ, ಜಾತಿ ಭೇಧವನ್ನು ತೊರೆದು ಶೋಷಿತರೆಲ್ಲಾ ಒಂದಾಗುವುದು ದೂರದ ಮಾತಾಗಿತ್ತು. ಆದ್ದರಿಂದಲೇ ಅಂಬೇಡ್ಕರ್ ಸಮಾಜವಾದಿ ಕ್ರಾಂತಿಯ ಯಶಸ್ಸಿನ ಬಗ್ಗೆ ಅನುಮಾನವಿರಿಸಿ ಕೊಂಡದ್ದು ಸಹಜ. ಹಾಗೆಂದು ದುಡಿಯುವ-ಶೋಷಿತ ವರ್ಗ ಚಾರಿತ್ರಿಕ ಗತಿಯಲ್ಲಿ ಎಚ್ಚೆತ್ತು, ಶೋಷಿತರ ವಿರುದ್ಧ ಸಂಘಟಿತವಾದಾಗ ಸಮಾಜವಾದಿ ಕ್ರಾಂತಿ ಅಸಾಧ್ಯವೇದೇನೂ ಅವರು ತಿಳಿದಿರಲಿಲ್ಲ.

ದುಡಿಯುವ ವರ್ಗವನ್ನು ಬಡಿದೆಬ್ಬಿಸಿ ಅವರನ್ನು ಸಂಘಟಿಸಿ ಹೋರಾಟಕ್ಕೆ ಅಣಿ ಮಾಡುವ ದಿಸೆಯಲ್ಲಿ ಕಾರ್ಯಶೀಲರಾದರು. ಜಾಗತಿಕ ಆಗುಹೋಗುಗಳು, ಮಿಗಿಲಾಗಿ ಭಾರತದಲ್ಲಿ ಆಗುತ್ತಿದ್ದ ಬೆಳೆವಣಿಗೆಗಳಿಗೆ ತಮ್ಮನ್ನು ತಾವು ಒಡ್ಡಿಕೊಂಡರು. ಸುಧಾರಣೆ ಬಗ್ಗೆ ಬರೆಯುತ್ತಾ–ಹೋರಾಟ ಮಾಡುತ್ತಾ ಸಕ್ರಿಯ ರಾಜಕಾರಣಕ್ಕೆ ಧುಮುಕಿದರು. ಜಾತಿ ಆಧಾರಿತ ರಾಜಕಾರಣದಿಂದ ಹೆಚ್ಚೇನನ್ನೂ ಸಾಧಿಸಲು ಸಾಧ್ಯವಿಲ್ಲವೆಂದು ಅವರಿಗೆ ತಿಳಿದಿತ್ತು. ಆದ್ದರಿಂದಲೇ ಅವರು ದುಡಿಯುವ ವರ್ಗದ ಮೊದಲ ಪಕ್ಷವಾದ "ಸ್ವತಂತ್ರ ಕಾರ್ಮಿಕ ಪಕ್ಷ" ಸಂಘಟಿಸಿದರು. ಶೋಷಿತರಲ್ಲಿ ಬಹುಪಾಲುಜನ ಅಸ್ಪೃಶ್ಯ ಮತ್ತು ಕೆಳಜಾತಿಗಳಿಗೆ ಸೇರಿದವರು. ಆದ್ದರಿಂದ ಇಂಥವರಿಂದ ಕೂಡಿದ ಸಂಘಟನೆ ಮಾತ್ರ ಕ್ರಾಂತಿಕಾರಕ ಗುಣವನ್ನು ಹೊಂದಿದೆ ಎಂದು ಅವರು ವಿಶ್ಲೇಷಿಸಿದ್ದು ಸಮಂಜಸವಾಗುತ್ತದೆ.

ಸಣ್ಣರೈತರು, ರೈತಕೂಲಿಗಳು, ಗಿರಣಿ ಕಾರ್ಮಿಕರು ಮತ್ತು ದಲಿತರನ್ನು ಸಂಘಟಿಸಿದ 1937–1942 ರ ಅವಧಿಯ ಅಂಬೇಡ್ಕರ್, ಈ ನೆಲದ ಬಡಜನತೆಯ ಆಶಾಕಿರಣ. ಕಮ್ಯುನಿಷ್ಟರು ಎನಿಸಿಕೊಂಡಿದ್ದ ಕೆಲವು ಭಾರತೀಯರು ಪರಿಭಾವಿಸಲಾಗದಿದ್ದ ವೈಜ್ಞಾನಿಕ ಸತ್ಯವನ್ನು ಅಂಬೇಡ್ಕರ್ ಗ್ರಹಿಸಿದ್ದರು. ಅವರ ಮಾತುಗಳಲ್ಲಿ ಅದು ವ್ಯಕ್ತವಾಗುತ್ತದೆ.

"ಈ ದೇಶದಲ್ಲಿ ಕಮ್ಯುನಿಸ್ಟರೆಂದುಕೊಳ್ಳುವವರೆಲ್ಲರೂ ಓದಿರುವುದಕ್ಕಿಂತ ಹೆಚ್ಚಿನ ಪುಸ್ತಕಗಳನ್ನು ನಾನು ಓದಿದ್ದೇನೆ. ಅವರು ಈ ನೆಲದ ವಾಸ್ತವತೆ

ಯಿಂದ ಬಹಳ ದೂರದಲ್ಲಿದ್ದಾರೆ. ಈ ಜಗತ್ತಿನಲ್ಲಿ ಎರಡು ವರ್ಗಗಳಿವೆ: ಶ್ರೀಮಂತರು–ಬಡವರು. ಶೋಷಕರು–ಶೋಷಿತರು. ಮಧ್ಯಮವರ್ಗವೂ ಇದೆ. ಆದರೆ ಅದು ತೀರಾ ಸಣ್ಣದು. ಶ್ರೀಮಂತರ ಸಿರಿತನ ಬಡವರ ಬವಣೆಯಲ್ಲಿದೆ. ಇದನ್ನು ನಿವಾರಿಸಬೇಕಾದರೆ ದುಡಿಯುವವರೆಲ್ಲ ಜಾತಿ-ಮತಗಳನ್ನು ಧಿಕ್ಕರಿಸಿ ಸಂಘಟಿತರಾಗಬೇಕು. ಇಂಥ ಸಂಘಟನೆ ಮಾತ್ರ ಬಡವರನ್ನು ಪ್ರತಿನಿಧಿಸಲು ಯೋಗ್ಯ. ಹಾಗಾದಾಗ ಎಲ್ಲರೂ ಎಲ್ಲವನ್ನು ಹಂಚಿಕೊಳ್ಳಬಹುದು. ಆಗ ಮಾತ್ರ ಸಂಪತ್ತನ್ನು ಉತ್ಪಾದಿಸುವ ಜನ ಹಸಿವೆಯಿಂದ ಸಾಯುವುದಿಲ್ಲ".

ಅಂಬೇಡ್ಕರ್ ಹಲವಾರು ಪ್ರದೇಶಗಳನ್ನು ಸಂಚರಿಸಿ ರೈತ-ಕಾರ್ಮಿಕರನ್ನು ಸಂಘಟಿಸಲು ಯತ್ನಿಸಿದರು. ಆತತರುಣದಲ್ಲೇ ಅವರು ಇತರ ವಾಮವಾದಿಗಳಾದ ಇಂದಿಗೂ ಬದುಕಿರುವ ಎಸ್.ಎ. ಡಾಂಗೆ, ರಣದಿವೆ ಮುಂತಾದವರ ಜೊತೆಯಲ್ಲಿ ಮಹಾ ಹೋರಾಟಗಳನ್ನು ನಡೆಸಿದರು. ಈ ಘಟ್ಟ ಅಂಬೇಡ್ಕರ್ ದಟ್ಟವಾಗಿ ಬದುಕಿದ ಕಾಲ. ಈ ಹೋರಾಟ ಮಾಡುತ್ತಲೇ ಅವರು ಸಾಮಾಜಿಕ-ಸಾಂಸ್ಕೃತಿಕ ಸ.ಧಾರಣೆಗೂ ಅಡಿಪಾಯ ಹಾಕುತ್ತಿದ್ದರು. ಸಮಾಜವಾದಿ ವ್ಯವಸ್ಥೆಯ ನಿರ್ಮಾಣಕ್ಕೆ ಪೂರ್ವಭಾವಿಯಾಗಿ, ಸಾಂಸ್ಕೃತಿಕ ಕ್ರಾಂತಿ ಆಗಬೇಕಾದ ಅನಿವಾರ್ಯತೆಯನ್ನು ಅವರು ಈ ಮೂಲಕ ಒತ್ತಿ ಹೇಳುತ್ತಿದ್ದರು. ಬಹುಸಂಖ್ಯಾತರು ದಲಿತರು-ಶೋಷಿತರು ಆದ್ದರಿಂದ, ಎಲ್ಲರೂ ಎಲ್ಲ ರಂಗಗಳಲ್ಲಿಯೂ ಸಮಾನತೆಯನ್ನು ಒಪ್ಪಿಕೊಳ್ಳುವಂತ ಪರಿಸರ ಮೊದಲು ನಿರ್ಮಾಣವಾಗಬೇಕು ಎಂದೇ ಅವರು ಪ್ರತಿಪಾದಿಸುತ್ತಿದ್ದರು. ಅಂದರೆ ಭಾರತದಲ್ಲಿ ಜಾತಿ-ಮತಗಳ ಮೇಲು-ಕೀಳು ಭಾವನೆಗಳನ್ನು ಹೋಗಲಾಡಿಸ ಬಲ್ಲ ಒಂದು ಸಾಮಾಜಿಕ-ಸಾಂಸ್ಕೃತಿಕ ಕಾಂತಿಯಾಗಬೇಕು ಎನ್ನುವ ಅರ್ಥ. ಇದನ್ನೇ ಬೇರೆ ಮಾತುಗಳಲ್ಲಿ ಹೇಳಬೇಕಾದರೆ ಸಮಸಮಾಜವನ್ನು ಒಪ್ಪಿಕೊಳ್ಳಲು ಪೂರ್ವಭಾವಿಯಾಗಿ ಸಾಂಸ್ಕೃತಿಕ ಕ್ರಾಂತಿ (*Cultural Revolution*) ಯಾಗಬೇಕು ಎಂದು. ಅದನ್ನು ಚೀನಾದಲ್ಲಿ ನಂತರ ಸಾಧಿಸಿದ ಮಾವೋತ್ಸೆ ತುಂಗ ಮಾತುಗಳನ್ನೇ ಬಳಸಬೇಕು.

ಭಾರತದ ಅಂದಿನ ಸಂಕ್ರಮಣ ಕಾಲದಲ್ಲಿ ಅಂಬೇಡ್ಕರರ ಈ ಮಾತು-ಕೆಲಸಗಳು ಸಮಾಜವಾದಿಗಳನ್ನು-ಕಮ್ಯುನಿಷ್ಟರನ್ನು ಹೆಗಲು ಮುಟ್ಟಿ ನೋಡಿಕೊಳ್ಳುವಂತೆ ಮಾಡಿದ್ದರೆ ಆಶ್ಚರ್ಯವಿಲ್ಲ. ಕಾಂಗ್ರೆಸ್ ಬಂಡವಾಳವಾದಿಗಳು-ಇಂಗ್ಲಿಷ್ ಸಾಮ್ರಾಜ್ಯವಾದಿಗಳು ಅಂಬೇಡ್ಕರ್ ಒಬ್ಬ ಮಹಾನ್ ಸಾಮ್ಯವಾದಿ ನಾಯಕರಾಗುತ್ತಾರೆ ಎಂದು ಹೆದರಿದ್ದೂ ಉಂಟು. ಹೀಗೆಯೇ ಮುಂದುವರೆದಿದ್ದರೆ ಅಂಬೇಡ್ಕರ್ ನಿಶ್ಚಿತವಾಗಿಯೂ ಈ ನೆಲದ ಒಬ್ಬ ಮಹಾನ್ ರೈತ-ಕಾರ್ಮಿಕ ನಾಯಕರಾಗಿ ಬೆಳೆದು, ಸತ್ವಯುತ ಸಮಾಜವಾದಿ ಪಕ್ಷಕಟ್ಟಿ ವೈಜ್ಞಾನಿಕ ಸಮಾಜವಾದವನ್ನು ಜಾರಿಗೆ ತರುತ್ತಿದ್ದರು ಅನಿಸುತ್ತದೆ. ಮತ್ತು ಜಾತಿವಿನಾಶ ಮಾಡುವುದರಲ್ಲಿಯೂ ಯಶಸ್ಸು ನಮ್ಮದಾಗಿರುತ್ತಿತ್ತು. ಪಟ್ಟಭದ್ರರ, ಶೋಷಕರ ಆಟ ನಡೆಯುತ್ತಿರಲಿಲ್ಲಕೂಡ.



ಬಹುಸಂಖ್ಯಾತರು ದಲಿತರು – ಶೋಷಿತರು ಆದ್ದರಿಂದ ಎಲ್ಲರೂ ಎಲ್ಲ ರಂಗಗಳಲ್ಲಿಯೂ ಸಮಾನತೆಯನ್ನು ಒಪ್ಪಿಕೊಳ್ಳುವಂತ ಪರಿಸರ ಮೊದಲು ನಿರ್ಮಾಣವಾಗಬೇಕು ಅವರು ಪ್ರತಿಪಾದಿಸುತ್ತಿದ್ದರು. ಅಂದರೆ ಭಾರತದಲ್ಲಿ ಜಾತಿ–ಮತಗಳ ಮೇಲು-ಕೀಳು ಭಾವನೆಗಳನ್ನು ಹೋಗಲಾಡಿಸಬಲ್ಲ ಒಂದು ಸಾಮಾಜಿಕ–ಸಾಂಸ್ಕೃತಿಕ ಕಾಂತಿಯಾಗಬೇಕು.

ಹಾಗೆ ನೋಡಿದರೆ ಅಂಬೇಡ್ಕರ್‌ರ ಮುಂದಿನ ಹಂತದ ರಾಜಕೀಯ ತಿರುವಿಗೆ, ಮತ್ತು ಭಾರತೀಯ ದುಡಿಯುವ ಜನ ಒಬ್ಬ ಮಹಾನ್ ಸಂಘಟಕನನ್ನು ಕಳೆದುಕೊಳ್ಳುವುದಕ್ಕೆ ಕಾರಣರಾದದ್ದು ಬ್ರಿಟಿಷ್ ಮತ್ತು ಭಾರತೀಯ ಪಟ್ಟಭದ್ರ ಹಿತಾಸಕ್ತಿಗಳೇ ಕಾಂಗ್ರೆಸ್ಸಿಗರು. ಸಮಾಜವಾದಿಗಳು ಅಂಬೇಡ್ಕರರ ಬಗೆಗೆ ತೋರಿದ ಅಂಕೆ-ಶಂಕೆಗಳು. ಮತ್ತು ಬ್ರಿಟಿಷ್ ಸಾಮ್ರಾಜ್ಯವಾದಿಗಳ ಒಡೆದು ಆಳುವ ನೀತಿಯ ಕತ್ತರಿಯಲ್ಲಿ ಸಿಕ್ಕಿಕೊಂಡ ಅಂಬೇಡ್ಕರರ ರಾಜಕೀಯ ಕವಲೊಡೆಯಿತು.

ಮತಾಂತರದ ಬಗ್ಗೆ 1929 ರಷ್ಟು ಹಿಂದೆಯೇ ಅವರು ಮಾತನಾಡಿದರೂ ಸ್ವತಂತ್ರ ಕಾರ್ಮಿಕ ಪಕ್ಷದ ನೇತಾರರಾಗಿದ್ದ ಸುಮಾರು 5ವರ್ಷ ಅವರು ಆ ಬಗ್ಗೆ ನಿರ್ಲಕ್ಷ್ಯದಿಂದ ಇದ್ದದ್ದು ಗಮನಾರ್ಹ. ರೈತ-ಕಾರ್ಮಿಕರ ಸಂಘಟನೆಯಲ್ಲಿ, ಬಂಡವಾಳಗಾರರ-ಸೋಗಲಾಡಿತನದ ವಿರುದ್ಧದ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಈ ಅವಧಿಯಲ್ಲಿಯೇ, ಮಹರ್ ವತನ್ ಕಾಯಿದೆ, ಖೋಟಿ ಪದ್ಧತಿಯ ನಿರ್ಮೂಲನಕ್ಕಾಗಿ ಅಂದರೆ, ದಲಿತರಿಗೆ ಭೂಮಿಯನ್ನು ದಕ್ಕಿಸಿಕೊಡಲು ಚರಿತ್ರಾರ್ಹ ಹೋರಾಟ ನಡೆಸಿದರು. 8 ಕ್ರಾಂತಿಕಾರಿ ಅಂಬೇಡ್ಕರ್ ಉತ್ಕಟವಾಗಿ ಬದುಕಿದ್ದ ಹಂತ ಇದು.

ಜಾಗತಿಕ ರಾಜಕಾರಣ, ಎರಡನೆಯ ಮಹಾಯುದ್ಧ ಮತ್ತು ದರಿಂದ ಭಾರತದ ಮೇಲಾದ ಪ್ರಭಾವದ ತೀವ್ರತೆಯಲ್ಲಿ ರಾಷ್ಟ್ರೀಯ-ಅಂತರರಾಷ್ಟ್ರೀಯ ಬಂಡವಳಿಗರು ಅಂಬೇಡ್ಕರರನ್ನು ರೈತ ಕಾರ್ಮಿಕರ ವಿಶಾಲ ಪ್ರಪಂಚದಿಂದ ದೂರಸೆಳೆಯುವಲ್ಲಿ ಸಮರ್ಥರಾದರು. ದಲಿತ-ಮುಂದುವರಿದ ದಲಿತರು ಕಾಂಗ್ರೆಸ್ಸಿನ 'ಭಾರತ ಬಿಟ್ಟು ತೊಲಗಿ' ಚಳುವಳಿಯಿಂದ ಉದ್ಭವಿಸಿದ ಸಂವಿಧಾನಾತ್ಮಕ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳಲ ಬಂದ ಕ್ರಿಪ್ಸ್, ಅಂಬೇಡ್ಕರರನ್ನೂ 'ನೀವು ರೈತ ಕಾರ್ಮಿಕ ನಾಯಕರೋ-ಅಸ್ಪೃಶ್ಯರ ನಾಯಕರೋ, ನಿಮ್ಮ ಪಕ್ಷದ ಬಲವೆಷ್ಟು ಎಂಬ ಜಾಣಕುಟಿಲ ಪ್ರಶ್ನೆ ಕೇಳಿ ಅವರಲ್ಲಿ ಗೊಂದಲ ಉಂಟುಮಾಡಿದನು. ಹಲವಾರು ಅಸ್ಪೃಶ್ಯನಾಯಕರೂ ಅಂಬೇಡ್ಕರರ ನಾಯಕತ್ವವನ್ನು ಪ್ರಶ್ನಿಸುತ್ತಿದ್ದರು. ಯುದ್ಧದ ನಂತರ ಭಾರತಕ್ಕೆ ಸ್ವಾತಂತ್ರ್ಯ ಕೊಡುವುದು ಅನಿವಾರ್ಯವೆಂಬುದು ಖಚಿತವಾಗಿತ್ತು. ಬಲಿಷ್ಠವಾಗಿದ್ದ ಕಾಂಗ್ರೆಸ್ಸಿಗರ ಕೈಗೆ ಅಧಿಕಾರ ಹೋಗುತ್ತದೆ ಎನುವುದೂ ಅಷ್ಟೇ ಖಚಿತವಾಗಿತ್ತು. ಅಂಬೇಡ್ಕರರ ಬೇಡಿಕೆಗಳಿಗೆ ಯಾವ ಗಮನವನ್ನೂ ಕೊಡದ ಕ್ರಿಪ್ಸ್‌ನ ಶಿಫಾರಸುಗಳು, ಸ್ವತಂತ್ರ್ಯ ಭಾರತದಲ್ಲಿ ದಲಿತರ ಭವಿಷ್ಯದ ಬಗ್ಗೆ ಅವರಲ್ಲಿ ಉದ್ವಿಗ್ನತೆಯುಂಟು ಮಾಡಿದವು.

ಬ್ರಿಟಿಷ್ ಮಿತ್ರ ಪಕ್ಷಗಳ ಯುದ್ಧ ಪ್ರಯತ್ನಗಳಲ್ಲಿ, ಅಂಬೇಡ್ಕರರ ಜನಪ್ರಿಯತೆಯನ್ನು ದುಡಿಸಿಕೊಂಡು ಕಾಂಗ್ರೆಸ್ಸಿನ ಅಸಹಕಾರವನ್ನು ಸರಿದೂಗಿಸಿಕೊಳ್ಳಲೆಂಬಂತೆ, ಆವರನ್ನು 'ರಕ್ಷಣಾ ಸಲಹಾ ಸಮಿತಿ'ಗೆ ನಂತರ 'ಕಾರ್ಮಿಕ ಮಂತ್ರಿ'ಯಾಗಿ ಬ್ರಿಟಿಷ್ ಭಾರತ ಸರ್ಕಾರ ಆಯ್ಕೆ ಮಾಡಿತು. ಇಂಥ ಗೊಂದಲಮಯ ಸಂಕೀರ್ಣ ರಾಜಕೀಯ ಘಟ್ಟದಲ್ಲಿ ಅಂಬೇಡ್ಕರರ ದಾರಿ ಮತ್ತು ಅದರ ಜೊತೆಗೆ ದಲಿತ–ಶೋಷಿತ ವರ್ಗದ ಹೋರಾಟದ ದಾರಿಯೂ ಕವಲೊಡೆಯಿತು. ತಾವು ತೀವ್ರವಾಗಿ ಬಯಸುತ್ತಿದ್ದ ಅಸ್ಪೃಶ್ಯರ ವಿಮೋಚನೆಗಾಗಿ ಸಿಕ್ಕ ಅಧಿಕಾರವನ್ನು ಉಪಯೋಗಿಸಿಕೊಳ್ಳಲು ಅವರು ತೀರ್ಮಾನಿಸಿದರು. ಸರ್ಕಾರ ಅವರನ್ನು ಮಂತ್ರಿಯಾಗಿ ಆಯ್ಕೆ ಮಾಡಿದ್ದು 2 ಜುಲೈ 1942. ತಮ್ಮ ಕೆಲವು ಸಂಗಡಿಗರೊಂದಿಗೆ ಚರ್ಚಿಸಿ, ‹ಸ್ವತಂತ್ರ ಕಾರ್ಮಿಕ ಪಕ್ಷ›ವನ್ನು ವಿಸರ್ಜಿಸಿ 'ಅಖಿಲ ಭಾರತ ಪರಿಶಿಷ್ಟ ವರ್ಗಗಳ ಒಕ್ಕೂಟ'ವನ್ನು ಸ್ಥಾಪಿಸಿದರು.

ಕಾರ್ಮಿಕ ಮಂತ್ರಿಯಾಗಿ ಕನಿಷ್ಟ ವೇತನ, ಸಂಬಳದೊಡನೆ ರಜೆ ಮುಂತಾದ ಹಲವಾರು ಕಾರ್ಮಿಕ ಕಲ್ಯಾಣ ಕಾರ್ಯಕ್ರಮಗಳನ್ನೂ ಅವರು ಕೈಗೊಂಡರು. ಆದರೆ ಅವರು ವಿಶಾಲಾರ್ಥದಲ್ಲಿ ರೈತ–ಕಾರ್ಮಿಕರ ನಾಯಕರಾಗಿ ಉಳಿಯುವುದು ಸಾಧ್ಯವಾಗಲಿಲ್ಲ. ರೈತ ಕಾರ್ಮಿಕರ ಬೆಂಬಲ ಇಳಿಮುಖವಾಗುತ್ತಿದ್ದ ಕುರುಹಾಗಿ 1946ರ ಚುನಾವಣೆಯಲ್ಲಿ ಅವರ ಪಕ್ಷ ಸೋಲು ಅನುಭವಿಸಿತು. ಸಂವಿಧಾನ ಘಟನಾ ಸಭೆಗೆ, ಮುಸ್ಲಿಂ ಲೀಗ್‌ನ ಬೆಂಬಲದಿಂದ ಬಂಗಾಳದಿಂದ ಅಂಬೇಡ್ಕರ್ ಆಯ್ಕೆಯಾದರು. ಆದರೆ ದೇಶದ ವಿಭಜನೆಯಿಂದ ಸದಸ್ಯತ್ವ ಕಳೆದುಕೊಂಡರು. ಆವರು ಯಾರನ್ನು ವಿರೋಧಿಸುತ್ತಿದ್ದರೋ ಅಂಥ ಕಾಂಗ್ರೆಸ್ಸಿಗರ ಔದಾ

ರ್ಥದ ಉರುಳಿಗೆ ಸಿಲುಕಿಕೊಂಡು, ಅವರ ಬೆಂಬಲದಿಂದಲೇ ಮುಂಬೈನಿಂದ ಮರು ಆಯ್ಕೆಯಾಗಬೇಕಾಯಿತು; ಬಹುಶಃ 1942ರಲ್ಲಿ ಅವರಲ್ಲಿ ಆದ ಗೊಂದಲದ ಫಲ ಇದು. ಆದರೂ ಧೃತಿಗೆಡದೆ ಕೊನೆವರೆಗೂ ಸಿಕ್ಕ ಅವಕಾಶಗಳನ್ನು ಉಪಯೋಗಿಸಿಕೊಂಡು ದಲಿತರಿಗೆ ಕೈಲಾದಷ್ಟು ಸವಲತ್ತುಗಳನ್ನು ಗಳಿಸಿಕೊಡಲು ಯತ್ನಿಸಿದರು. ಸಂವಿಧಾನ ರಚನಾ ಸಮಿತಿಯ ಸದಸ್ಯತ್ವವನ್ನಾಗಲೀ, ಅದರ ಅಧ್ಯಕ್ಷತೆಯನ್ನಾಗಲೀ, ನೆಹ್ರೂ ಮಂತ್ರಿ ಮಂಡಲದಲ್ಲಿ ಮಂತ್ರಿ ಪದವಿಯನ್ನಾಗಲೀ ಒಪ್ಪಿಕೊಂಡದ್ದನ್ನೂ ಈ ಹಿನ್ನೆಲೆಯಲ್ಲಿ ಗಮನಿಸುವುದು ಅರ್ಥಪೂರ್ಣ.

ಎಲ್ಲ ಅಡೆ-ತಡೆಗಳನ್ನೂ ಸಹಿಸಿಕೊಂಡು, ಅವಕಾಶವಿದ್ದಷ್ಟು ಕೆಲಸ ಮಾಡಿ, ಉಸಿರು ಕಟ್ಟಿಸುವ ವಾತಾವರಣದಿಂದ ಹೊರ ಬಂದರು. ತಾವು ಮಾಡಿದ ತಪ್ಪಿನ ಅರಿವಾದಂತೆ ಮತ್ತೆ ವಿಶಾಲ ತಳಹದಿಯ ಎಲ್ಲ ಹಿಂದುಳಿದ-ದಲಿತರ ಪಕ್ಷವೊಂದನ್ನು ಕಟ್ಟಲು ತೀರ್ಮಾನಿಸಿದರು. ಸಮಾಜ ವಾದಿಗಳಿಗೆ ಸಹಕಾರ ಹಸ್ತ ನೀಡಿದರು. ಅವರ ಹಲವಾರು ಗೆಲುವು-ಸೋಲುಗಳು ಅವರನ್ನು ಜರ್ಝರಿತರನ್ನಾಗಿಸಿದವು. ಮೂಲತಃ ಅಂಬೇಡ್ಕರ್ ಧಾರ್ಮಿಕ ಮನೋವೃತ್ತಿಯವರು. ಹೀಗಾಗಿ ಅವರ ಮನಸ್ಸು ಆಧ್ಯಾತ್ಮದತ್ತವಾಲಿತು. ಬೌದ್ಧ ಧರ್ಮ ಅವರನ್ನು ಬಲವಾಗಿ ಸೆಳೆಯಲಾರಂಭಿಸಿತು. ಜಾತಿ ವಿನಾಶದ ಆಶಗಾಗಿ ಅವರ ಮತಾಂತರುಗೊಂಡರು ಜಾತಿ ವಿನಾಶಕ್ಕೆ ಬೌದ್ಧ ಧರ್ಮ ಸಹಾಯಕವಾಗಬಲ್ಲದು ಎಂಬ ಆಸೆ ಅವರದು.

ಖಾಸಗಿ ಆಸ್ತಿ ಮತ್ತು ಹಕ್ಕುದಾರಿಕೆಯೇ ಶೋಷಣೆಯ ಮೂಲವೆಂಬ ಕಾರ್ಲ್‌ಮಾರ್ಕ್ಸ್‌ರ ತತ್ವವನ್ನು ಅಂಬೇಡ್ಕರ್ ಒಪ್ಪಿದ್ದರು. 'ಎಲ್ಲ ಶೋಷಿತರ ಒಳಿತಿಗೆ ಮದ್ದು ಮಾರ್ಕ್ಸ್‌ವಾದ' ಎಂದೇ ಅವರ ಮತ. ಅದೊಂದು ಚೈತನ್ಯಶೀಲ ವಾದ, ಜಡವಾದವಲ್ಲವೆಂದು ಅವರ ಅಚಲ ನಂಬಿಗೆಯಾಗಿತ್ತು. ಬಡತನ ವೈಭವೀಕರಿಸುವುದನ್ನೂ ಆದರ್ಶೀಕರಿಸುವುದನ್ನೂ ಖಂಡಿಸಿ, ಬಡತನದ ವಿರುದ್ಧ ನಿರಂತರ ಹೋರಾಟ ಆಗತ್ಯವೆಂದು ಅವರು ಸಾರಿ ಸಾರಿ ಹೇಳುತ್ತಿದ್ದರು. ಆರ್ಥಿಕ ಸಂಬಂಧಗಳು ಎರಡು ತತ್ವಗಳ ತಳಹದಿಯ ಮೇಲೆ ರೂಪಿತವಾಗಬೇಕು. ಒಂದು ಸರ್ಕಾರಿ ಸಮಾಜವಾದ ಎರಡು; ಸಂಸದೀಯ ಪ್ರಜಾಸತ್ತೆ- ಸಂವಿಧಾನನಿಯಮ. ಬಡತನ. ಅಸಮಾನತೆಗಳನ್ನು ಹೋಗಲಾಡಿಸಲು "ಸರ್ಕಾರಿ ಸ್ವಾಮ್ಯ" (State Socialism) ಅನಿವಾರ್ಯ. ಭೂ ಒಡೆತನ, ಭಾರಿ ಕೈಗಾರಿಕೆ, ವಿಮಾ ಸಂಸ್ಥೆಗಳು ಪೂರ್ಣವಾಗಿ ಸರ್ಕಾರಿ ಸ್ವಾಮ್ಯಕ್ಕೆ ಒಳಪಟ್ಟಿರಬೇಕು ಎಂದೇ ಅವರ ಖಚಿತ ನಿಲುವು. ಆದರೂ ಬಹುಶಃ ಅವರ ಮೇಲಿನ ಪಾಶ್ಚಾತ್ಯ ಉದಾರವಾದಿ ಪ್ರಭಾವ "ಖಾಸಗಿ ಆಸ್ತಿ" ಇರಬೇಕೆಂದೇ ನಂಬಿಸಿತ್ತು.

ಆಧುನಿಕ ಕಾಲದಲ್ಲಿ ಜಾತಿ ಪ್ರಜ್ಞೆಯು, ಆರ್ಥಿಕ ಪ್ರಗತಿ, ಉತ್ಪಾದನೆಗಳನ್ನೂ ಕುಂಠಿತಗೊಳಿಸುತ್ತದೆ; ಸಾಮೂಹಿಕ ಉತ್ಪಾದನೆಗೆ ಅಡ್ಡಿಯುಂಟುಮಾಡುತ್ತದೆ. ಜಾತಿ ಮತ್ತು ಆರ್ಥಿಕ ಪ್ರಗತಿ ಪರಸ್ಪರ ವಿರುದ್ಧವಾದವು. ಆರ್ಥಿಕ ಪ್ರಗತಿಯಾಗಬೇಕಾದರೆ

ಪಂಚಮ



ಡಾ|| ಬಿ.ಆರ್. ಅಂಬೇಡ್ಕರ್
ಜನ್ಮದಿನ ವಿಶೇಷಾಂಕ

ಆಧುನಿಕ ಕಾಲದಲ್ಲಿ ಜಾತಿ ಪ್ರಜ್ಞೆಯು, ಆರ್ಥಿಕ ಪ್ರಗತಿ, ಉತ್ಪಾದನೆಗಳನ್ನೂ ಕುಂಠಿತಗೊಳಿಸುತ್ತದೆ. ಸಾಮೂಹಿಕ ಉತ್ಪಾದನೆಗೆ ಅಡ್ಡಿಯುಂಟು ಮಾಡುತ್ತದೆ. ಜಾತಿ ಮತ್ತು ಆರ್ಥಿಕ ಪ್ರಗತಿ ಪರಸ್ಪರ ವಿರುದ್ಧವಾದವು. ಆರ್ಥಿಕ ಪ್ರಗತಿಯಾಗಬೇಕಾದರೆ ಜಾತಿ ಹೋಗಲೇಬೇಕು.

ಜಾತಿ ಹೋಗಲೇಬೇಕು. ಸಮಾಜವಾದವೆಂದರೆ ಸಾಮೂಹಿಕ ಕಾರ್ಯಾಚರಣೆ ಆದರೆ ಅಂದಿನ ಸಮಾಜ ಇಂಥದನ್ನು ಆಗಗೊಡುವಂಥದ್ದಾಗಿರಲಿಲ್ಲ. ಆದ್ದರಿಂದಲೇ ಮೊದಲು ಸಾಮಾಜಿಕ-ಸಾಂಸ್ಕೃತಿಕ ಸುಧಾರಣೆಯಾಗಬೇಕು, ಇದನ್ನು ತಪ್ಪಿಸುವುದು ಸಾಧ್ಯವಿಲ್ಲ. ಸಾಮಾಜಿಕ ದೋಷಗಳ ನಿವಾರಣೆ ಎಲ್ಲರ ಮೊದಲ ಕರ್ತವ್ಯವಾಗಬೇಕು ಎಂದೇ ಅವರು ಒತ್ತಿ ಹೇಳುತ್ತಿದ್ದರು.

ಸಾಮಾಜಿಕ ಶೋಷಣೆಗೆ ಪರ್ಯಾಯವಾಗಿ ಅಂಬೇಡ್ಕರ್ ಬೌದ್ಧಧರ್ಮವನ್ನು ಒಪ್ಪಿಕೊಂಡದೂ ಅವರ ಅಸಮತೆ-ಶೋಷಣೆಗಳನ್ನು ಹೋಗಲಾಡಿಸುವ ಕೆಲಸದ ಅಂಗವಾಗಿಯೇ? ಬೌದ್ಧಧರ್ಮವನ್ನು ಅವರು ಅರ್ಥೈಸಿದ್ದೂ ಈ ಹಿನ್ನೆಲೆಯಲ್ಲಿಯೇ. ಶೋಷಣೆ ಯೆಂಬ ಪದ ಬಳಸದಿದ್ದರೂ ಬುದ್ಧನು ಪ್ರಪಂಚದಲ್ಲಿ 'ದುಃಖ'ವಿದೆ ಎಂದು ಹೇಳಿದ. 'ದುಃಖ' ಎನ್ನುವ ಪದವನ್ನು ಬುದ್ಧನು 'ಆಸ್ತಿ' ಎಂಬ ಅರ್ಥದಲ್ಲಿಯೇ ಬಳಸಿದ್ದಾನೆ. ಯಾವ ಬೌದ್ಧಭಿಕ್ಷುವು ಖಾಸಗಿಆಸ್ತಿಯನ್ನು ಹೊಂದಿರಬಾರದು ಎಂದೇ ವಿಧಿಸುತ್ತಾನೆ.

ಕಾರ್ಲ್‌ಮಾರ್ಕ್ಸ್‌ನೂ ಶೋಷಣೆಯ ನಿರ್ಮೂಲನೆಗೆ ಉತ್ಪಾದನಾ ಅಂಗಗಳ ಮೇಲೆ ಸರ್ಕಾರಿ ಸಾಮ್ಯವಿರಬೇಕೆನ್ನುತ್ತಾನೆ. ಖಾಸಗಿ ಆಸ್ತಿಯ ಬಗೆಗಿನ ನಿಯಮಗಳು ಬುದ್ಧನ ತತ್ವಗಳಲ್ಲಿ ಅಡಕವಾಗಿದೆ. ದುಃಖ ನಿವಾರಣೆಗೆ, ಅಂದರೆ ಖಾಸಗಿ ಆಸ್ತಿಯ ನಿರ್ಮೂಲನ ಮಾಡಿ, ಶೋಷಣೆ ತಪ್ಪಿಸಲು

ಮಾನವಜನಾಂಗ, ಮುದಿನ ಪೀಳಿಗೆಯು ಸಮಯಕ್ಕಾದರೂ ಬುದ್ಧನನ್ನಾಗಲಿ ಮಾರ್ಕ್ಸ್‌ವಾದವನ್ನಾಗಲಿ ಒಪ್ಪಬೇಕಾದದ್ದು ಅನಿವಾರ್ಯವೆಂದೇ ಅವರ ಖಚಿತ ಅಭಿಪ್ರಾಯವಾಗಿತ್ತು.[12] ಹಾಗೆಯೇ ಸಂಸದೀಯ ಪ್ರಜಾಸತ್ತೆಯ ಬಗ್ಗೆಕೂಡಾ ಅಂಬೇಡ್ಕರರ ನಿಲುವು ಸ್ಪಷ್ಟ. ಸಂಸದೀಯ ಪ್ರಜಾಸತ್ತೆ ಕೇವಲ ಒಂದು ರೀತಿಯ ಸರ್ಕಾರವಲ್ಲ. ಅದೇ ಬದುಕು. ಒಂದು ಸಾಮಾಜಿಕ ಸಂಘಟನೆ.[13] ಬಡತನ, ಅನರಕ್ಷತೆ, ಜಾತಿಆಧಾರಿತ ಅಸಮತೆ, ಜನತಂತ್ರದ ಶತ್ರುಗಳು; ಪ್ರಜಾಸತ್ತೆ ಯಶಸ್ವಿಯಾಗಬೇಕಾದರೆ ಇವುಗಳು ನಿರ್ಮೂಲನವಾಗಬೇಕು. ಇಲ್ಲದಿದ್ದರೆ ಶೋಷಿತರು ವ್ಯವಸ್ಥೆಯ ವಿರುದ್ಧ ಬಂಡೇಳುತ್ತಾರೆ. ಭಾರತದಲ್ಲಿ ಸಂಸದೀಯ ಜನತಂತ್ರ ವಿಫಲವಾದರೆ "ಅದರ ಫಲಿತಾಂಶ, ಕ್ರಾಂತಿ, ಅರಾಜಕತೆ, ಕಮ್ಯುನಿಸಂ. ಇದು ಅಂಬೇಡ್ಕರ್ ಕಂಡ ಭವಿಷ್ಯತ್ ಸತ್ಯ.

ಅಂಬೇಡ್ಕರರು ಜಾತಿವಿನಾಶ-ಸಮಾಜವಾದಿ ಕ್ರಾಂತಿಗಳ ಬಗ್ಗೆ ಮಾತನಾಡುತ್ತಿದ್ದಾಗ ಭಾರತದಲ್ಲಿ ಬಂಡವಾಳವಾದಿ ಶೋಷಣೆ ಇನ್ನೂ ತೀವ್ರವಾಗಿರಲಿಲ್ಲ. ಶೋಷಿತರೆಲ್ಲ ಒಗ್ಗಟ್ಟಾಗಬೇಕೆಂದು ಎಚ್ಚೆತ್ತಿರಲಿಲ್ಲ. ಅಂಬೇಡ್ಕರ್ ಈ ಎಚ್ಚರ ಮೂಡಿಸಲೆಂದೇ ಸ್ವತಂತ್ರ ಕಾರ್ಮಿಕ ಪಕ್ಷ ಕಟ್ಟಿ, ದುಡಿಯುವವರನ್ನೆಲ್ಲಾ ಸಂಘಟಿಸಿ ಹೋರಾಟ ನಡೆಸಿದರು. ಅವರು ಸಮಾಜವಾದಿ ಕ್ರಾಂತಿಯ ಬಗ್ಗೆ ವ್ಯಕ್ತಪಡಿಸಿದ ಅನುಮಾನಗಳು ಅಂದಿನ ಚಾರಿತ್ರಿಕ ಘಟ್ಟದಲ್ಲಿ ಸಕಾರಣವಾಗಿಯೇ ಇದ್ದವು. ಅಂಬೇಡ್ಕರರೇ ಹೇಳಿದಂತೆ ವ್ಯಕ್ತಿಗಳು ಸಮಾಜ ಬದಲಾಗುವುದು ಪ್ರಕೃತಿ ನಿಯಮ, ಚಾರಿತ್ರಿಕ ನಿಯಮ. ಬಂಡವಾಳವಾದ-ಬೃಹತ್ ಕೈಗಾರಿಕೆ, ನಗರೀಕರಣ ಅವುಗಳ ಜೊತೆಗೇ ಅಪಾರವಾಗಿ ಬೆಳೆಯುತ್ತಿರುವ ಶೋಷಣೆ, ಶೋಷಿತರನ್ನು-ದುಡಿಯುವವರನ್ನು ಜಾಗೃತರನ್ನಾಗಿಸುತ್ತಿವೆ. ಜಿಗುಪ್ಸೆಯಿಂದ, ಹುಚ್ಚು ಹಿಡಿಯುವಷ್ಟು ನಿಧಾನವಾಗಿಯಾದರೂ ಸಾಮಾಜಿಕ ಅಂತರಗಳು ಕ್ರಮೇಣವಾಗಿ ಇಳಿಮುಖವಾಗತೊಡಗಿದೆ. ಶೋಷಕ-ಶೋಷಿತರ ನಡುವೆ ಹೋರಾಟಗಳು ಹೆಚ್ಚಾಗುತ್ತಿವೆ. ಒಂದು ನಿದರ್ಶನದಿಂದ ಈ ಮಾತನ್ನು ಸ್ಪಷ್ಟಪಡಿಸಬಹುದು. ಇಪ್ಪತ್ತನೇ ಶತಮಾನದ ಆದಿಯಲ್ಲಿ ತಾಂಡವವಾಡುತ್ತಿದ್ದ ಅಸ್ಪೃಶ್ಯತೆ ಪೂರ್ತಿ ಮಾಯವಾಗಿಲ್ಲ. ಆದರೆ ಅದರ ತೀಕ್ಷ್ಣತೆ ಕೊಂಚವಾದರೂ ಕಡಿಮೆಯಾಗಿದೆ ಎನ್ನುವುದು ಒಪ್ಪಬೇಕಾದ ಮಾತು. ದಲಿತ-ಶೋಷಿತರಲ್ಲಿ ಮೂಡುತ್ತಿರುವ ಎಚ್ಚರದಿಂದಾಗಿ, ಅಂದು ನಮಗೆ ಸಂಘಟಿತರೂಪದಲ್ಲಿ ಕಾಣದಿದ್ದ, ದಲಿತ, ಶೋಷಿತ-ಶೋಷಕರ ನಡುವೆ ಹೋರಾಟಗಳು ಹೆಚ್ಚುತ್ತಿವೆ.

ಕೊನೆಯದಾಗಿ, ಅಂಬೇಡ್ಕರ್ ಅವರೇ ಜಾತಿವಿನಾಶಕ್ಕಾಗಿ, ಶೋಷಣೆಯ ಅಂತ್ಯಕ್ಕಾಗಿ ಹೇಳಿದಮಾತು, ಹಾಕಿಕೊಟ್ಟ ಹಾದಿಗಳನ್ನು ಸ್ಮರಿಸುತ್ತಾ ಈ ಲೇಖನ ಮುಗಿಸಬಹುದು "ಶ್ರೀಮಂತರ ಸಿರಿತನ, ದರಿದ್ರರ ಬಡತನದಲ್ಲಿದೆ. ಇದನ್ನು ನಿವಾರಿಸಬೇಕಾದರೆ ದುಡಿಯುವವರೆಲ್ಲಾ ಜಾತಿ-ಮತಗಳನ್ನು ಧಿಕ್ಕರಿಸಿ ಸಂಘಟಿತರಾಗಬೇಕು. ಈ ಸಂಘಟನೆಯಿಂದ ಬಡವರನ್ನು ಪ್ರತಿನಿಧಿಸುವವರು ನಾಯಕರಾಗಲು ಸಾಧ್ಯ. ಹಾಗಾದಾಗ ಎಲ್ಲರ ಅಗತ್ಯಗಳನ್ನು ಪೂರೈಸಬಹುದು ಆಗ ಸಂಪತ್ತನ್ನು ಉತ್ಪಾದಿಸುವವರು ಹಸಿವೆಯಿಂದ ಸಾಯುವುದಿಲ್ಲ".

ಇಂಥ ಹೋರಾಟಗಳಿಗೆ ಜಾತಿಯೊಂದೇ ಕಾರಣ ಅನ್ನುವವರೂ ಇದ್ದಾರೆ. ಜಾತಿಕಲಹ, ಜಾತಿಗಲಭೆ ಎನ್ನಿಸಿಕೊಂಡಿರುವ ಯಾವುದೇ ಕರ್ಮಕಾಂಡದ ಹಿನ್ನೆಲೆಯನ್ನು ಆಳವಾಗಿ ಕೆದಕಿನೋಡಿದಾಗ ಅಲ್ಲಿ ಕಾಣಬರುವುದು ಶ್ರೀಮಂತ ಜಾತಿವಾದಿಗಳು ತಮ್ಮ ಹಿತರಕ್ಷಣೆಗಾಗಿ ನಡೆಸಿರುವ ಮಸಲತ್ತು. ಇದು ದಲಿತ ಶೋಷಿತರೆಲ್ಲ ಒಂದುಗೂಡಿ, ಸಂಘಟಿತರಾಗುವವರೆಗೂ ನಡೆಯುವಂತಾದ್ದೆ. ಆದ್ದರಿಂದಲೇ, ಜಾತಿವಿನಾಶದ ಬಗೆಗಿನ ಅಂಬೇಡ್ಕರ್‌ರ ವಿಚಾರಗಳು ಉಪಯುಕ್ತ ಮಾತ್ರವಲ್ಲ ಅನಿವಾರ್ಯವೂ ಹೌದು.

ಅಡಿಟಿಪ್ಪಣಿಗಳು

1. ಅಂಬೇಡ್ಕರ್ ಬಿ. ಆರ್. Annihilation of caste. (ಜಲಂದರ್ 1978) ಪು. 105
2. ಅದೇ ಪು. 84-86.
3. ಕುಬೇರ್ W N Dr. Ambedkar-A critical Study. (New Delhi 1973) ಪು. 87-88.
4. ಅಂಬೇಡ್ಕರ್ ಬಿ. ಆರ್. Annihilation of caste P 49
5. ಪು 47.
6. ಧನಂಜಯ ಕೀರ್. Ambedkar B. R. life and Mission. (Bombay 1981) P 301
7. ಅಂಬೇಡ್ಕರ್ ಬಿ. ಆರ್. Annihilation of caste P 48.
8. ಕುಬೇರ್ W. N. Dr. Ambedkar A critical Story P.P. 255-261.
9. ಧನಂಜಯ ಕೀರ್. ಪು. 395.
10. The Navyug. Dr. Ambedkar speical Number. 13 April 1947 ಉದ್ಧೃತ. ಕೀರ್ ಪು. 391.
11. ಅಂಬೇಡ್ಕರ್ ಬಿ. ಆರ್. States and Minorities (Bombay 1947 P. 48
12. ಕುಬೇರ್ ಪು. 218-219
13. ಅಂಬೇಡ್ಕರ್ States and Minorities P. 32
14. ಅಂಬೇಡ್ಕರ್, 17, ಸೆಪ್ಟೆಂಬರ್ 1947ರಂದು ದೆಹಲಿಯ ಕಾರ್ಮಿಕ ಸಂಘಗಳನ್ನು ಉದ್ದೇಶಿಸಿ ಮಾಡಿದ ಭಾಷಣ. ಉದ್ಧೃತ, ಕುಬೇರ್. ಪು. 210.
15. 'ಜಾತಿ ಕಲಹ'ವೆಂದು ಕರೆಯಲಾದ ಹಲವಾರು ಕರ್ಮಕಾಂಡಗಳ ಹಿನ್ನೆಲೆಯ ಬಗ್ಗೆ, ವಿವರಗಳಿಗೆ ನೋಡಿ. ಬಿಪನ್ ಚಂದ್ರ. Communailism in Modern india (New Delhi 1984)

ಒಂದು ಅವಲೋಕನ...

(7ನೇ ಪುಟದಿಂದ)

ಇಂಡಿಯಾವನ್ನು ಬಿಟ್ಟು ಹೋಗಬೇಕು. ಆದರೆ ಆದಿಕಾರ ಹಸ್ತಾಂತರ ಮಾಡುವಾಗ ಸಮಾಜದ ವಿವಿಧ ವರ್ಗಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡಬೇಕೆಂದು ಪ್ರತಿಪಾದಿಸಿದ್ದರು. 'ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಸಮಾನತಯಿಲ್ಲದೆ-ರಾಜಕೀಯ ಸ್ವಾತಂತ್ರ್ಯ-ಸಮಾನತೆಗೆ ಅರ್ಥವೇ ಇಲ್ಲವೆಂದು ಅವರ ಭಾವಿಸಿದ್ದರು.

ಅಂಬೇಡ್ಕರ್,ರವರ ಹೋರಾಟಮಯ ಜೀವನದಲ್ಲಿ ಎರಡು ಸಂಧರ್ಬಗಲ್ಲಿಳ ಇಡೀ ರಾಷ್ಟ್ರದ ಗಮನವನ್ನು ಸೆಳೆದಿದ್ದರು. ಅವು-1932ರ *sept* 24ರ '*poonafact*' ಮತ್ತು 1956ರ ಮತಾಂತರದ ಸಂದರ್ಭಗಳು.

ಬ್ರಿಟಿಷರೊಡನೆ ಅತ್ಯಂತ ಶ್ರಮವಹಿಸಿ ದುಂಡು ಮೇಜಿನ ಪರಿಷತ್‌ನಲ್ಲಿ ತನ್ನ ವಾದವನ್ನು ಮಂಡಿಸಿ "*communial award*" ಅನ್ನು ಪಡೆದುಕೊಂಡಿದ್ದರು. ಆದರ ಪ್ರಕಾರ ದಲಿತರಿಗೆ ಪ್ರತ್ಯೇಕ ಮತಧಾನ ಹಕ್ಕು ನೀಡಲಾಗಿತ್ತು. ಇದರ ವಿರುದ್ಧ ಗಾಂಧೀಜೀ 22 ದಿನಗಳ ಪ್ರಸಿದ್ಧ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದ್ದರು. 1932ರಲ್ಲಿ ಗಾಧೀಜೀ ಮತ್ತು ಅಂಬೇಡ್ಕರ್ ನಡುವಿನ ವಾದ ವಿವಾಧಗಳು ಭಾರತೀಯ ಸಾಮಾಜಿಕ ವ್ಯವಸ್ಥೆಯ ಎರಡು ಪ್ರಾತಿನಿಧಿಕ ವರ್ಗಗಳ ನಡುವಿನ ಅಂತಃಕಲಹವನ್ನು ಪ್ರತಿನಿಧಿಸುತ್ತಿದ್ದವು. ಕೊನೆಗೆ ಅಂಬೇಡ್ಕರ್ ಮಾನವೀಯತೆಯ ಕರೆಗೆ ಓಗೊಟ್ಟು ಗಾಂಧೀಜಿಯ ಅಭಿಪ್ರಾಯಗಳಿಗೆ ಮಣಿದರು. ಇಲ್ಲಿ ಯಾರೂ ಸೋಲಲಿಲ್ಲ ಯಾರೂ ಗೆಲ್ಲಲೂ ಇಲ್ಲ. ಚರಿತ್ರೆ ಈ ಸಮಾಜದ ಅಂತರ್ಗತವಾದ ಕಾರ್ಯದ ನಡುವೆಯೂ ಉಳಿದಿದ್ದ ನೈತಿಕತೆ ಮತ್ತು ನ್ಯಾಯ ಪ್ರಜ್ಞೆಯನ್ನು ಪರೀಕ್ಷಿಸಿದುತಾಯ್ತು. ಪ್ರವೃತ್ತಿ ಮತ್ತು ಅನುಕರಣೆಗಳಿಂದ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯನ್ನು ಆಚರಿಸುತ್ತಿದ್ದ ಮೇಲ್‌ಜಾತಿಗಳು ತಮ್ಮ ಅಪರಾಧಿ ಪ್ರಜ್ಞೆಯನ್ನು ಮುಟ್ಟಿ ನೋಡಿಕೊಳ್ಳಲು ಪ್ರಾರಂಭಿಭಿದವು.

ಈ ಮಹತ್ವದ ಘಟನೆಯ ನಂತರ ಗಾಂಧೀಜಿ ಸ್ವಾತಂತ್ರ್ಯ ಆಂದೋಲನದ ಜೊತೆಗೆ ಅಸ್ಪೃಶ್ಯತೆಯ ವಿರುದ್ಧ ಧ್ವನಿ ಎತ್ತಿದರು.

ಇಡೀ ರಾಷ್ಟ್ರಕ್ಕೆ ದೊಡ್ಡ ಷಾಕ್ ನೀಡಿದ್ದು. 1956ರಲ್ಲಿ ಅವರು ? ಹಿಂದೂ-ಧರ್ಮ ತೊರೆದದ್ದು. 1935ರಲ್ಲಿ ಯೋಲಾಸಮಾವೇಗದಲ್ಲಿ"ನಾನು ಹಿಂದೂವಾಗಿ ಹುಟ್ಟಿದ್ದೇನೆ-ಹಿಂದೂವಾಗಿ ಸಾಯುವುದಿಲ್ಲ ಎಂದು ಘೋಷಿಸಿದ್ದರು. ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಅಸಮಾನತೆ-ಅವಧಿಕೃತ ಶಾರ್ಸನದಂತಿದೆ. ಬ್ರಾಹ್ಮಣಿಕೆ ಸಮಾಜದ ಅಂತಃಶಕ್ತಿಯನ್ನು ನಿಯಂತ್ರಿಸುವ ಮನಃಕ್ಷೋಭೆಯಾಗಿದೆ. ಇವು ವಿನಾಶ ಹೊಂದುವ ಸೂಚನೆಗಳಾವೂ ಕಂಡು ಬರದಿದ್ದರಿಂದ ಸುಮಾರು 20 ವರ್ಷಗಳ ಸುದೀರ್ಘವಾದ ಆಲೋಚನೆ ಅಧ್ಯಯನದ ನಂತರವೇ 1956 ಅ. 14ರಂದು ಬುದ್ಧ ಧರ್ಮಕ್ಕೆ-ತಮ್ಮ ಮನಸ್ಸು ಮತ್ತು ಆತ್ಮಾವನ್ನು ಸಮರ್ಪಿಸಿಕೊಂಡರು. ಇದು ಹಿಂದೂ ಧರ್ಮದ ಮೇಲಿನ ದ್ವೇಷದಿಂದ ಮಾಡಿದ ಕ್ರಿಯೆಯಲ್ಲ. ಬದಲಾಗಿ ಸತ್ಯ-ನೈತಿಕತೆ ಮಾನವೀಯ ಮೌಲ್ಯಗಳೇ ನಿಜ ಧರ್ಮವೆಂದು ನಂಬಿದ ಮಹಾಚೇತನ ತನ್ನ ಅಂತರಂಗದ ಆಸೆಯನ್ನು ಬಹಿರಂಗ ಪಡಿಸದಂತೆ:

ಅಂಬೇಡ್ಕರ್‌ರವರ "ಜಾತಿ ವಿನಾಶ" ಎಂಬ ಮುದ್ರಿತ ಭಾಷಣಕ್ಕೆ, ಗಾಂಧೀಜೀ 1936 ಅ. 15 ರಂದು ತಮ್ಮ "ಹರಿಜನ" ಪತ್ರಿಕೆಯಲ್ಲಿ ಪ್ರತಿಕ್ರಿಯೆ ಬರೆಯುತ್ತಾ ಹೀಗೆ ಹೇಳಿದ್ದಾರೆ—"ಅಂಬೇಡ್ಕರ್ ಅಭಿಪ್ರಾಯಗಳನ್ನು ಯಾವ ಸುಧಾರಕನೂ ಮರೆಯುವಂತಿಲ್ಲ ಹಾಗೂ ಅವರು ಹಿಂದೂಧರ್ಮದ ದೊಡ್ಡ ಸವಾಲು" ಎಂದಿದ್ದಾರೆ. ಈ ಮಾತುಗಳನ್ನು ಈ ದೇಶ ನೆನಪಿಟ್ಟುಕೊಳ್ಳುವುದು ಒಳ್ಳೆಯದು.

ಅಸಮಾನತೆಯ ಮೂಲವಾದ ಧರ್ಮ-ಆರ್ಥಿಕ ಅಂಶಗಳು ಹಾಗೂ ರಾಜಕೀಯ ಬೆಳವಣಿಗೆಗಳನ್ನು ಅಂಬೇಡ್ಕರ್-ಹೋರಾಟ-ಚಿಂತನೆಯ ಬೆಳಕಿನಲ್ಲಿ ಅಧ್ಯಯನ ಮಾಡಬೇಕಾದ ಕಾಲ ಬಂದಿದೆ. ಕೇವಲ ಅವರ ಬಿಡಿ-ಬಿಡಿ ನುಡಿಗಳಿಂದ "ಹಿಂದೂ ಧರ್ಮ-ಗಾಂಧೀಜೀ-ಕಾಂಗ್ರೆಸ್‌ಗಳನ್ನು ಟೀಕಿಸಿ, ರಂಜಿಸಿಕೊಳ್ಳುವುದರಿಂದ ಪ್ರಯೋಜನವಿಲ್ಲ. ನಿರಂತರ ಅಧ್ಯಯನ ರಾಜಕೀಯ ಮತ್ತು ಆರ್ಥಿಕ ಬೆಳವಣಿಗೆಗಳ ಹೊಸ ಆಯಾಮಗಳ ಪರಿಣಾಮ-ಪ್ರಭಾವಗಳನ್ನು ಜಾಗೃತಿಯಿಂದ ಆದ್ಯಾಯನ ಮಾಡಿ ದಲಿತ ವಿಮೋಚನೆಗಾಗಿ ನೈಜ ಚರಿತ್ರೆಯ ಮೊಗಸಾಲೆಯಲ್ಲಿ ನಿಂತು. ಹೊಸ-ಹಾದಿ ಹುಡುಕಬೇಕಾಗಿದೆ. ಇಂಥ ಗುರುತರವಾದ ಜವಾಬುದಾರಿಯನ್ನು ಮನಗಂಡು ದಲಿತ ಸಂಘಟನೆಗಳು ಮುಂದುವರೆದರೆ ಮಾತ್ರ ದಲಿತ ಸಮುದಾಯದ ವಿವೇಚನೆಗೆ ಹೊಸ ಆಯಾಮ ದೊರೆಯಬಲ್ಲುದು.

ಅಂಬೇಡ್ಕರ್ ಮತ್ತು ಧರ್ಮಾಂತರ


ಡಾ|| ಅಂಬೇಡ್ಕರ್‌ರು 1956 ರ ಅಕ್ಟೋಬರ್ 14 ರಂದು ತಮ್ಮ ಲಕ್ಷಾಂತರ ಬೆಂಬಲಿಗರೊಂದಿಗೆ ಹಿಂದೂಧರ್ಮ ಬಿಟ್ಟು ಬೌದ್ಧ ಧರ್ಮ ಸ್ವೀಕರಿಸಿದರು. ಹಿಂದೂ ನೇತಾರರು ಇದನ್ನು ಧರ್ಮ ದ್ರೋಹವೆಂದು ಖಂಡಿಸಿದರು. ಆದರೆ ಇಪ್ಪತ್ತು ವರ್ಷಗಳ ಕಾಲ ಬಾಬಾಸಾಹೇಬರು ನಡೆಸಿದ ಚಿಂತನ ಮಂಥನದ ಫಲ ಇದಾಗಿತ್ತು.

–ಸರಜೂ ಕಾಟಕರ್

1956 ರ ಅಕ್ಟೋಬರ್ 14 ರಂದು, ಡಾ|| ಬಾಬಾಸಾಹೇಬ ಅಂಬೇಡ್ಕರರು ಹಿಂದೂ ಧರ್ಮ ಬಿಟ್ಟು ಬೌದ್ಧ ಧರ್ಮವನ್ನು ಸ್ವೀಕರಿಸುವ ಮೊದಲೇ 1935 ರ ಅಕ್ಟೋಬರ್ 13 ರಂದು "ನಾನು ಹಿಂದೂವಾಗಿ ಹುಟ್ಟಿದ್ದರೂ ಹಿಂದೂವಾಗಿಯೇ ಸಾಯಲಾರೆ"ಎಂದು ಮಹಾರಾಷ್ಟ್ರದ ಯೆವಲೆ ಊರಲ್ಲಿ ಘೋಷಿಸಿದ್ದರು. ಈ ಘೋಷಣೆ ಒಂದು ರೀತಿಯ ಧರ್ಮಾಂತರದ ಘೋಷಣೆಯೇ ಆಗಿತ್ತು. ಈ ಧರ್ಮಾಂತರದ ಘೋಷಣೆಯನ್ನು ಮಾಡಿಯೂ, ಡಾ|| ಅಂಬೇಡ್ಕರ್ ಹಿಂದೂ ಧರ್ಮವನ್ನು ತ್ಯಜಿಸಲು ಸುದೀರ್ಘವಾದ 21 ವರ್ಷಗಳನ್ನು ತೆಗೆದುಕೊಂಡರು. ಅನೇಕ ವಿಚಾರವಂತರು ಡಾ|| ಅಂಬೇಡ್ಕರರು ಧರ್ಮಾಂತರದ ಘೋಷಣೆಗಿಂತಲೇ ಮೊದಲು ಧರ್ಮಾಂತರದ ಬಗ್ಗೆ ಮಾನಸಿಕವಾಗಿ ತಯಾರಿ ನಡೆಸಿದ್ದರೆಂದು ಗುರುತಿಸುತ್ತಾರೆ.

1929 ರಲ್ಲಿ ಜಳಗಾವಂ ಜಿಲ್ಲೆಯಲ್ಲೊಂದು ಕ್ರಾಂತಿಯೇ ನಡೆಯಿತು. ಅಲ್ಲಿಯ ಜಾವೇದ ಗ್ರಾಮದ ಹರಿಜನರು ಸಾಮೂಹಿಕವಾಗಿ ಇಸ್ಲಾಮ ಧರ್ಮಕ್ಕೆ ಮತಾಂತರಗೊಂಡರು. ಈ ಘಟನೆಯಿಂದ ಇಡೀ ಹಿಂದೂಸ್ತಾನ ತತ್ತರಿಸಿದರೂ, ಡಾ|| ಅಂಬೇಡ್ಕರ್ ಮಾತ್ರ ಈ ಮತಾಂತರವನ್ನು ಬೆಂಬಲಿಸಿದರು. ಆಗಿನ ರಾಜಕೀಯ ನಾಯಕರುಗಳ ಲಕ್ಷ್ಯವೆಲ್ಲ ಈ ಘಟನೆಗೆ ಡಾ|| ಅಂಬೇಡ್ಕರ್ ಹೇಗೆ ಪ್ರತಿಕ್ರಿಯಿಸುತ್ತಾರೆ ಎನ್ನುವತ್ತ ಕೇಂದ್ರೀಕೃತವಾಗಿತ್ತು. ಅತ್ತ ಸ್ವಧರ್ಮದಿಂದ (ಸ್ವಜಾತಿಯಿಂದ) ? ಪರಕೀಯರಾಗಿ, ಇತ್ತ ಮತಾಂತರಗೊಂಡ ಧರ್ಮಕ್ಕೆ ಅಪರಿಚಿತರಾದ ಜಾವೇದದ ಹರಿಜನರಿಗೆ ಡಾ|| ಅಂಬೇಡ್ಕರ್‌ರವರ "ಬೆಂಬಲ"ದಿಂದ ಒಂದು ರೀತಿಯ ಮಾನಸಿಕ ಸಮಾಧಾನ ಸಿಕ್ಕಂತಾಗಿತ್ತು. ಈ ಘಟನೆಯನ್ನೇ ಆಧರಿಸಿ ಡಾ. ಅಂಬೇಡ್ಕರ್ ಲಂಡನ್ನಲ್ಲಿದ್ದ ತಮ್ಮ ಗೆಳೆಯ ಸುಭೆದಾರ್ ಸವಾದಕರ್ ಅವರಿಗೆ ಬರೆದ ಪತ್ರದಲ್ಲಿ "ನಾನು ಸ್ವತಃ ಹಿಂದೂ ಧರ್ಮದಲ್ಲಿ ಉಳಿಯಲಾರೆ ; ಮತ್ತು ಹಿಂದೂವೆಂದು ಅನ್ನಿಸಿಕೊಳ್ಳಲಾರೆ. ಎರಡನೆಯ ಮಾತು ನಾನು ಮುಸಲ್ಮಾನನಾಗಲಾರೆ. ಮೂರನೆಯ ಸಂಗತಿ : ನಾನು ಯಾವುದಾದರೂ ಬೇರೊಂದು ಧರ್ಮ ಸೇರುವೆ. ಸಧ್ಯ ನನ್ನ ಒಲವು ಬೌದ್ಧ ಧರ್ಮದ ಕಡೆಗಿದೆ"ಎಂದು ಬರೆದರು. (ವಿಶ್ರಬ್ಧ ಶಾರದಾ ಸಂಪಾದನೆ : ಹ. ವೀ. ಮೋಟೆ ಪುಟ-433)

ಇದೆಲ್ಲ ಹಿನ್ನಲೆಯನ್ನು ಅವಲೋಕಿಸಿದರೆ, ಡಾ|| ಅಂಬೇಡ್ಕರ್‌ರಿಗೆ ಹಿಂಧೂಧರ್ಮವನ್ನು ತ್ಯಜಿಸುವ ವಿಚಾರ 1935 ಕ್ಕಿಂತ ಮೊದಲೇ ಬಂದಿತ್ತು ; ಮತ್ತು ಅವರ ಒಲವು ಬೌದ್ಧ ಧರ್ಮದೆಡೆಗೆ ಇತ್ತೆಂದು ಸ್ಪಷ್ಟವಾಗುತ್ತದೆ. ಹಿಂದೂ ಸಮಾಜ ಬಲಶಾಲಿಯಾಗಬೇಕಾದರೆ, ಅದರಲ್ಲಿರುವ ಚಾತುರ್ವರ್ಣ ವ್ಯವಸ್ಥೆ ಮತ್ತು ಅಸಮಾನತೆಗಳು ನಷ್ಟವಾಗಬೇಕೆಂದು ಡಾ|| ಅಂಬೇಡ್ಕರ್ ಭಾವಿಸಿದ್ದರು. ಚಾತುರ್ವರ್ಣದ ಸ್ಥಳದಲ್ಲಿ ಏಕವರ್ಣತೆ ಹಾಗೂ ಅಸಮಾನತೆಯ ಜಾಗದಲ್ಲಿ ಸಮಾನತೆ ಬರಬೇಕು. ಹಾಗಾದರೆ ಮಾತ್ರ ಅಸ್ಪೃಶ್ಯತೆ ಈ ದೇಶದಿಂದ ದೂರವಾಗಬಹುದೆಂದು ಡಾ|| ಅಂಬೇಡ್ಕರ್ ತಿಳಿದುಕೊಂಡಿದ್ದರು. ಆದರೆ ಅದೇ ಕಾಲಕ್ಕೆ ಹಿಂದೂ ಧರ್ಮ ಅಪರೀವರ್ತನೀಯವಾಗಿದೆಯೆಂಬುದೂ ಅವರಿಗೆ ಗೊತ್ತಿತ್ತು. ಇಲ್ಲಿಯ ವಿಶಿಷ್ಟ ವರ್ಣವ್ಯವಸ್ಥೆ ಮತ್ತು ಕಂದಾಚಾರಗಳು ಇಡೀ ಒಂದು ಧರ್ಮದ ಬೇರನ್ನೇ ಹಿಡಿದ ಚಿರಸತ್ಯ ಅವರಿಗೆ ಗೋಚರವಾಗದೇ ಇರಲಿಲ್ಲ. "ನಾವು ಧರ್ಮಾಂತರ ಮಾಡುತ್ತೇವೆಂದು ಹೇಳಿದರೆ ಅನೇಕರು ಕೆರಳುತ್ತಾರೆ. ಆದರೆ ಸ್ಪೃಶ್ಯ ಹಿಂದೂ ಸಮಾಜ, ಅಸ್ಪೃಶ್ಯರಿಗೆ ಸುಖದಿಂದ ಬಾಳಲು ಬಿಡದಿದ್ದರೆ, ಅವರು ಬೇರೆ ಧರ್ಮಕ್ಕೆ ಹೋರೆಹೋಗಿ ತಮ್ಮ ದರ್ಜೆಯನ್ನು ಹೆಚ್ಚಿಸಿಕೊಳ್ಳದಿದ್ದರೆ ಸ್ಪೃಶ್ಯರು ಅವರಿಗೆ ಬೆಲೆ ಕೊಡುವುದಿಲ್ಲ; ಈ ದರ್ಜೆಯನ್ನು ಹೆಚ್ಚಿಸಿಕೊಳ್ಳಲು ಅಸ್ಪೃಶ್ಯರು ಧರ್ಮಾಂತರ ಮಾಡಬೇಕಾಗುತ್ತದೆ" (ಬಹಿಷ್ಕೃತ ಭಾರತ ನವೆಂಬರ್ 4, 1927) ಎಂದು ಡಾ|| ಅಂಬೇಡ್ಕರ್‌ರ ಹೇಳಿದರು. "ಯಾವ ಮನುಷ್ಯತ್ವಕ್ಕಾಗಿ ಯಾವ ಸಮಾನತೆಗಾಗಿ ಅಸ್ಪೃಶ್ಯರು ಇಂದು ಹೋರಾಡುತ್ತಿದ್ದಾರೆಯೋ ಆ ಸಮಾನತೆ ಮತ್ತು ಮನುಷ್ಯತ್ವ ಧರ್ಮಾಂತರದಿಂದ ಸಹಜವಾಗಿ, ಸುಲಭವಾಗಿ ಸಿಗಬಹುದಾಗಿದೆ. (ಬಹಿಷ್ಕೃತ ಭಾರತ : ಅಸ್ಪೃಶ್ಯತೆ ಮತ್ತು ಸತ್ಯಾಗ್ರಹದ ಸಿದ್ಧಿ–ಸಂಪಾದಕೀಯ ನವೆಂಬರ್ 25, 1927) ಎಂದು ಡಾ|| ಅಂಬೇಡ್ಕರ್ ಬರೆದರು.



ಅಕ್ಟೋಬರ್ 13, 1935 ರಂದು ಡಾ. ಅಂಬೇಡ್ಕರ್ ಧರ್ಮಾಂತರದ ಘೋಷಣೆ ಮಾಡಿದಾಗ ಭಾರತದಲ್ಲಿ ಅಲ್ಲೋಲ ಕಲ್ಲೋಲವೇ ಆಯಿತು. ಹಲ ಕೆಲ ಧಾರ್ಮಿಕ ಮುಖಂಡರು ಅಂಬೇಡ್ಕರ್‌ರನ್ನು ತಮ್ಮ ತಮ್ಮ ಧರ್ಮದಲ್ಲಿ ಸೇರಿಸಿಕೊಳ್ಳಲು ತುದಿಗಾಲ ಮೇಲೆ ಸವಾರಿ ನಡೆಸಿದರು. ಈ ಘೋಷಣೆಯನ್ನು ಮಹಾತ್ಮ ಗಾಂಧೀಜಿಯವರು "ಇದೊಂದು ದುರ್ದೈವಿ ಘಟನೆಯೆಂದು ಕರೆದರೆ ಸ್ವಾತಂತ್ರ್ಯವೀರ ಸಾವರ್‌ಕರು 'ಧರ್ಮದ್ರೋಹ'ವೆಂದು ಬಣ್ಣಿಸಿದರು. "ಡಾ॥ ಅಂಬೇಡಕರ್ ಅವರ ಮಗ ಮುಂದೊಂದು ದಿನ ಮತ್ತೆ ಹಿಂದೂ ಧರ್ಮಕ್ಕೆ ಮರಳಿ ಬರುತ್ತಾನೆಂದೂ" ಸಾವರಕರ್ ಭವಿಷ್ಯ ನುಡಿದರು. (ಸಮಗ್ರ ಸಾವರಕರ್, ಪುಟ 571)

ಡಾ॥ ಅಂಬೇಡ್ಕರ್ ಹಿಂದೂ ಧರ್ಮ ತ್ಯಜಿಸುವ ಘೋಷಣೆ ಮಾಡಿಯೂ 20 ಅಥವಾ 21 ವರ್ಷ ಸುಮ್ಮನೇಕಿದ್ದರು ? ಅವರಿಗೆ ತಮ್ಮ ಈ ಘೋಷಣೆಯಿಂದ ಹಿಂದೂ ಧರ್ಮದಲ್ಲಿ ಪರಿವರ್ತನೆ ಉಂಟಾಗಬಹುದೆಂಬ ಆಶೆಯೇನಾದರೂ ಚಿಗಿತಿತ್ತೆ ? ಅಥವಾ ಈ ಆಶಾಭಂಗವಾದ ನಂತರವೇ ಅವರು ಅಂತಿಮವಾಗಿ ಬೌದ್ಧ ಧರ್ಮಕ್ಕೆ ಸೇರುವ ದಿನಾಂಕವನ್ನು ಪ್ರಕಟಿಸಿದರೇ ?— ಇವೆಲ್ಲ ಪ್ರಶ್ನೆಗಳು. ಆದರೆ ಈ 20 ವರ್ಷಗಳಲ್ಲಿ ಅವರು ಬೌದ್ಧ ಧರ್ಮದ ಆಳವಾದ ಅಧ್ಯಯನ ನಡೆಸಿದರು. ಅದಕ್ಕಿಂತ ಮೊದಲೇ ಬೌದ್ಧ ಧರ್ಮದ ಬಗ್ಗೆ ಪ್ರೀತಿ ಮತ್ತು ಒಲವು ಇದ್ದ ಮೂಲಕ ಅವರಿಗೆ ಮುಂದೊಂದು ದಿನ ತಾವು ಮತ್ತು ತಮ್ಮ ಅನುಯಾಯಿಗಳು ಬೌದ್ಧ ಧರ್ಮವನ್ನು ಸೇರುವುದು ಖಂಡಿತವೆಂದು ಗೊತ್ತಿತ್ತು; ಯೋಗ್ಯ ಸಮಯಕ್ಕಾಗಿ (ಧರ್ಮಾಂತರಗೊಳ್ಳಲು) ಅವರು ಕಾಯುತ್ತಿದ್ದರು. ಧರ್ಮಾಂತರವನ್ನು ಅವರು ತುಂಬ ಸೀರಿಯಸ್ಸಾಗಿಯೇ ತೆಗೆದುಕೊಂಡರು. "ಧರ್ಮಾಂತರದಲ್ಲಿ ಗಡಿಬಿಡಿ ಮಾಡುವ ಕಾರಣವಿಲ್ಲ ಇದೇನು ಸಣ್ಣ ವಿಷಯವಲ್ಲ; ಇದು ಇಡೀ ಮನುಷ್ಯನ ಜೀವನದ ಸಾಫಲ್ಯದ ಪ್ರಶ್ನೆ." (ಮುಕ್ತಿ ಕೋಣ ಪಥೆ 20 ಜೂನ್ 1936) ಎಂದು ಡಾ॥ ಅಂಬೇಡ್ಕರ್ ಆಗಲೇ ಹೇಳಿದ್ದರು.

1935 ರ ನಂತರ ಡಾ॥ ಅಂಬೇಡ್ಕರ್ ಅವರ ಜೀವನದಲ್ಲೂ ಹಲ ಕೆಲ ಕ್ಷಿಪ್ರ ಬೆಳವಣಿಗೆಗಳು ಕಂಡು ಬಂದವು. 1936 ರಲ್ಲಿ ಸ್ವಾತಂತ್ರ ಮಜೂರ್ ಪಕ್ಷದ ಸ್ಥಾಪನೆ; 1937 ರಲ್ಲಿ ಚುನಾವಣೆಗಳು ; 1940 ರಲ್ಲಿ *Thoughts on Pakistan* ಪುಸ್ತಕ ರಚನೆ ; 1941 ರಲ್ಲಿ ಸೈನ್ಯ ಭರ್ತಿಯಲ್ಲಿ ಅಸ್ಪೃಶ್ಯರಿಗೆ ಸ್ಥಾನಗಳ ಕುರಿತು ಚರ್ಚೆ ಮತ್ತು ಅದೇ ಕಾಲಕ್ಕೆ ರಕ್ಷಣಾ ಸಮಿತಿಯ ಸದಸ್ಯತ್ವ ಸ್ವೀಕಾರ, 1942 ರಲ್ಲಿ *All India Scheduled Caste Federation* ಸ್ಥಾಪನೆ ಮತ್ತು ಸರಕಾರದಲ್ಲಿ ಮಂತ್ರಿಯೆಂದು ನೇಮಕ ; 1943 ರಲ್ಲಿ *Ranade Gandhi Jinnah* ಪುಸ್ತಕ ರಚನೆ ; 1945 ರಲ್ಲಿ *What Congress and Gandhi have done to the untouchables* ಪುಸ್ತಕ ರಚನೆ ಮತ್ತು ಇದೇ ಕಾಲಕ್ಕೆ *Peoples Education Society* ಯ ಸ್ಥಾಪನೆ; 1946 ರಲ್ಲಿ ಮುಂಬೈಯಲ್ಲಿ ಸಿದ್ಧಾರ್ಥ ಕಾಲೇಜು ಆರಂಭ ಮತ್ತು *Who were the Shudras ?* ಪುಸ್ತಕ ; ಬ್ರಿಟಿಷರು ಅಧಿಕಾರ ಹಸ್ತಾಂತರ ಮಾಡುತ್ತಿರುವುದರಿಂದ ಈ ಹೊಸ ರಾಜ್ಯ ವ್ಯವಸ್ಥೆಯಲ್ಲಿ ಘಟನೆ ಹೇಗೆ ಇರಬೇಕು ಮತ್ತು ಈ ವ್ಯವಸ್ಥೆಯಲ್ಲಿ ಅಸ್ಪೃಶ್ಯರ ಸ್ಥಾನಮಾನರಗಳ ಕುರಿತು *States & Minorities* ಪುಸ್ತಕ ಪ್ರಕಾಶನ ; ಆಗಸ್ಟ್ 15, 1947 ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಮತ್ತು ಡಾ॥ ಅಂಬೇಡ್ಕರ್‌ರವರಿಗೆ ಮಂತ್ರಿಪದವಿ ; ಆಗಸ್ಟ್ 29, 1947 ರಂದು ಸಂವಿಧಾನ ರಚನಾ ಸಮಿತಿಯ ಘೋಷಣೆ ಮತ್ತು ಅದರ ಅಧ್ಯಕ್ಷರೆಂದು ಅಧಿಕಾರ ಸ್ವೀಕಾರ, 15ನೇ ಏಪ್ರಿಲ್ 1948ರಲ್ಲಿ ಎರಡನೆಯ ಮದುವೆ ; ಅದೇ ವರ್ಷ ಸಂವಿಧಾನ ರಚನೆಯಲ್ಲಿ ಸಂಪೂರ್ಣ ಅರ್ಪಣೆ. 1949. ನವೆಂಬರ್ 26ರದು ಸಂವಿಧಾನ ರಚನೆ ಪೂರ್ತಿ. 1950ರಲ್ಲಿ ಮರಾಠಾವಾಡ ಔರಂಗಾಬಾದ್‌ನಲ್ಲಿ ಪೀಪಲ್ಸ್ ಎಜುಕೇಶನ್ ಸ್ಥಾಪನೆ ; 1951 ರಲ್ಲಿ ಮಂತ್ರಿಪದ ತ್ಯಾಗ ; 1952ರಲ್ಲಿ ಸಂಸತ್ತಿಗಾಗಿ ಸ್ಪರ್ಧೆ ಮತ್ತು ಸೋಲು 1954ರಲ್ಲಿ ಭಂಡಾರ ಕ್ಷೇತ್ರದಿಂದ ಸಂಸತ್ತಿಗೆ ಸ್ಪರ್ಧೆ (ನಡುಗಾಲ ಚುನಾವಣೆ) ಮತ್ತು ಸೋಲು ಇದೇ ಹೊತ್ತಿಗೆ *Buddha & his Dharma* ರಚನೆ. ಡಿಸೆಂಬರ್ 1954ರಲ್ಲಿ ರಂಗೂನ್‌ನಲ್ಲಿ ನಡೆದ ಮೂರನೆಯ ಜಾಗತೀಕ ಪರಿಷತ್ತಿನಲ್ಲಿ ಭಾಷಣ ; 1955ರಲ್ಲಿ ಬೌದ್ಧ ಧರ್ಮ ಸ್ವೀಕಾರ



ಘೋಷಣೆ- ಹೀಗೆ ಡಾ॥ ಅಂಬೇಡ್ಕರ್‌ರ ಜೀವನದ ಈ 21 ವರ್ಷಗಳ ಕಾಲದ ದಿನಚರಿ ತೆಗೆದುಕೊಂಡರೆ ಈ ಅವಧಿ ಅವರ ರಾಜಕೀಯ, ಸಾಮಾಜಿಕ ಮತ್ತು ವೈಯಕ್ತಿಕ ಜೀವನದಲ್ಲಿ ಬಹು ಮುಖ್ಯವಾದ ಪಾತ್ರವನ್ನಾಡಿದೆಯೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಈ ಎಲ್ಲಾ ವರ್ಷಗಳಲ್ಲಿ ಡಾ. ಅಂಬೇಡ್ಕರ್‌ರಿಗೆ ಸಿಕ್ಕ ವಿರಾಮದ ಅವಧಿ ಅತ್ಯಂತ ಕಡಿಮೆ. ಈ ಮಧ್ಯದಲ್ಲಿ 1945ರ ನಂತರ ಅವರ ಆರೋಗ್ಯವೂ ಅಷ್ಟು ಚೆನ್ನಾಗಿರಲಿಲ್ಲ 1950ರ ನಂತರವಂತೂ ಅವರ ಆರೋಗ್ಯ ಮತ್ತಷ್ಟು ಹದಗೆಟ್ಟಿತು. ಹೀಗಾಗಿ ಡಾ॥ ಅಂಬೇಡ್ಕರ್‌ರು ಧರ್ಮಾಂತರ ಮಾಡಲು ಯೋಗ್ಯ ಸಮಯದ ಹಾದಿ ಕಾಯುತ್ತಿದ್ದರು. ಈ ಅವಧಿಯಲ್ಲೂ ಅವರು ಬೌದ್ಧ ಧರ್ಮದ ಬಗ್ಗೆ ಹೆಚ್ಚು ಚಿಂತನಶೀಲರಾದಂತೆ ಕಂಡುಬರುತ್ತದೆ.

1935 ರಿಂದ 1956 ರವರೆಗೆ ಮಹಾರಾಷ್ಟ್ರದ ದಲಿತ ಸಮಾಜದಲ್ಲಿ ಅನೇಕ ಬದಲಾವಣೆಗಳು ಕಂಡುಬಂದವು. ಧರ್ಮಾಂತರದಿಂದುಂಟಾಗುವ ಮಾನಸಿಕ ಪರಿವರ್ತನೆಗಳಿಗೆ ಅವರನ್ನು ಸಜ್ಜುಗೊಳಿಸಲು ಅನೇಕರು ಅನೇಕ ರೀತಿಯಾಗಿ ಪ್ರಯತ್ನಗಳನ್ನು ಆರಂಭಿಸಿದರು. ಸಭೆ, ಸಮಾರಂಭ ವಿಚಾರ ಸಂಕಿರಣಗಳನ್ನು ಆಲೋಚಿಸಿ ದಲಿತರ ಈ ಹೊಸ ಹುಟ್ಟಿಗೆ ಅವರನ್ನು ತನ್ನದು ಮಾಡುವ ಕ್ರಿಯೆಗಳಿಂದ ಇಡೀ ಮಹಾರಾಷ್ಟ್ರ ದುಮುದುಮಿಸಿತು. ಹಿಂಧೂ ಧರ್ಮದಲ್ಲಿರುವ ಪರಂಪರಾಗತ ಮೌಲ್ಯಗಳನ್ನು ಹಾಗೂ ಅಸಮಾನತೆಯನ್ನು ಧಿಕ್ಕರಿಸಿ ಹೊಸ ಗಾಳಿಗೆ ತಮ್ಮನ್ನು ಹರಿಜನರೆಲ್ಲಾ ಒಡ್ಡಿಕೊಳ್ಳಲಾರಂಭಿಸಿದರು. ಡಾ॥ ಅಂಬೇಡ್ಕರ್ ಧರ್ಮಾಂತರದ ಘೋಷಣೆ ಹರಿಜನರ ಜೀವನದಲ್ಲಿ ಒಂದು ಹೊಸ ಅಧ್ಯಾಯವನ್ನೇ ತೆರೆಯಿತು.

ಡಾ॥ ಅಂಬೇಡ್ಕರ್‌ರು ಅಕ್ಟೋಬರ್ 14, 1956 ರಂದು ತಮ್ಮ ಲಕ್ಷಾವಧಿ ಹಿಂಬಾಲಕರೊಂದಿಗೆ ನಾಗಪುರದಲ್ಲಿ ಬೌದ್ಧ ಧರ್ಮ ಸ್ವೀಕರಿಸಿದರು. 1935ರಲ್ಲಿ ಅವರು ಮಾಡಿದ ಪ್ರತಿಜ್ಞೆ ಹೀಗೆ 21 ವರ್ಷಗಳ ನಂತರ ನಿಜವಾಗಿ ಪರಿಣಮಿಸಿತು "ಕೊನೆಗಾದರೂ ಹಿಂದೂ ಧರ್ಮದ ನರಕದಿಂದ ನಾನು ಬಿಡುಗಡೆ ಹೊಂದಿದೆ" ಎಂದು ಡಾ॥ ಅಂಬೇಡ್ಕರ್ ಆಗ ಸಮಾಧಾನದ ನಿಟ್ಟುಸಿರು ಬಿಟ್ಟರು.

ನಾಗಪುರದಲ್ಲಿ ಅಂದು ನಡೆದ ಧರ್ಮಾಂತರ ಕಾರ್ಯಕ್ರಮದಲ್ಲಿ ಡಾ॥ ಅಂಬೇಡ್ಕರ್‌ರು ಒಟ್ಟು 22 ಪ್ರತಿಜ್ಞೆಗಳನ್ನು ಸ್ವೀಕರಿಸಿದರು. ಹಿಂದೂ ದೇವರು–ದಿಂಡರು, ದೈವದ ಕಲ್ಪನೆ, ಹಿಂದೂ ಸೃಷ್ಟಿ, ಬ್ರಾಹ್ಮಣರ ಪೌರೋಹಿತ್ಯ ಹೀಗೆ ಹಿಂದೂ ಧರ್ಮದ ಅವಿಭಾಜ್ಯ ಅಂಗವಾಗಿರುವ ಈ ಸಂಸ್ಕಾರಗಳನ್ನು ಬಿಡುತ್ತೇವೆಂದು ಡಾ॥ ಅಂಬೇಡ್ಕರ್ ಪ್ರತಿಜ್ಞೆ ತೆಗೆದುಕೊಂಡರು. "ಇಂದು ನನಗೆ ಹೊಸ ಹುಟ್ಟು ಸಿಗುತ್ತದೆಂದು ನಾನು ಭಾವಿಸುವೆ" ಎಂದು ಡಾ॥ ಅಂಬೇಡ್ಕರ್ ಈ ಸಂದರ್ಭದಲ್ಲಿ ಹೇಳಿದರು.

ಡಾ॥ ಅಂಬೇಡ್ಕರ್ ಅನುಯಾಯಿಗಳು ಧರ್ಮಾಂತರವನ್ನು ಮಾಡುತ್ತಿದ್ದಂತೆಯೇ, ಅದನ್ನು ಆಚರಿಸಲು ಆರಂಭಿಸಿದ್ದರಿಂದ, ಅದರ ಆಘಾತಕ್ಕೆ ಗುರಿಯಾದವರು ಹಿಂದೂ ದೇವ-ದೇವತೆಯರು. ಇವರಿಗಾಗಿ ನಡೆಯುತ್ತಿದ್ದ ಪೂಜೆ ಪುನಸ್ಕಾರ, ಹರಕೆಗಳು ಬಂದಾಗಿ ಹೋದವು. ಹರಿಜನರ ಓಣಿಗಳಿಂದ ಮರಿಮಲ್ಲೆ, ಸಟವಾಯಿ, ದುರ್ಗಮ್ಮ ಮುಂತಾದ ದೇವ ದೇವತೆಗಳಿಗೆ ಅರ್ಧಚಂದ್ರ ಪ್ರಯೋಗವಾಯಿತು. ಕೆಲವು ಊರುಗಳಲ್ಲಿ ಈ ದೇವ ದೇವತೆಗಳ ಮೂರ್ತಿಯನ್ನು ಮೆರವಣಿಗೆಯಲ್ಲಿ ಕೊಂಡೊಯ್ದು ನದಿಯಲ್ಲಿ ವಿಸರ್ಜಿಸಲಾಯಿತು. ನಾಸಿಕ್, ಪಂಡರಪೂರ್, ಆಳಂದಿ, ದೆಲಹು, ಪೈಠಣ ಮುಂತಾದ ಕಡೆಗಳಲ್ಲಿ ಈ ಹಿಂದೆ ದೇವ ದೇವತೆಯರಿಗೆ ಹರಿಜನರು ಬಲಿ ನೀಡುತ್ತಿದ್ದರು. ಅವುಗಳನ್ನು ಬಂದ್ ಮಾಡಲಾಯಿತು. ಲಗ್ನ ಸಮಾರಂಭಗಳಲ್ಲಿ ಬ್ರಾಹ್ಮಣರನ್ನು ಕರೆಸುವದು, ಸತ್ಯನಾರಾಯಣ ಪೂಜೆ ಮಾಡಿಸುವದು, ಹಿಂದೂಗಳ ಹಬ್ಬಗಳನ್ನು ಆಚರಿಸುವುದೆಲ್ಲಕ್ಕೂ ತೆರೆ ಬಿದ್ದಿತು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ದೀಕ್ಷೆ ತೆಗೆದುಕೊಳ್ಳುವಾಗ ಮಾಡಿದ 22 ಪ್ರತಿಜ್ಞೆಗಳನ್ನು ಅನುಷ್ಠಾನಗೊಳಿಸಲು ಧರ್ಮಾಂತರಗೊಂಡ ಎಲ್ಲ ಹರಿಜನರು ಪ್ರಯತ್ನಿಸ ಹತ್ತಿದರು.

ನವ ದೀಕ್ಷಿತ ಬೌದ್ಧರು ಮೆಲ್ಲ ಮೆಲ್ಲನೆ ಹೊಸ ಸಂಸ್ಕೃತಿಯನ್ನು ಕಟ್ಟಲು ಆರಂಭಿಸಹತ್ತಿದರು. ಹಳೆಯ ದೇವರ ಗೂಡುಗಳಲ್ಲಿ ಗೌತಮಬುದ್ಧ, ಬೋಧಿಸತ್ವ, ಮತ್ತು ಡಾ॥ ಅಂಬೇಡ್ಕರ್‌ರ ಫೋಟೋಗಳು, ಮೂರ್ತಿಗಳು ವಿರಾಜಮಾನವಾದವು. ಅವುಗಳ ಎದುರು ಮೇಣದಬತ್ತಿ, ಊದಿನ ಕಡ್ಡಿಗಳು ಉರಿಯಲಾರಂಭಿಸಿದವು. ಪಂಚಶೀಲ, ತ್ರಿಕರಣ ಮತ್ತು ಬೌದ್ಧ ವಂದನೆಗಳು ಪ್ರತಿ ಹರಿಜನರ ಮನೆಯಿಂದ ಕೇಳಿಸಹತ್ತಿದವು. ಒಬ್ಬರಿಗೊಬ್ಬರು ಭೇಟಿಯಾದಾಗ "ಜಯಭೀಮ" ಎಂದು ಅನ್ನಹತ್ತಿದರು. 'ಜಯಭೀಮ' ಈ ಘೋಷಣೆ ಎಲ್ಲ ನವ ಬೌದ್ಧರಿಗೆ ಒಂದು ರೀತಿಯ ಆತ್ಮಶಕ್ತಿಯನ್ನೇ ನೀಡಹತ್ತಿತು. ನವ ಬೌದ್ಧರು ಸತ್ತ ದನದ ಮಾಂಸವನ್ನು ತಿನ್ನುವುದನ್ನು ಬಿಟ್ಟರು; ಆಡು, ಕುರಿ, ಕೋಳಿ ಮಾಂಸ ತಿನ್ನಲು ಅಡ್ಡಿ ಇರಲಿಲ್ಲ. ಪ್ರತಿ ಬುಧವಾರ, ಗುರುವಾರ ಮತ್ತು ರವಿವಾರ ಕೊನೆ ವಾರದಲ್ಲಿ ಮೂರು ಸಲ ಸಾಮೂಹಿಕವಾಗಿ ಬೌದ್ಧ ಪ್ರಾರ್ಥನೆಗಳು ಊರಲ್ಲಿ ಆರಂಭವಾದವು. ಹರಿಜನರ ಕೇರಿಗಳಲ್ಲಿ ಬುದ್ಧ ಮತ್ತು ಅಂಬೇಡ್ಕರ್‌ರಿಗೆ ಸಂಬಂಧ ಪಟ್ಟ ಹಬ್ಬಗಳು ಮಾತ್ರ (ಬುದ್ಧ ಜಯಂತಿ, ಅಂಬೇಡ್ಕರ್ ಜಯಂತಿ ಆಚರಿಸಲ್ಪಡಹತ್ತಿದವು.

ಆರ್ಥಿಕವಾಗಿ, ಧರ್ಮಾಂತರದಿಂದ ನವ ಬೌದ್ಧರಿಗೆ ತೊಂದರೆಯೇ ಹೆಚ್ಚಾಗಿದ್ದರೂ ಸಹ, ಒಂದು ಹಟದಿಂದ ಅವರು ಅದನ್ನೆಲ್ಲ ಸಹಿಸಿ, ಡಾ॥ ಅಂಬೇಡ್ಕರ್ ಅವರ ಹಿಂದೆ ನಿಂತು ಇಡೀ ಜಗತ್ತಿಗೆ ಒಂದು ಆದರ್ಶದ ದಿಕ್ಕನ್ನು ಈ ಜನ ತೋರಿಸಿದರು.

ಬಕಾಲ



ಭಾಗ-1

ತೊಗಲ ಚೀಲದೊಳಗೆ
ಒಂದು ಹಗಲ ಗನಸಿನ ಕೂಸು
ಇರುಳು ಇರುವೆ ಸಾಲಾಯ್ತು
ತನ್ನೊಡಲ ಕಣ್ಬಟ್ಟೆಯಲಿ
ಕರುಳ ವ್ಯಸನ ಮಾಂಸಪರ್ವತ
ಬೆವರ ಸಮುದ್ರ ದೊಳೀಜಿ
ಬದುಕಿ ಉಳಿದ ಇರುಳಕ್ಕಿ
ಬಾಯಿಗೆ,
ಜೀವ ಜಲವನೇ ತಂದೂಯ್ದು
ಜೀವಾಂಶ ಸಂಭೂತರೆ,
ಬೆಳ್ಳಿ ಮೋಡಗಳ ಕತ್ತಿವರಸೆಗೆ
ಮಾಂಸಪರ್ವತ ಚೂರು ಚೂರು
ದಿಕ್ಕು ದಿಕ್ಕಿಗೂ ಪಾಲು
ರಾಶಿ ಕೆಂಡಕೆ ಮುಖನೊಡ್ಡಿದ
ಪಾಲದಾರರೇ ಬನ್ನಿ
ನಿಮ್ಮೆದೆಯ ಕವಲುಗಳೆಲ್ಲೇನು ಚಿಗುರು?
ಉಗುರು ಉಗುರಿಗೂ ಹೂವುಗಳು
ಹೂದುಂಬಿದ ಕಂಕುಳೆತ್ತಲಾಗದು
ಇಳಿಸಲಾಗದು,
ಗೊಂಚಲು ಗೊಂಚಲೇ ಕತ್ತರಿಸಿಕೊಳ್ಳಿ
ನಾಲಿಗೆ ನಲಿದಾಡಿ
ಸಕಲ ಸೂರ್ಯರ ಅಂದಾಲಯದಲ್ಲಾಡುವ
ಪಾಡುವ – ಕಾಡುವ
ಹೆತ್ತವರೊಡಲಿಗೆ ಕೆಂಡವಸುರಿದು
ಗಗನ ಚಂದ್ರನ ಮನೆ ಗೆಳೆತಂದು
ನಿಂತ ನಿಲುವಿಗೇ ಕೊಂದು ತಿಂದಂಥ
ತಂದೆಯರೆ?
ಬಸಿರ ಕಡಲೊಡೆಯುವ ಮುಂಚೆ
ತುಂಬಿದ ತಣ್ಣೀರ ಗಡಿಗೆಯೊಡೆದು
ಮಡದಿ ಕನಸಿನ ಆನಂದ ಪತಿಯರು
ಬಣ್ಣ ಬಣ್ಣದ ಕುಲಾವಿಗಳಿಡಿದು
ಸರತಿ ಸಾಲಾದ ಬಾಣ್ತೀ
ತಾಯಂದಿರೆ,
ನನ್ನ ಅಂಗೈಯಲ್ಲಾಡುವ
'ಮುಟ್ಟಬಾರದ' ಕೂಸಿಗೊಂದ
ಹೆಸರಕೊಡಿ, ಹೆಸರಕೊಡಿ,
ಸೀಳುಕ್ಕೆಯಲಿ ಬಿದ್ದಂಥ ಬೀಜವೇ
ದಟ್ಟಡವಿಯ ನಡುನೆತ್ತಿಯ ಪೊಳಕೆ
ಹುಟ್ಟಿದ ಬೆತ್ತಲ ಗಿಡ ಬಾಲೆ
ನೆಗೆಯುತ್ತ, ನಲಿಯುತ್ತ ಕುಣಿಯುತ್ತ
ನನ್ನೆದೆಯ ಕಣಿವೆಯಲಿ ಜುಳಜುಳ
ಹರಿಯುತ್ತ,
ಬಿಟ್ಟಂಥ ತೊಗಲ ಗಾಳೀಪಟಕೆ
ಕರುಳ ಬಾಲಂಗೋಚಿ
ಹಾರುತಿದೆ - ಹಾರುತಿದೆ

ನೀನುಟ್ಟ ಹಸಿರು ಸೀರೆಯ ಸೆರಗು
ರಾಷ್ಟ್ರವೆಂದು ಹಾರುತಿದೆ
ಅರಬ್ಬೀ ಸಮುದ್ರದಗಲ.
ಅಂಗೈಯಲ್ಲಾಡುವ ಕೂಸ
ಕಿರುಬೆರಳಿನುಂಗುರದಾಸೆಗೆ
ಬೆರಳ ಕತ್ತರಿಸಿದರು
ಕಡಲ ಕೊಕ್ಕರೆ ಬಂದು
ಉಂಗುರವ ನುಂಗಿತ್ತು
ಎತ್ತಬಾರದ ಕಲ್ಲು
ಎತ್ತಬಾರದೆ ತಾಯಿ
ನಡೆಯಬಾರದ ದಾರಿ
ನಡೆಯಬಾರದೆ ತಾಯಿ?
ಹೂವಿರದ ಗಿಡವೊಂದು
ಬಿದ್ದು ಬೀಳಾಯ್ತಲ್ಲ
ಮುಡಿದ ಮಲ್ಲಿಗೆ ಎದೆಯಲ್ಲಿ
ಸೋರುತಿದೆ ರಕ್ತ
ಬಿದ್ದಬೀಳಿಗೆ ಅದೆಷ್ಟು ಹದ್ದು ನಾಯಿಗಳು
ತಾಯಿ;
ಬಯಲ ಕುಸುಮದ

ಮೇಲೊಂದಾಲಯದ
ದುಂಬಿ ಬಂದೆರಗಿತ್ತು

ಪಾತಾಳ ಪಕ್ಷಿಗೆ ಬಿದ್ದೊ
ಗಾವುದ ಗಾವುದ ಕನಸುಗಳು
ರೆಕ್ಕೆ ತೆಕ್ಕೆಯ ಅಮಲಿನಲೆದ್ದೊ
ಬೆಚ್ಚಾವುಗಳು,
ಗೋಣಿ, ಆಲವ ಅರಸಿ ಆಕಾಶಕೆ
ತಾನುಂಡ ಫಲವನು ತನ್ನ ಬಳಗವು
ಭೂಸೂತಕದಲಿ ಮಹಾಭಾರತವು
ಸ್ತ್ರೀ ಸೂತಕದಲಿ ರಾಮಾಯಣವು
ಅಕಾ ರಾತ್ರಿಯಲಿ ಹಗಲೆಚ್ಚರವು
ಅಕಾಲ – ಬಕಾಲ ಮುನಿಯೇ
ನಿನ್ನೆಡ ತೊಡೆ ಮಾಂಸದಲಿ
ಮಲವೇ ಫಲವು
ಫಲವೇ ವೃಕ್ಷವು
ಆಕಾಶದಗಲ – ಸಮುದ್ರದಗಲ
ಭೂಮಿ – ಆಕಾಶ ವೆಂಬೆರಡು ಘನವು
ನಿನ್ನೆದೆಯ ಜಲ ಗಣ್ಣಿನಲ್ಲಿ ಅರಳಿದಂಥ
ಹಾಲು ಗುಸುಮಗಳು
ಬಕಾಲ ಮುನಿಯೇ ಬಾ
ಬಯಲ ಕುಸುಮವ ತಾ॥

ಭಾಗ-2



ಕೋಳಿ, ಕೊಕ್ಕರೆ ಗರಿಗೆದರಿ ಕುಣಿತ
ಗರಿಗಣ್ಣ ನಕ್ಷತ್ರಗಳೋ
ನೀಲಾಕಾಶಕೆ ಬಿದ್ದ ಬೆಂಕಿ
ಕೆಂಭೂತಗಳು ಕಣಗಿಳಿದೋ
ಮಣ್ಣ-ಕೆಂಡ-ದುಂಡೆ ರೂಪ-ದನಿ
ತುದಿಗಾಲ ಗಿಡಬಾಲೆ ಕುಣಿಯುತ್ತಾಳೆ.
ನೆತ್ತಿಸೋಗೆ ಒರಲ ಗರತಿಯರು
ಮನೆ ಮನೆಯ ದಿಪಗಳ ಹಚ್ಚಿ
ಅಡವಿಯ ಕಸ ಗುಡಿಸುತ್ತಾರೆ.
ಉಳುವ ರೈತ ನೇಗಿಲ ನಾಲಿಗೆ
ತೆಂಗಿನ ಗರಿ ಉಯ್ಯಾಲೆ ಎಳೆನಾಗರವು
ದಣಿ ದೂರ ಆಗೇವಿನಲಿ ಉಳ್ಳಾಡಿ ಹರಿದು
ಕಲ್ಲ ಕಣವೆಯ ನೀರೊಳಗಿಳಿ.
ನೀನು ಹಾರಿ ಹತ್ತಿಕುಂತ
ಬೆಟ್ಟತುದಿ ಗರ್ಭಗುಡಿ ಗೆದ್ದಲು
ಮೂಗುತ್ತದ ಅರಮನೆಯಲ್ಲಿ
ರಾಜಸರ್ಪನ ಸಾವಾಯ್ತು.
ಸಾವಿಗೆ ಸದ್ದಿಲ್ಲ
ಸೈನ್ಯದಿರುವೆಯ ಮುತ್ತಿಗೆಯಾಯ್ತು
ಇಲ್ಲ. ಅಲ್ಲಿಲ್ಲ ಸತ್ತಸಾವ
ಕಂಡರಿತವರಿಲ್ಲ. ಮುಳುಗಿ
ಮುಂಗಾಣುವ ಸಾವಿನ ಕಣದ ಸುಗ್ಗಿಯಲೆದ್ದು
ಕುಂತು-ನಿಲ್ಲುವ
ನಿಲುವಿಗೇ 'ನೆಲಪಟ್ಟು' ಬಡಿದು
'ಮರಹುಟ್ಟಿ-ಮರಬಿದ್ದ' ಜಾಹಿರಾತುಗಳು
ನಾವು. ನಮ್ಮವರ ಅಂಗಡಿಗಳು
ರಾತ್ರಿ-ಹಗಲೆಂಬ ದಾಹದಂಬಲವೇ
ಅಲ್ಲಮನ ಬಾಯ್ದೊಂಬಲಕೆ
ಕೈಯೊಡ್ಡಿದ 'ಕರುಣದ ಕಂದ'
ನೀನೊಂದು ಹಸಿರುಮರ ಬುಡದ
ಗೆದ್ದಲ ಜೀವ-ಜೀವ ನೀರು
ಎಲೆ, ಹೂವು, ಕಾಯಿ, ರಣ
ಹಣ್ಣ. ಚಿತ್ತದೊಳಗೆ
ಬಂಭತ್ತು ಕ್ಲೇಶ ತತ್ತಿಗಳು
ಬಾಯಿ ಬಿಟ್ಟ ಅಂಗಾಲ-ಬಿರುಕಿನ
ಆಲಾಪನೆಗೆ
ಅವ್ವನೊಡ್ಡಿದ ಸೆರಗು
ಸೆರಗು ಬತ್ತಿಯು ಮಾಡಿ
ಜೀವದೆಣ್ಣೆಯ ಸುರಿದು
ನನಂಗೈಯ ಮೇಲುರಿಯುತಿರುವ
ಜ್ಯೋತಿ
ಕುಂತಾಗ ತೊಡೆಯಮೇಲೆ
ನಿಂತಾಗ ನಡುನೆತ್ತಿಯ ಮೇಲೆ
ಕಾಲು ಬಂದು ನಡೆಯುಲು
ಚಕ್ರತಿರುಗಿ ಅಂಗೈಯ ಮೇಲೆ
ನಿದ್ದೆ ಎಂಬುದು ನನ್ನ ನುಂಗಿ ಮಲಗಿರಲು
ಎದೆಯ ಮೇಲೂ
ಅರಿದ ಸೆರಗ ಮರೆಯಲ್ಲಿ
ಕರುಳ ಬತ್ತಿಯುರಿಯುತಿದೆ
ಗಿಡ ಬಾಲೆಯೇ ನಿಲ್ಲು, ನಿಲ್ಲು
ನಿನ್ನ ಕಣ್ಣ ರೆಪ್ಪೆಯಲಿ ಕಟ್ಟದ
ಕಾಲ ತುಡಿಬೆ ಜೇನಿಗೆ ಕೈಯಿಕ್ಕಿ
ಓಡಿದ ಅಡವಿಯ
ಬಸವನ-ಹುಳದ ಹುಡುಗನ
ಮುಟ್ಟಲು.
ಬೆನ್ನಟ್ಟಿ ಹಿಡಿಯಲು
ಅವನೆದೆಯ ಕದವ ತಟ್ಟತೆರೆದು
ನಟ್ಟ ನಡುಮನೆಯ ಹುಚ್ಚಳ್ಳು
ಕಣಜಕ್ಕೆ ದುಮುಕಿದವಳೇ
ಅಲ್ಲಾಂಗತ ಬಿದ್ದಿರುವ
ಕುಸುಮದ ಅವಯವಗಳ
ಆಯ್ದು-ಆಲಂಗಿಸಿ ಅತ್ತು-ಕರೆದು
ಫಲವೇನು ತಂಗಿ,
ನಿನ್ನ ಕೈಗೆಟುಕದ ಫಲ
ಪಕ್ಷಿಯವನು,
ಅವನ ಕಾಲುಗಳಲ್ಲಿ ಚಕ್ರ ಇದ್ದಾವು
ನೀನೇರಿದ ಆಸೆಗುದುರೆಯ ಬೆನ್ನ
ಬೆವರೊಳಾಡುವ ಕ್ರಿಮಿ-ಕೀಟಗಳ
ಆಯ್ದು ತಿನ್ನುವ
ಆದಿಪಕ್ಷಿಯದು
ಖಂಡ-ಖಂಡವನೇ ಥಾಟಿ
ಪಂಜರವ ಬಿಟ್ಟು ಪಂಜರಕೆ
ಹಾರುತ್ತ-ಹಾಡುತ್ತ ಬಂತು
'ಭಂತೆ'
ಬಕಾಲಮುನಿಯೆ

ಕೆ. ಬಿ. ಸಿದ್ದಯ್ಯ.

(ಬಕಾಲ; ಆದಿಜಾಂಬವ ಚರಿತ್ರೆ ಯಲ್ಲಿ ಬರುವ ಒಬ್ಬ ಮುನಿಯು)

ಮತಾಂತರ ಯಾಕೆ ?



ಮತಾಂತರ ಮಕ್ಕಳಾಟವಲ್ಲ. ಅದು ಮನರಂಜನೆಯ ವಸ್ತುವೂ ಅಲ್ಲ. ಮನುಷ್ಯನ ಬದುಕನ್ನು ಯಶಸ್ವಿಗೊಳಿಸುವುದು ಹೇಗೆ ಎಂಬುದೇ ಅದರ ತಿರುಳು; ಯಾನ ಹೊರಡುವ ಮುನ್ನ ಅಂಬಿಗ ಹೇಗೆ ಎಲ್ಲ ಥರದ ತಯಾರಿ ಮಾಡಿಕೊಳ್ಳಬೇಕೋ ಹಾಗೇ ನಾವೂ ಸಿದ್ಧತೆ ಮಾಡಿಕೊಳ್ಳಬೇಕು. ಎಷ್ಟು ಜನ ಹಿಂದೂ ಚೌಕಟ್ಟಿನಿಂದ ಆಚೆ ಬರಲು ಸಿದ್ಧರಿದ್ದಾರೆ ಎಂದು ನನಗೆ ತಿಳಿಯದಿದ್ದರೆ, ನಾನು ಮತಾಂತರಕ್ಕೆ ಸಿದ್ಧತೆ ನಡೆಸಲಾರೆ.

ಒಬ್ಬ ಸಾಮಾನ್ಯ ಮನುಷ್ಯನಿಗೆ ಈ ಮತಾಂತರದ ವಿಚಾರ ತುಂಬಾ ಪ್ರಮುಖವಾದ, ಆದರೆ ಅರ್ಥಮಾಡಿಕೊಳ್ಳಲು ಕಠಿಣವಾದ ವಿಚಾರ.

ವರ್ಗ ಸಂಘರ್ಷ

ಮತಾಂತರಕ್ಕೆ ಎರಡು ಮುಖಗಳಿವೆ. ಒಂದು ಸಾಮಾಜಿಕ ಮತ್ತು ಧಾರ್ಮಿಕ. ಎರಡನೆಯದು ಐಹಿಕ ಹಾಗೂ ಆಧ್ಯಾತ್ಮಿಕ. ಯೋಚನೆಯ ಧಾಟಿ ಯಾವುದೇ ಆಗಿರಲಿ. ಮೊದಲು ಇದರ ಆರಂಭವನ್ನು ಅಂದರೆ ಅಸ್ಪೃಶ್ಯತೆಯ ಸ್ವರೂಪ ಆಚರಣೆಗಳನ್ನು ಅರಿಯುವುದು ಅತ್ಯಗತ್ಯ. ಈ ತಿಳಿವಳಿಕೆಯಿಲ್ಲದೇ ಹೋದರೆ, ಮತಾಂತರದ ನಿಜವಾದ ಅಂತರಾರ್ಥವನ್ನು ನೀವು ತಿಳಿಯಲಾರಿರಿ.

ಅಸ್ಪೃಶ್ಯತೆಯ ಸ್ವರೂಪ ಮತ್ತು ನಿಜಜೀವನದಲ್ಲಿ ಅದರ ಆಚರಣೆಯನ್ನು ಸ್ಪಷ್ಟವಾಗಿ ತಿಳಿಯಬೇಕಾದರೆ ನಿಮ್ಮ ವಿರುದ್ಧ ನಡೆದಿರುವ ಅಸಂಖ್ಯ ದೌರ್ಜನ್ಯಗಳನ್ನು ನೆನಪಿಗೆ ತಂದುಕೊಳ್ಳಿ ಎಂದು ಹೇಳ ಬಯಸುತ್ತೇನೆ; ಆದರೆ ಇದೆಲ್ಲ ಏಕೆ ನಡೆಯುತ್ತದೆಂದು ನಿಮ್ಮಲ್ಲಿ ಕೆಲವರು ಮಾತ್ರ ಮನಗಂಡಿರಬಹುದು. ಈ ದಬ್ಬಾಳಿಕೆಯ ಮೂಲವೇನು ? ಇದರ ಬೇರು ಯಾವುದು ? ನನ್ನ ಮಟ್ಟಿಗೆ ಇದನ್ನು ಅರ್ಥಮಾಡಿಕೊಳ್ಳುವುದು ತುಂಬಾ ಅಗತ್ಯ.

ಇದು ಇಬ್ಬರು ಪ್ರತಿಸ್ಪರ್ಧಿಗಳ ವ್ಯಾಜ್ಯವಲ್ಲ. ಅಸ್ಪೃಶ್ಯತೆಯ ಸಮಸ್ಯೆ–ಒಂದು ವರ್ಗ ಸಂಘರ್ಷದ ರೀತಿಯದು. ಇದು ಸವರ್ಣೀಯರು ಮತ್ತು ಅಸ್ಪೃಶ್ಯರ ನಡುವಣ ಸಂಘರ್ಷ. ಇದು ಒಬ್ಬ ಮನುಷ್ಯ ಮಾತ್ರವಲ್ಲ., ಬದಲಿಗೆ ಒಂದು ವರ್ಗ, ಇನ್ನೊಂದು ವರ್ಗಕ್ಕೆ ಮಾಡುವ ಅನ್ಯಾಯವಿದು. ಈ ವರ್ಗ ಸಂಘರ್ಷವು, ಒಂದು ವರ್ಗದೊಡನೆ ಇನ್ನೊಂದು ವರ್ಗ ಎಂಥ ಸಂಬಂಧ ಇಟ್ಟುಕೊಂಡಿರಬೇಕೆಂಬುದನ್ನು ಸೂಚಿಸುತ್ತದೆ. ನೀವು ಇತರರೊಡನೆ ಸಮಾನ ಸ್ಥಾನ ಮಾನ ಕೇಳಿದ ಕೂಡಲೇ ಸಂಘರ್ಷ ಶುರುವಾಗುತ್ತದೆ.....

ಅವರ ಸಿಟ್ಟಿನ ಕಾರಣ ಸರಳವಾಗಿದೆ. ನೀವು ಅವರೊಡನೆ ಸರಿಸಮಾನವಾಗಿ ವರ್ತಿಸಿದ ಮಾತ್ರಕ್ಕೆ ಅವಮಾನವಾಗುತ್ತದೆ. ಅಸ್ಪೃಶ್ಯತೆಯೆನ್ನುವುದು ಅಲ್ಪಕಾಲಿಕವಾದ ಅಥವಾ ತಾತ್ಕಾಲಿಕವಾದ ಸ್ಥಿತಿಯಲ್ಲ; ಇದು ಶಾಶ್ವತವಾದದ್ದು. ನೇರವಾಗಿ ಹೇಳುವುದಾದರೆ, ಹಿಂದೂಗಳು ಮತ್ತು ಅಸ್ಪೃಶ್ಯರ ನಡುವಣ



ಸಂಘರ್ಷವೇ ಶಾಶ್ವತವಾದದ್ದು. ಹಿಂದೂ ಸವರ್ಣೀಯರ ನಂಬಿಕೆಯಂತೆ' ನಿಮ್ಮನ್ನು ಸಮಾಜದ ಕನಿಷ್ಟತಮ ಸ್ಥಾನದಲ್ಲಿರಿಸಿರುವ ಧರ್ಮವೇ ನಿರಂತರವಾದದ್ದು. ಆ ಕಾರಣ ಈ ಸಂಘರ್ಷವೂ ನಿರಂತರವಾದದ್ದೇ. ಇದರಲ್ಲಿ ಕಾಲ ಸಂದರ್ಭಕ್ಕನುಗುಣವಾಗಿ ಯಾವ ಬದಲಾವಣೆಯೂ ಸಾಧ್ಯವಿಲ್ಲ. ಇಂದು ನೀವು ಅತ್ಯಂತ ಕೆಳಸ್ಥಾನದಲ್ಲಿದ್ದೀರಿ. ಮತ್ತು ಎಂದೆಂದಿಗೂ ಅದೇ ಕೆಳಸ್ಥಾನದಲ್ಲಿ ಉಳಿಯುತ್ತೀರಿ. ಅಂದರೆ, ಹಿಂದೂಗಳು ಮತ್ತು ಅಸ್ಪೃಶ್ಯರ ಸಂಘರ್ಷವೂ ಸದಾಕಾಲ ಉಳಿದೇ ಉಳಿಯುತ್ತದೆ.

ಈ ಸಂಘರ್ಷವನ್ನು ನೀವು ಹೇಗೆ ಎದುರಿಸಿ ಉಳಿಯುತ್ತೀರಿ ಎಂಬುದೇ ಇಲ್ಲಿ ಮುಖ್ಯ ಪ್ರಶ್ನೆ. ನೀವು ಈ ಬಗ್ಗೆ ವಿಚಾರ ಮಾಡದಿದ್ದರೆ, ಹೊರ ದಾರಿಯೂ ಹೊಳೆಯುವುದಿಲ್ಲ. ಹಿಂದೂಗಳ ಕಟ್ಟಪ್ಪಣೆಗೆ ವಿಧೇಯರಾಗಿ ಉಳಿಯಬಯಸುವವರು ಅವರ ಗುಲಾಮರಾಗೇ ಉಳಿಯುವಂಥವರು. ಈ ಪ್ರಶ್ನೆಯ ಬಗ್ಗೆ ತಲೆಕೆಡಿಸಿಕೊಳ್ಳಬೇಕಿಲ್ಲ; ಆದರೆ ಯಾರು ಆತ್ಮಗೌರವ ಸಮಾನತೆಯಿಂದ ಬದುಕ ಬಯಸುತ್ತಾರೋ, ಅಂಥವರು ಯೋಚನೆ ಮಾಡಲೇಬೇಕು.

ದ್ದಾರೆ. ಈ ಸನ್ನಿವೇಶಗಳಲ್ಲಿ ಬಿಕ್ಕಟ್ಟಿನ ಸಂದರ್ಭ ಬಂದಾಗ, ಎದ್ದು ನಿಂತು ಹೋರಾಡಲು ಇವರ ಸಂಖ್ಯಾಬಲ ಏನೇನೂ ಪ್ರಯೋಜನಕ್ಕೆ ಬರುವುದಿಲ್ಲ. ಆರ್ಥಿಕ ಬಲದ್ದೂ ಇದೇ ಸ್ಥಿತಿ. ಹಾಗೆ ನೋಡಿದರೆ, ನಿಮಗೆ ಸ್ವಲ್ಪ ಸಂಖ್ಯಾ ಬಲವಾದರೂ ಇರಬಹುದು ಆದರೆ ಹಣಕಾಸಿನ ಬಲವಂತೂ ಏನೇನೂ ಇಲ್ಲ. ನಿಮ್ಮಲ್ಲಿ ಯಾವುದೇ ವಾಣಿಜ್ಯ; ವ್ಯಾಪಾರವಿಲ್ಲ ಉದ್ಯೋಗವಿಲ್ಲ; ಭೂಮಿಯಿಲ್ಲ– ಮೇಲ್ಜಾತಿಯವರು

ನಾನು ಈವರೆಗೆ ಹೇಳಿದ್ದೆಲ್ಲ ಸರಿ ಎಂದಾದರೆ. ಇದರಿಂದ ಹೊರಡುವ ತೀರ್ಮಾನಗಳನ್ನು ನೀವು ಒಪ್ಪಲೇಬೇಕಾಗುತ್ತದೆ. ಅಂದರೆ, ನೀವು ನಿಮ್ಮ ಬಲವನ್ನಷ್ಟೇ ನೆಚ್ಚಿಕೊಂಡರೆ. ಎಂದೆಂದೂ ಹಿಂದೂಗಳ ದಬ್ಬಾಳಿಕೆಯನ್ನು ಎದುರಿಸಲಾರಿರಿ. ನೀವು ಬಲಹೀನರೆಂಬ ಕಾರಣಕ್ಕೇ ನೀವು ತುಳಿತಕ್ಕೊಳಗಾಗಿದ್ದೀರಿ ಎಂಬುದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ.

ಯಾಕೆಂದರೆ ನೀವಷ್ಟೇ ಅಲ್ಪಸಂಖ್ಯಾತರಲ್ಲ. ಮುಸ್ಲಿಮರೂ ಅಲ್ಪಸಂಖ್ಯಾತರೇ. ಮಹರ್, ಮಾಂಗ್ ಜನರಂತೆ, ಹಳ್ಳಿಗಳಲ್ಲಿ ಅವರ ಮನೆಗಳೂ ಕಡಿಮೆಯೇ, ಆದರೆ ಮುಸ್ಲಿಮರನ್ನು ಮುಟ್ಟುವ ಧೈರ್ಯ ಯಾರಿಗೂ ಬರುವುದಿಲ್ಲ. ನೀವು ಮಾತ್ರ ಸದಾ ಸರ್ವದಾ ದಬ್ಬಾಳಿಕೆಯ ಬಲಿಪಶುವಾಗುತ್ತೀರಿ. ಯಾಕೆ ಹೀಗೆ ? ಹಳ್ಳಿಯಲ್ಲಿ ಮುಸ್ಲಿಮರದು ಎರಡೇ ಮನೆಯಿರಲಿ ಅವರನ್ನು ಯಾರೂ ಮುಟ್ಟುವುದಿಲ್ಲ. ಅದೇ ನಿಮ್ಮದು ಹತ್ತು ಮನೆಯಿದ್ದರೂ, ಇಡೀ ಹಳ್ಳಿಯೇ ನಿಮ್ಮ ಮೇಲೆ ದಬ್ಬಾಳಿಕೆ ನಡೆಸುತ್ತದೆ, ಹೀಗೇಕಾಗುತ್ತದೆ ? ತುಂಬಾ ಪ್ರಸ್ತುತವಾದ ಪ್ರಶ್ನೆಯಿದು. ಇದಕ್ಕೆ ನೀವು ಉತ್ತರವನ್ನು ಹುಡುಕಬೇಕು.

ಕುಡಿಯಲೂ ನೀರು ಕೊಡದ, ಕೊನೇಪಕ್ಷ ದೇವರನ್ನೂ ನೋಡಲು ಬಿಡದ ಧರ್ಮ ಧರ್ಮವೇ ಅಲ್ಲ. ಅದು ಪಾಪದ, ಕೊಚ್ಚೆಯ ರಾಶಿ. ಅಂತಹುದನ್ನು ಧರ್ಮ ಎಂದು ಕರೆಯಬಾರದು. ನೀವು ವಿದ್ಯಾವಂತರಾಗುವುದನ್ನು ನಿಷೇಧಿಸಿದ, ನಿಮ್ಮ ಭೌತಿಕ ಸುಖಗಳನ್ನೆಲ್ಲಾ ಸರ್ವನಾಶ ಮಾಡಿದ ಧರ್ಮದಲ್ಲಿ ನೀವು ಒಂದು ಕ್ಷಣ ಕೂಡಾ ಇರಬಾರದು. ಸಹಮಾನವರ ಬಗ್ಗೆ ಪ್ರೇಮ. ಕನಿಕರ ತೋರಿಸದ ಧರ್ಮ ಧರ್ಮವೇ ಅಲ್ಲ. ಪ್ರಾಣಿಗಳನ್ನು ಕೊಂದರೆ ಪಾಪ ಎಂದು ತನ್ನ ಅನುಯಾಯಿಗಳಿಗೆ ತಿಳಿಸುತ್ತಾ. ಸಮಾನ ಮಾನವರನ್ನು ಕ್ರೂರವಾಗಿ ಹಿಂಸಿಸುವುದನ್ನು ನಿಜವಾಗಿಯೂ ಧರ್ಮ ಎನ್ನಬೇಕೆ ? ಕೂಡದು. ಬರೀ ಮೋಸ. ವಂಚನೆ.

— ಡಾ॥ ಬಿ.ಆರ್. ಅಂಬೇಡ್ಕರ್.

ನಾವು ಹೇಗೆ ಈ ಸಂಘರ್ಷವನ್ನು ಎದುರಿಸಿ ಬದುಕುಳಿಯುವುದು ? ನನ್ನ ಮಟ್ಟಿಗೆ ಇದೇನೂ ಕಠಿಣ ಪ್ರಶ್ನೆಯಲ್ಲ.

ಇಲ್ಲಿ ನೆರೆದವರು, ಯಾವುದೇ ಸಂಘರ್ಷದಲ್ಲಿ ಬಲಶಾಲಿಯಾದವನೇ ಗೆಲ್ಲುವನೆಂದು ಒಪ್ಪಲೇಬೇಕು. ಬಲವಿಲ್ಲದವನು ಗೆಲುವನ್ನು ನಿರೀಕ್ಷಿಸಲಾಗದು. ಈ ಮಾತನ್ನು ಅನುಭವವೇ ಸಾಬೀತು ಮಾಡಿದೆ. ನಾನೇನೂ ನಿದರ್ಶನ ಕೊಟ್ಟು ಹೇಳಬೇಕಾದ್ದಿಲ್ಲ.

ಇದರಿಂದ ಉದ್ಭವವಾಗುವ ಪ್ರಶ್ನೆಯೆಂದರೆ–ಈ ಹೋರಾಟದಲ್ಲಿ ಬದುಕುಳಿಯುವಷ್ಟು ಶಕ್ತಿ ನಿಮಗಿದೆಯೇ ? ಮನುಷ್ಯನ ಶಕ್ತಿ ಮೂರು ಬಗೆಯದು. 1. ಮಾನವ ಬಲ (ಸಂಖ್ಯಾ ಬಲ) 2. ಹಣಕಾಸು ಬಲ ಮತ್ತು 3. ಬೌದ್ಧಿಕ ಶಕ್ತಿ. ನಿಮ್ಮಲ್ಲಿ, ಈ ಮೂರರಲ್ಲಿ ಯಾವ ಬಗೆಯ ಬಲವಿದೆ ? ಸಂಖ್ಯಾ ಬಲದ ಪ್ರಶ್ನೆ ನೋಡಿದರೆ, ನೀವು ಅಲ್ಪ ಸಂಖ್ಯಾತರು. ಮುಂಬಯಿ ಪ್ರೆಸಿಡೆನ್ಸಿಯಲ್ಲಿ ಅಸ್ಪೃಶ್ಯರು ಇಡೀ ಜನಸಂಖ್ಯೆಯ ಕೇವಲ ಎಂಟನೇ ಒಂದು ಭಾಗದಷ್ಟಿದ್ದಾರೆ. ಅದೂ ಅಸಂಘಟಿತರಾಗಿದ್ದಾರೆ. ಅವರ ಒಳ ಜಾತಿಗಳೇ ಅವರನ್ನು ಒಂದಾಗಲು ಬಿಟ್ಟಿಲ್ಲ. ಅವರು ಒಟ್ಟಾಗಿಯೂ ಇಲ್ಲ. ಹಳ್ಳಿ ಹಳ್ಳಿಗಳಲ್ಲಿ ಹಂಚಿಹೋಗಿ

ಬಿಸಾಕುವ ರೊಟ್ಟಿಯ ತುಣುಕೇ ನಿಮ್ಮ ಜೀವನಾಧಾರ. ನಿಮಗೆ ಆಹಾರವಿಲ್ಲ, ಬಟ್ಟೆಬರೆಯಿಲ್ಲ. ಇನ್ನು ನಿಮಗೆ ಇನ್ನೆಂಥ ಹಣಕಾಸಿನ ಬಲ ಬರಲು ಸಾಧ್ಯ ? ಕಾನೂನಿನ ಮೂಲಕ ಸಾಂತ್ವನ ಪಡೆಯುವ ಸಾಮರ್ಥ್ಯವೂ ನಿಮಗಿಲ್ಲ. ನ್ಯಾಯಾಲಯದ ಖರ್ಚುವೆಚ್ಚ ಭರಿಸಲಾಗದ ಸಾವಿರಾರು ಅಸ್ಪೃಶ್ಯರು ಹಿಂದೂಗಳಿಂದ ಆಗುವ ಅಪಮಾನ, ದಬ್ಬಾಳಿಕೆ, ದಮನಗಳನ್ನು ಒಂದೇ ಒಂದು ವಿರೋಧದ ನಿಟ್ಟುಸಿರೂ ಇಲ್ಲದೆ ಸಹಿಸಿಕೊಳ್ಳುತ್ತಾರೆ.

ಇನ್ನು ಬೌದ್ಧಿಕ ಶಕ್ತಿಯ ಪ್ರಶ್ನೆಗೆ ಬಂದರೆ, ಇನ್ನೂ ಶೋಚನೀಯ ಸ್ಥಿತಿ. ಇಷ್ಟು ಕಾಲ ಅಪಮಾನ. ದಬ್ಬಾಳಿಕೆಯನ್ನು ವಿರೋಧವಿಲ್ಲದೆ ತಾಳ್ಮೆಯಿಂದ ಸಹಿಸಿಕೊಂಡ ಪ್ರವೃತ್ತಿಯೇ ಪ್ರತೀಕಾರ ಮತ್ತು ಬಂಡಾಯದ ಪ್ರಜ್ಞೆಯನ್ನು ಕೊಂದು ಬಿಟ್ಟಿದೆ. ಆತ್ಮವಿಶ್ವಾಸ, ಚುರುಕು ಮತ್ತು ಆಕಾಂಕ್ಷೆಗಳೇ ನಿಮ್ಮಿಂದ ಮಾಯವಾಗಿಬಿಟ್ಟಿವೆ. ನೀವೆಲ್ಲ ನಿಸ್ಸಹಾಯಕರಾಗಿ, ಚೈತನ್ಯಹೀನರಾಗಿ, ಪೇಲವವಾಗಿ ಬಿಟ್ಟಿದ್ದೀರಿ. ಎಲ್ಲೆಲ್ಲೂ ಸೋಲು ಮತ್ತು ನಿರಾಶವಾದದ ವಾತಾವರಣವೇ ಇದೆ. ಏನಾದರೂ ಮಾಡಲು ಸಾಧ್ಯವೆಂಬ ಅತ್ಯಲ್ಪ ಕಲ್ಪನೆಯೂ ನಿಮ್ಮ ತಲೆಗೆ ಹೋಗುವುದಿಲ್ಲ.

ನನ್ನ ಅಭಿಪ್ರಾಯದಲ್ಲಿ ಈ ಪ್ರಶ್ನೆಗೆ ಇರುವುದೊಂದೇ ಉತ್ತರ. ಹಳ್ಳಿಯ ಎರಡೇ ಮುಸ್ಲಿಂ ಮನೆಗಳಿಗೆ ಬೆಂಬಲವಾಗಿ, ಭಾರತದ ಇಡೀ ಮುಸ್ಲಿಂ ಜನಸಮುದಾಯವೇ ಎದ್ದು ನಿಲ್ಲುತ್ತದೆಂದು ಹಿಂದೂಗಳಿಗೆ ಗೊತ್ತು. ಆದ್ದರಿಂದಲೇ ಅವರನ್ನು ಮುಟ್ಟುವ ಧೈರ್ಯ ಬರುವುದಿಲ್ಲ. ಆ ಎರಡು ಮನೆಗಳು ಸಂಪೂರ್ಣ ಸ್ವತಂತ್ರ ನಿರ್ಭಯ ಬದುಕು ಬಾಳುತ್ತವೆ. ಯಾಕೆಂದರೆ ಯಾವುದೇ ಹಿಂದೂ ಅವರ ಮೇಲೆ ಆಕ್ರಮಣ ಮಾಡಿದರೆ, ಪಂಜಾಬಿನಿಂದ ಮದ್ರಾಸಿನವರೆಗೆ ಇಡೀ ಮುಸ್ಲಿಂ ಜನಸ್ತೋಮ ಅವರ ರಕ್ಷಣೆಗೆ ಧಾವಿಸುವುದೆಂದು ಅವರಿಗೂ ಗೊತ್ತು. ಅದೇ ಇನ್ನೊಂದು ಕಡೆ ನಿಮ್ಮನ್ನು ಪಾರು ಮಾಡಲು ಯಾರೂ ಬರುವುದಿಲ್ಲ. ನಿಮಗೆ ಯಾರೂ ಸಹಾಯ ಮಾಡುವುದಿಲ್ಲ. ಬಿಡಿಗಾಸಿನ ಸಹಾಯವೂ ನಿಮಗೆ ತಲುಪುವುದಿಲ್ಲ ಎಂದು ಹಿಂದೂಗಳಿಗೆ ಸ್ಪಷ್ಟವಾಗಿದೆ. ತಹಸೀಲ್ದಾರ್ ಪೊಲೀಸರು ಸವರ್ಣೀಯರಾಗಿರುತ್ತಾರೆ, ಮತ್ತು ಹಿಂದೂಗಳೂ ಅಸ್ಪೃಶ್ಯರ ವ್ಯಾಜ್ಯಗಳಲ್ಲಿ ಅವರು ತಮ್ಮ ಕರ್ತವ್ಯಕ್ಕಿಂತ ತಮ್ಮ ಜಾತಿಗೇ ಹೆಚ್ಚು ನಿಷ್ಠುರರಾಗಿರುತ್ತಾರೆ. ನೀವು ನಿಸ್ಸಹಾಯಕರೆಂಬ ಕಾರಣ

ದಿಂದಲೇ ಹಿಂದೂಗಳು ನಿಮ್ಮ ಮೇಲೆ ದಬ್ಬಾಳಿಕೆ, ದೌರ್ಜನ್ಯ ಎಸಗುತ್ತಾರೆ.

ಇದರಿಂದ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ಒಂದು– ಬಲವಿಲ್ಲದೇ ನೀವು ದಬ್ಬಾಳಿಕೆಯನ್ನು ಎದುರಿಸಲಾರಿರಿ. ಎರಡನೆಯದು–ನಿಮಗೆ ದಬ್ಬಾಳಿಕೆಯನ್ನು ಎದುರಿಸುವಷ್ಟು ಬಲವಿಲ್ಲ. ಇದರಿಂದ ಇನ್ನೂ ಒಂದು ಸಂಗತಿ ಹೊಳೆಯುತ್ತದೆ. ಅದೆಂದರೆ ಈ ದಬ್ಬಾಳಿಕೆಯನ್ನು ಎದುರಿಸಲು ನಾವು ಹೊರಗಿನಿಂದ ಶಕ್ತಿ ಪಡೆಯಬೇಕು. ಈ ಶಕ್ತಿಯನ್ನು ಸಂಪಾದಿಸುವುದು ಹೇಗೆಂಬುದೇ ಈಗ ಮುಖ್ಯ ಪ್ರಶ್ನೆ. ಈ ವಿಚಾರವಾಗಿ ನೀವೀಗ ನಿಷ್ಪಕ್ಷಪಾತ ಆಲೋಚನೆ ಮಾಡಬೇಕು.

ನೀವು ಬೇರೊಂದು ಸಮಾಜದೊಡನೆ ನಿಕಟ ಸಂಬಂಧ ಏರ್ಪಡಿಸಿಕೊಳ್ಳದಿದ್ದರೆ ಬೇರೊಂದು ಧರ್ಮಕ್ಕೆ ಸೇರಿಕೊಳ್ಳದಿದ್ದರೆ. ಆಚೆ ಕಡೆಯಿಂದ ಬಲ ಸಂಪಾದನೆ ಸಾಧ್ಯವಿಲ್ಲ ಎಂಬುದು ನಿಮಗೀಗ ಅರ್ಥವಾಗುತ್ತದೆ. ಅಂದರೆ, ನೀವು ನಿಮ್ಮ ಪ್ರಸಕ್ತ ಧರ್ಮವನ್ನು ಬಿಟ್ಟುಕೊಟ್ಟು ಇನ್ನೊಂದು ಸಮಾಜದಲ್ಲಿ ಬೆರೆತು ಹೋಗಬೇಕು ಎಂದು ಸುಸ್ಪಷ್ಟವಾಗಿ ತಿಳಿಯುತ್ತದೆ. ಹಾಗೆ ಮಾಡದೆ, ನಿಮಗೆ ಆ ಸಮಾಜದ ಶಕ್ತಿ ದೊರೆಯುವುದಿಲ್ಲ. ಆ ಶಕ್ತಿಯಿಲ್ಲದೆ ನೀವು ಮತ್ತು ನಿಮ್ಮ ಮುಂದಿನ ಪೀಳಿಗೆಗಳು ಇದೇ ದಯನೀಯ ಸ್ಥಿತಿಯಲ್ಲಿ ಬಾಳಬೇಕಾಗುತ್ತದೆ.

ಈವರೆಗೆ ನಾವು ಐಹಿಕ ಲಾಭದ ದೃಷ್ಟಿಯಿಂದ ಮತಾಂತರ ಹೇಗೆ ಅಗತ್ಯ ಎಂದು ಚರ್ಚಿಸಿದೆವು. ಈಗ ಮತಾಂತರವು ಆಧ್ಯಾತ್ಮಿಕ ಸುಖಕ್ಕೂ ಹೇಗೆ ಅತ್ಯಗತ್ಯ ಎಂಬ ದಿಕ್ಕಿನಲ್ಲಿ ನನ್ನ ಆಲೋಚನೆ ಮಂಡಿಸ ಬಯಸುತ್ತೇನೆ. ಧರ್ಮ ಎಂದರೇನು ? ಅದೇಕೆ ಅತ್ಯಗತ್ಯವಾಗಿದೆ........?

"ಯಾವುದು ಮನುಷ್ಯರನ್ನು ಆಳುತ್ತದೋ ಅದೇ ಧರ್ಮ". ಇದು ಧರ್ಮದ ನಿಜ ವ್ಯಾಖ್ಯಾನ.... ಹಿಂದೂ ಧರ್ಮದಲ್ಲಿ ವ್ಯಕ್ತಿಗೆ ಯಾವುದೇ ಸ್ಥಾನವಿಲ್ಲ. ಹಿಂದೂ ಧರ್ಮದ ಕಲ್ಪನೆಗೆ ರಚನೆಗೆ ವರ್ಗ ಕಲ್ಪನೆಯೇ ಆಧಾರ. ಒಬ್ಬ ವ್ಯಕ್ತಿ, ಇನ್ನೊಬ್ಬ ವ್ಯಕ್ತಿಯೊಡನೆ ಹೇಗೆ ವರ್ತಿಸಬೇಕೆಂದು ಹಿಂದೂ ಧರ್ಮ ಹೇಳಿಕೊಡುವುದಿಲ್ಲ. ಹೀಗೆ ವ್ಯಕ್ತಿಯನ್ನು ಗುರುತಿಸದ ಧರ್ಮ ವೈಯಕ್ತಿಕವಾಗಿ ನನಗೆ ಸ್ವೀಕಾರಾರ್ಹವಲ್ಲ....

ಒಬ್ಬ ವ್ಯಕ್ತಿಯ ಉನ್ನತಿಗೆ ಮೂರು ಅಂಶಗಳು ಬೇಕು. ಅವು-ಸಹಾನುಭೂತಿ, ಸಮಾನತೆ ಮತ್ತು ಸ್ವಾತಂತ್ರ್ಯ. ಈ ಮೂರರಲ್ಲಿ ಯಾವುದಾದರೊಂದು ಹಿಂದೂಧರ್ಮದಲ್ಲಿ ಸಿಕ್ಕುವುದೆಂದು ನಿಮ್ಮ ಅನುಭವದಿಂದ ಹೇಳಬಲ್ಲಿರಾ ?

ಅಸಮಾನತೆಯ ಇಂಥ ಜೀವಂತ ನಿದರ್ಶನ ಜಗತ್ತಿನಲ್ಲೇ ಇನ್ನೆಲ್ಲೂ ಸಿಕ್ಕುವುದಿಲ್ಲ. ಮನುಕುಲದ ಇತಿಹಾಸದಲ್ಲೇ ಅಸ್ಪೃಶ್ಯತೆಯನ್ನು ಮೀರಿಸುವಂಥ ಉಗ್ರ ಅಸಮಾನತೆ ಕಂಡು ಬರುವುದಿಲ್ಲ....ನೀವು ಇನ್ನೂ ಹಿಂದೂಗಳಾಗಿ ಮುಂದುವರಿಯುತ್ತಿರುವುದರಿಂದಲೇ ನಿಮ್ಮನ್ನು ಈ ಸ್ಥಿತಿಗೆ ತಬ್ಬಲಾಗಿದೆಯೆಂದು



ಇಂದಿನ ಹಿಂದೂಧರ್ಮಕ್ಕೆ ದೇವರು ನೀತಿ ಎರಡೂ ಇಲ್ಲ. ಇಂತಹ ಸ್ಥಿತಿ ಕೇವಲ ಮಾನವನ ಮನಸ್ಸಿನ ಪತನಕ್ಕೆ ದಾರಿ ಮಾಡಿಕೊಡುತ್ತದೆ. ಮುಂದಿನ ಪೀಳಿಗೆಯವರ ಪವಿತ್ರವಾದ ಮಹೋನ್ನತವಾದ, ಸಮಾನತೆಯ ಧರ್ಮವನ್ನು ಪುನಃನಿರ್ಮಿಸುವುದರಲ್ಲಿ ಗುರುತರವಾದ ಜವಾಬ್ದಾರಿಯನ್ನು ಹೊರಬೇಕಾಗಿದೆ. ಸಾಧುಗಳು, ಋಷಿಗಳು, ಪೂಜಾರಿಗಳು ಮತ್ತು ಯಾರೇ ಆಗಲಿ ವಿಗ್ರಹಗಳನ್ನು ಮಾತ್ರ ಪೂಜಿಸುವುದನ್ನು ಬಿಟ್ಟರೆ ಧರ್ಮವೆಂಬುದು ಆಚರಣೆಯಲ್ಲಿ ಇಲ್ಲವೇ ಇಲ್ಲ.

ಜಾತೀಯತೆ ಭದ್ರವಾಗಿ ಬೇರೂರಿರುವ ಮಾನಸಿಕ ಪ್ರವೃತ್ತಿ. ಅದು ಬುಡಸಹಿತ ನಾಶವಾಗಬೇಕಾಗಿದ್ದಲ್ಲಿ ಮಾನಸಿಕವಾದ ವಿಪ್ಲವ ಬರಬೇಕು. ಹಿಂದೂಗಳು ಜಾತೀಯತೆ ಆಚರಿಸುವಲ್ಲಿ ಅಮಾಯಕರು, ಅಮಾನುಷರಷ್ಟೇ ಅಲ್ಲ. ಅವರು ಜಾತೀಯತೆಯನ್ನ ಅಷ್ಟು ಕಟ್ಟುನಿಟ್ಟಾಗಿ, ಕ್ರೂರವಾಗಿ ಆಚರಿಸುವುದಕ್ಕೆ ಅವರಿಗೆ ಧರ್ಮದ ಬಗ್ಗೆ ಇರುವ ವ್ಯಾಮೋಹವೇ ಕಾರಣ. ಹಿಂದೂಗಳು ಜಾತೀಯತೆ ಆಚರಿಸುವಲ್ಲಿ ತಪ್ಪಿಲ್ಲ. ಜಾತಿ ಭಾವನೆಯನ್ನು ಜನ್ಮಕ್ಕೆ ಅಂಟಿಸಿರುವ ಧರ್ಮದ್ದು ತಪ್ಪು. ಧಾರ್ಮಿಕ ತತ್ವವೆಂದು ಜಾತೀಯತೆ ಬೋಧಿಸುತ್ತಿರುವ ಶಾಸ್ತ್ರಗಳೇ ನಮಗೆ ನಿಜವಾದ ಶತ್ರುಗಳು.

– ಡಾ॥ ಅಂಬೇಡ್ಕರ್.

ನನ್ನ ಭಾವನೆ. ನಿಮ್ಮಲ್ಲೇ ಮುಸ್ಲಿಮರಾದವರನ್ನು ಹಿಂದೂಗಳು ಅಸ್ಪೃಶ್ಯರೆಂದಾಗಲೀ, ಅಸಮಾನರೆಂದಾಗಲೀ, ನೋಡುವುದಿಲ್ಲ. ಕ್ರೈಸ್ತರಾದವರಿಗೂ ಅಷ್ಟೇ..

ದೇವರು ಸರ್ವಾಂತರ್ಯಾಮಿ ಎಂಬುದು ವಿಜ್ಞಾನದ ತತ್ವವೇ ಹೊರತು ಧರ್ಮದ್ದಲ್ಲ. ಯಾಕೆಂದರೆ ಧರ್ಮಕ್ಕೆ ನೇರ ಸಂಬಂಧವಿರುವುದು–ಮನುಷ್ಯನ ವರ್ತನೆ.

ನಡೆ ಮತ್ತು ನುಡಿ ಎರಡು ಧ್ರುವಗಳಾಗಿರುವಂಥ ಕ್ರೂರ ಜನಾಂಗಗಳೊಡನೆ ಹಿಂದೂಗಳನ್ನು ಜತೆಗೂಡಿ ನಿಲ್ಲಿಸಬಹುದು. ಅವರ ಬಾಯಲ್ಲಿ ರಾಮನಾಮ, ಕಂಕುಳಲ್ಲಿ ಚಾಕು, ಮಾತಾಡುವುದು ಸಂತರಂತೆ, ನಡವಳಿಕೆ ಕಟುಕರಂತೆ.

ನಾವು ಕೇವಲ ಹಿಂದೂಗಳ ಕಣ್ಣಲ್ಲಿ ಕನಿಷ್ಠ ಜನರಲ್ಲ. ಹಿಂದೂಗಳು ನಮ್ಮನ್ನು ನಡೆಸಿಕೊಳ್ಳುವ ರೀತಿಯಿಂದಾಗಿ, ಇಡೀ ಭಾರತದಲ್ಲೇ ಕನಿಷ್ಠತಮವಾಗಿಬಿಟ್ಟಿದ್ದೇವೆ. ಈ ಲಜ್ಜಾಸ್ಪದ ಸ್ಥಿತಿಯಿಂದ ಕಳಚಿಕೊಳ್ಳಬೇಕಾದರೆ, ನಮಗಿರುವುದೊಂದೇ ದಾರಿ. ಈ ಹಿಂದೂಧರ್ಮದ ಸಂಕೋಲೆಗಳನ್ನು ಕಿತ್ತೆಸೆದು, ನಿಮ್ಮನ್ನು ಬಂಧಿಸಿರುವ ಹಿಂದೂ ಸಮಾಜದ ಕಟ್ಟು ಕಳಚಿ ಒಗೆಯುವುದು.

ರುಚಿ ಬದಲಾಗಬಹುದು. ಆದರೆ ವಿಷವೆಂದೂ ಅಮೃತವಾಗಲಾರದು. ಜಾತಿ ವಿನಾಶದ ಮಾತಾಡುವುದೂ ಒಂದೇ. ವಿಷವನ್ನು ಅಮೃತವನ್ನಾಗಿ ಮಾಡುವ ಮಾತೂ ಒಂದೇ. ಸಂಕ್ಷಿಪ್ತವಾಗಿ ಹೇಳುವುದಾದರೆ, ಎಲ್ಲಿಯವರೆಗೆ ನಾವು ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಕುಷ್ಠರೋಗಿಯಂತೆ ಕಾಣಲು ಕಲಿಸುವ ಧರ್ಮದಲ್ಲಿರುತ್ತೇವೆಯೋ, ಅಲ್ಲಿಯವರೆಗೆ ಜಾತಿ ಪದ್ಧತಿಯಿಂದಾಗಿ ನಮ್ಮ ಮನದಲ್ಲಿ ಆಳವಾಗಿ ಬೇರು ಬಿಟ್ಟಿರುವ ತಾರತಮ್ಯ ಪ್ರಜ್ಞೆ ಅಳಿಸಿಹೋಗಲಾರದು. ಅಸ್ಪೃಶ್ಯರಲ್ಲಿ ಜಾತಿ ಮತ್ತು ಅಸ್ಪೃಶ್ಯತೆ ನಾಶವಾಗಬೇಕಾದರೆ, ಧರ್ಮ ಪರಿವರ್ತನೆಯೊಂದೇ ಮದ್ದು.

ಮತಾಂತರದಲ್ಲಿ ನವೀನತೆ ಅನ್ನುವುದೇನಿದೆ ? ನಿಜ ಹೇಳುವುದಾದರೆ ನಿಮಗೂ ಸವರ್ಣೀಯರಿಗೂ ಹಾಲಿ ಇರುವ ಸಾಮಾಜಿಕ ಸಂಬಂಧವಾದರೂ ಎಂಥದು? ಹಿಂದೂಗಳಿಂದ ಮುಸ್ಲಿಮರು, ಕ್ರೈಸ್ತರು ಎಷ್ಟು ಪ್ರತ್ಯೇಕವಾಗಿದ್ದಾರೋ, ನೀವೂ ಅಷ್ಟೇ ಪ್ರತ್ಯೇಕವಾಗಿದ್ದೀರಿ, ನಿಮ್ಮ ಸಮಾಜ ಮತ್ತು ಹಿಂದೂ ಸಮಾಜ ಎರಡು ಪಂಗಡಗಳಾಗಿವೆ. ಮತಾಂತರಗೊಂಡರೆ ಒಂದು ಸಮಾಜ ಒಡೆದುಹೋಯಿತೆಂದು ಯಾರೂ ಹೇಳಲು ಸಾಧ್ಯವಿಲ್ಲ. ನೀವು ಈಗಿನಂತೆಯೇ ಆಗಲೂ ಪ್ರತ್ಯೇಕವಾಗುತ್ತೀರಿ. ಮತಾಂತರದಿಂದ ಹೊಸದೇನೂ ಸಂಭವಿಸುವುದಿಲ್ಲ. ಇದು ನಿಜವೆಂದಾದರೆ, ಕೆಲವರು ಮತಾಂತರಕ್ಕೆ ಯಾಕೆ ಹೆದರಬೇಕು ? ಕೊನೆ ಪಕ್ಷ ನನಗಂತೂ ಅಂಥ ಭಯಕ್ಕೆ ಯಾವ ಕಾರಣವೂ ಹೊಳೆಯುವುದಿಲ್ಲ....

ಧರ್ಮ ಬದಲಾವಣೆಯೆಂಬುದು ಹೆಸರಿನ ಬದಲಾವಣೆಯ ಹಾಗೆ. ಧರ್ಮ ಬದಲಾವಣೆ ಮತ್ತು ಹೆಸ

ರಿನ ಬದಲಾವಣೆ ಮಾಡಿಕೊಂಡರೆ ನಿಮಗೇ ಲಾಭವಿದೆ. ನಾನು ಮುಸ್ಲಿಂ, ನಾನು ಕ್ರೈಸ್ತ, ನಾನು ಬೌದ್ಧ ಸಿಖ್ ಎಂದು ಕರೆದುಕೊಳ್ಳುವುದು ಕೇವಲ ಧರ್ಮ ಪರಿವರ್ತನೆಯಲ್ಲ. ಹೆಸರಿನ ಬದಲಾವಣೆಯೂ ಹೌದು....ಈ ಮತಾಂತರದ ಆಂದೋಳನ ಆರಂಭವಾದಾಗಿನಿಂದಲೂ. ಎಷ್ಟೋ ಜನ ಇದಕ್ಕೆ ಆಕ್ಷೇಪಣೆ ಮಾಡಿದ್ದಾರೆ. ಅಂಥ ಆಕ್ಷೇಪಣೆಗಳಲ್ಲಿ ಸತ್ಯಾಂಶವೇನಾದರೂ ಇದೆಯೇ ಎಂಬುದನ್ನು ಈಗ ಪರಿಶೀಲಿಸೋಣ....

ನಮ್ಮ ಧರ್ಮ, ನಮ್ಮ ಪೂರ್ವಿಕರ ಧರ್ಮ ಎಂಬ ಒಂದೇ ಕಾರಣಕ್ಕೆ ಈ ಧರ್ಮಕ್ಕೆ ಅಂಟಿಕೊಳ್ಳಬೇಕೆಂದು ಹುಟ್ಟಾ ಮುಟ್ಠಾಳನಾದವ ಮಾತ್ರ ಹೇಳಬಲ್ಲ. ಬುದ್ಧಿ ಸ್ಥಿಮಿತವಿರುವ ಯಾವೊಬ್ಬನೂ ಈ ವಾದ ಒಪ್ಪಿಕೊಳ್ಳಲಾರ. ಈ ವಾದ ಮುಂದಿಡುವವರು ಚರಿತ್ರೆಯನು ಓದಿದಂತೆಯೇ ಕಾಣುವುದಿಲ್ಲ. ಪ್ರಾಚೀನ ಆರ್ಯ ಧರ್ಮಕ್ಕೆ ವೈದಿಕ ಧರ್ಮವೆಂಬ ಹೆಸರಿತ್ತು. ಈ ಧರ್ಮದ ಪ್ರಮುಖ ಲಕ್ಷಣಗಳು ಮಾರು–ಗೋ ಭಕ್ಷಣೆ, ಮಧ್ಯಪಾನ ಮತ್ತು ವಿಲಾಸ, ಇವು ಆ ಧರ್ಮದ ದಿನನಿತ್ಯದ ಚಟುವಟಿಕೆಗಳಾಗಿದ್ದವು ಭಾರತದಲ್ಲಿ ಸಾವಿರಾರು ಜನ ಇವನ್ನೇ ಪಾಲಿಸಿದರು ಕೆಲವರು ಈಗಲೂ ಆ ದಿನಗಳಿಗ ಹಿಂತಿರುಗುವ ಕನಸು ಕಾಣುತ್ತಾರೆ. ಪ್ರಾಚೀನ ಧರ್ಮಕ್ಕೆ ಅಂಟಿಕೊಳ್ಳಬೇಕೆಂದಾದರೆ ಭಾರತದ ಜನತೆ ಹಿಂದೂ ಧರ್ಮ ಬಿಟ್ಟು ಭೌದ್ಧಧರ್ಮವನ್ನೇಕೆ ಒಪ್ಪಿಕೊಂಡರು ? ಯಾಕೆ ವೈದಿಕ ಮತ ತೊರೆದು ಬಂದರು ?....ಆದ್ದರಿಂದ ಹಿಂದೂ ಧರ್ಮ ಪುರಾತನ ಧರ್ಮವಲ್ಲ, ಅದು ಅವರ ಮೇಲೆ ಹೇರಿದ ಗುಲಾಮಗಿರಿ....

ಹಿಂದೂ ಸಮಾಜದ ಸುಧಾರಣೆ ನಮ್ಮ ಗುರಿಯೂ ಅಲ್ಲ. ಕಾರ್ಯಕ್ಷೇತ್ರವೂ ಅಲ್ಲ. ಸ್ವಾತಂತ್ರ್ಯ ಗಳಿಕೆ ನಮ್ಮ ಗುರಿ. ಬೇರೆ ಯಾವುದರಿಂದಲೂ ನಮಗೆ ಆಗಬೇಕಾದ್ದೇನೂ ಇಲ್ಲ. ನಮಗೆ ಮತಾಂತರದಿಂದ ಸ್ವಾತಂತ್ರ್ಯ ಸಿಕ್ಕುವುದಾದರೆ, ಹಿಂದೂ ಧರ್ಮದ ಸುಧಾರಣೆಯ ಭಾರವನ್ನು ನಾವೇಕೆ ಹೊರಬೇಕು ? ಅದಕ್ಕಾಗಿ ನಮ್ಮ ಶಕ್ತಿ, ಆಸ್ತಿ ಪಾಸ್ತಿ ಯಾಕೆ ಬಲಿ ಕೊಡಬೇಕು ? ನಮ್ಮ ಚಳವಳಿಯ ಉದ್ದೇಶ–ಹಿಂದೂ ಸಮಾಜ ಸುಧಾರಣೆ ಎಂದು ಯಾರೂ ಅಪಾರ್ಥ ಮಾಡಿಕೊಳ್ಳಬಾರದು. ನಮ್ಮ ಚಳವಳಿಯ ಉದ್ದೇಶ_ಅಸ್ಪೃಶ್ಯರಿಗೆ ಸಾಮಾಜಿಕ ಸ್ವಾತಂತ್ರ್ಯ ಸಾಧಿಸುವುದಷ್ಟೇ. ಮತಾಂತರವಿಲ್ಲವೇ ಈ ಸ್ವಾತಂತ್ರ್ಯ ಸಾಧ್ಯವಾಗಲಾರದೆಂಬುದೂ ಅಷ್ಟೇ ಸತ್ಯ.

ಅಸ್ಪೃಶ್ಯರಿಗೆ ಸಮಾನತೆಯೂ ಇಷ್ಟೇ ಅಗತ್ಯವೆಂದು ನಾನು ಒಪ್ಪುತ್ತೇನೆ. ಈ ಸಮಾನತೆ ಗಳಿಸುವುದೂ ನಮ್ಮ ಗುರಿಗಳಲ್ಲೊಂದು. ಈ ಸಮಾನತೆ, ಹಿಂದೂ ಆಗಿ ಉಳಿದುಕೊಂಡರೆ ಮಾತ್ರ ಸಾಧ್ಯ ಇಲ್ಲದಿದ್ದರೆ ಇಲ್ಲ ಎಂದು ಯಾರೂ ಹೇಳಲಾರರು. ಸಮಾನತೆಯ ಸಾಧನೆಗೆ ಎರಡು ಮಾರ್ಗಗಳಿವೆ. ಒಂದು ಹಿಂದೂವಾಗಿಯೇ ಉಳಿದುಕೊಳ್ಳುವುದು. ಎರಡನೆಯದು_ಮತಾಂತರದ ಮೂಲಕ. ಹಿಂದೂ ಚೌಕಟ್ಟಿನಲ್ಲಿ ಉಳಿದೇ ಸಮಾನತೆ ಸಾಧಿಸಬೇಕಾದರೆ ಸ್ಪೃಶ್ಯ-ಅಸ್ಪೃಶ್ಯ ಪ್ರಶ್ನೆ ನಿವಾರಣೆಯೊಂದಾದರೆ ಸಾಲದು. ಅಂತರ್ಜಾತಿ ಭೋಜನ ಮತ್ತು ಮದುವೆಗಳು ನಡೆದಾಗಲಷ್ಟೇ ಇದು ಸಾಧ್ಯ. ಅಂದರೆ ಚಾತುರ್ವರ್ಣ ಪದ್ಧತಿ ನಿರ್ಮೂಲನ ಮಾಡಿ ಬ್ರಾಹ್ಮಣ ಧರ್ಮವನ್ನು ಬುಡಮೇಲು ಮಾಡಬೇಕು ಎಂದರ್ಥ. ಇದು ಸಾಧ್ಯವೇ ? ಇಲ್ಲವಾದರೆ, ಹಿಂದೂ ಧರ್ಮದಲ್ಲೇ ಉಳಿದುಕೊಂಡು ಸಮಾನತೆಯನ್ನು ನಿರೀಕ್ಷಿಸುವುದು ವಿವೇಕ ಅನಿಸಿಕೊಳ್ಳುವುದೇ ? ಮತ್ತು ಸಮಾನತೆ ತರುವ ಪ್ರಯತ್ನಗಳಲ್ಲಿ ನೀವು ಜಯ ಗಳಿಸುವುದು ಸಾಧ್ಯವೇ ಇಲ್ಲ. ಇದಕ್ಕಿಂತ ಮತಾಂತರದ ಹಾದಿಯೇ ಎಷ್ಟೋ ಸರಳವಾದದ್ದು. ಹಿಂದೂ ಸಮಾಜ, ಮುಸ್ಲಿಂ ಹಾಗೂ ಕ್ರೈಸ್ತರನ್ನು ಸಮಾನರಂತೆ ನಡೆಸಿಕೊಳುತ್ತದೆ. ಆದ್ದರಿಂದ ಮತಾಂತರದಿಂದ ಸಾಮಾಜಿಕ ಸಮಾನತೆ ಸಾಧ್ಯವೆಂದು ಸ್ಪಷ್ಟವಾಗುತ್ತದೆ. ಇದು ನಿಜವಾದರೆ, ಮತಾಂತರದ ಸರಳ ಹಾದಿಯನ್ನು ನೀವೇಕೆ ಹಿಡಿಯಬಾರದು.

ಧರ್ಮ ಪರಿವರ್ತನೆಯಿಂದ ಅಸ್ಪೃಶ್ಯರು ಮತ್ತು ಹಿಂದೂಗಳಿಬ್ಬರಿಗೂ ಸಂತೋಷ ಉಂಟಾಗಬಹುದೆಂದು ನನ್ನ ಅಭಿಪ್ರಾಯ. ನೀವು ಹಿಂದೂಗಳಾಗಿ ಉಳಿದಿರುವವರೆಗೆ ಸಾಮಾಜಿಕ ಸಂಪರ್ಕ, ಆಹಾರ, ನೀರು ಮತ್ತು ಅಂತರ್ಜಾತಿ ಮದುವೆಗಳಿಗಾಗಿ ಹೊಡೆದಾಡಬೇಕಾಗುತ್ತದೆ. ಈ ಹೋರಾಟ ಮುಗಿಯುವವರೆಗೆ, ನೀವೂ ಹಿಂದೂಗಳು ಪರಸ್ಪರ ವೈರಿಗಳಾಗುತ್ತೀರಿ. ಮತಾಂತರಗೊಂಡ ಕೂಡಲೇ, ವೈಷಮ್ಯದ ಬೇರುಗಳೇ ನಾಶವಾಗುತ್ತವೆ....ಹೀಗಾಗಿ, ಮತಾಂತರದಿಂದ ಸಮಾನತೆಯನ್ನು ಸಾಧಿಸಿ, ಹಿಂದೂಗಳು ಅಸ್ಪೃಶ್ಯರು ಈ ಸರಳ, ಸಂತೋಷದಾಯಕ ಮಾರ್ಗವೇಕೆ ಹಿಡಿಯಬಾರದು ? ಈ ದೃಷ್ಟಿಯಿಂದ ನೋಡಿದರೆ, ಮತಾಂತರವೊಂದೇ ಸ್ವಾತಂತ್ರ್ಯಕ್ಕೆ ಮತ್ತು ಸಮಾನತೆಗೆ ಕರೆದೊಯ್ಯುವ ಏಕೈಕ ಮಾರ್ಗವಾಗಿ ಗೋಚರಿಸುತ್ತದೆ. ಇದು ಹೇಡಿತನವೂ ಅಲ್ಲ, ಪಲಾಯನವಾದವೂ ಅಲ್ಲ....

ಮುಸ್ಲಿಮರು. ಕ್ರೈಸ್ತರಲ್ಲಿಯೂ ಜಾತಿಗಳಿದ್ದರೂ, ಅದನ್ನು ಹಿಂದೂ ಧರ್ಮಕ್ಕೆ ಹೋಲಿಸುವುದು ಸಣ್ಣತನವಾದೀತು. ಹಿಂದೂಗಳ ಜಾತಿ ವ್ಯವಸ್ಥೆಗೂ, ಮುಸ್ಲಿಂ ಕ್ರೈಸ್ತರ ಜಾತಿ ಪದ್ಧತಿಗೂ ಮಹತ್ತರ ವ್ಯತ್ಯಾಸವಿದೆ. ಮೊದಲನೆಯದು—ಕ್ರೈಸ್ತರು-ಮುಸ್ಲಿಮರಲ್ಲಿ ಜಾತಿ ಪದ್ಧತಿಯಿದ್ದರೂ, ಅದೇ ಅವರ ಸಾಮಾಜಿಕ ಬದುಕಿನ ಪ್ರಮುಖ ಲಕ್ಷಣವಲ್ಲ....

ಹಿಂದೂಗಳೂ, ಮತ್ತು ಮುಸ್ಲಿಂ-ಕ್ರೈಸ್ತರ ಜಾತಿ ವ್ಯವಸ್ಥೆಗಳ ನಡುವೆ ಇನ್ನೂ ಒಂದು ವ್ಯತ್ಯಾಸವಿದೆ. ಹಿಂದೂಗಳ ಜಾತಿ ಪದ್ಧತಿಗೆ ಧರ್ಮದ ಅಡಿಪಾಯವಿದೆ. ಬೇರೆ ಧರ್ಮಗಳಲ್ಲಿ, ಜಾತಿಗಳಿಗೆ ಧಾರ್ಮಿಕ ಸಮ್ಮತಿಯಿಲ್ಲ ... ಹಿಂದೂಗಳು ತಮ್ಮ ಧರ್ಮವನ್ನ ನಾಶಮಾಡದೆ ಜಾತಿ ವಿನಾಶ ಮಾಡಲಾರರು. ಅದೇ ಮುಸ್ಲಿಮರು ಮತ್ತು ಕ್ರೈಸ್ತರು ಜಾತಿ ನಿರ್ಮೂಲನಕ್ಕೆ ತಮ್ಮ ಧರ್ಮವನ್ನೇ ನಾಶಮಾಡುವ ಅಗತ್ಯವಿಲ್ಲ. ಬದಲಿಗೆ ಅವರ ಧರ್ಮವೇ ಅಂಥ ಆಂದೋಳನಗಳನ್ನು ಬಹುಮಟ್ಟಿಗೆ ಬೆಂಬಲಿಸುತ್ತದೆ.

ಮತಾಂತರವೊಂದರಿಂದಲೇ ಏನು ಸಾಧನೆಯಾಗುತ್ತದೆ ಎಂಬ ಕೆಲವು ಹಿಂದೂಗಳ ಪ್ರಶ್ನೆ ಕೇಳಿ ನನಗೆ ಆಶ್ಚರ್ಯವಾಗಿದೆ. ಭಾರತದ ಇಂದಿನ ಬಹುತೇಕ ಸಿಕ್ಕರು ಮುಸ್ಲಿಮರು ಮತ್ತು ಕ್ರೈಸ್ತರು ಹಿಂದೆ ಹಿಂದೂಗಳೇ ಆಗಿದ್ದವರು, ಅದರಲ್ಲೂ ಬಹುತೇಕರು ಶೂದ್ರರು ಮತ್ತು ಅಸ್ಪೃಶ್ಯರಾಗಿದ್ದವರು. ಅಂದರೆ ಹಿಂದೂ ಧರ್ಮ ಬಿಟ್ಟು ಸಿಖ್ ಅಥವಾ ಕ್ರೈಸ್ತಧರ್ಮ ಅಪ್ಪಿಕೊಂಡವರು ಪ್ರಗತಿಯನ್ನೇ ಸಾಧಿಸಿಲ್ಲವೆಂಬುದು ಈ ಟೀಕಾಕಾರರ ಅಭಿಪ್ರಾಯವೇ? ಇದು ನಿಜವಲ್ಲವಾದರೆ ಮತ್ತು ಮತಾಂತರವು ಅವರ ಸ್ಥಿತಿಗತಿಗಳಲ್ಲಿ ಸ್ಪಷ್ಟ ಸುಧಾರಣೆ ತಂದಿದೆ ಎನ್ನುವುದಾದರೆ, ಮತಾಂತರದಿಂದ ಅಸ್ಪೃಶ್ಯರಿಗೇನೂ ಲಾಭವಿಲ್ಲ ಅನ್ನುವುದರಲ್ಲೇನೂ ಹುರುಳಿಲ್ಲ....

ಈ ಸಮಸ್ಯೆಯ ಬಗ್ಗೆ ಆಳವಾಗಿ ಯೋಚಿಸಿ ನೋಡಿದರೆ, ಭಾರತಕ್ಕೆ ಸ್ವರಾಜ್ಯ ಎಷ್ಟು ಅಗತ್ಯವೋ, ಅಸ್ಪೃಶ್ಯರಿಗೆ ಮತಾಂತರ ಅಷ್ಟೇ ಅಗತ್ಯವೆಂದು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಎರಡರ ಅಂತಿಮ ಗುರಿಯೂ ಒಂದೇ. ಈ ಅಂತಿಮ ಗುರಿಗಳಲ್ಲಿ ಏನೇನೂ ವ್ಯತ್ಯಾಸವಿಲ್ಲ. ಈ ಗುರಿ ಎಂದರೆ-

ಹಿಂದೂಗಳು ನನ್ನನ್ನು ಶತ್ರುವಾಗಿ ಕಾಣುವುದು ಅವಿವೇಕ. ಅವರನ್ನು ನಾನು ಸದಾ ಪ್ರೀತಿಸುತ್ತಲೇ ಇರುವೆ. ಭಾರತೀಯ ತತ್ವಶಾಸ್ತ್ರವನ್ನು ಜೀರ್ಣಿಸಿಕೊಂಡಿರುವ ನಾನು ಅವರಲ್ಲಿರುವ ಕೊಳಕನ್ನು ಶುದ್ಧಮಾಡಿ, ಪರಿಶುದ್ಧವಾದ ಜನಾಂಗವನ್ನಾಗಿ ತಯಾರು ಮಾಡಲು ಅವರ ದುರಾಚಾರಗಳ ವಿರುದ್ಧ ಹೋರಾಟ ನಡೆಸಿರುವೆ. ನನ್ನನ್ನು ಅವರು ತಪ್ಪಾಗಿ ಅರ್ಥ ಮಾಡಿಕೊಂಡಿರುವರು. ಎಂದಿಗಾದರೂ ನನ್ನ ಮಾರ್ಗವೇ ಸರಿಯಾದುದು ಎಂದು ತಪ್ಪದೆ ತಿಳಿಯುವ ಕಾಲ ಬರುತ್ತೆ.

— ಡಾ|| ಬಿ. ಆರ್. ಅಂಬೇಡ್ಕರ್

ಸ್ವಾತಂತ್ರದ ಗಳಿಕೆ. ಮನು ಕುಲದ ಜೀವನಕ್ಕೆ ಸ್ವಾತಂತ್ರ ಅಗತ್ಯ ಎಂದಾದರೆ, ಅಸ್ಪೃಶ್ಯರಿಗೆ ಸಂಪೂರ್ಣ ಸ್ವಾತಂತ್ರ್ಯ ತಂದುಕೊಡುವ ಮತಾಂತರಕ್ಕೆ ಬೆಲೆಯಿಲ್ಲ ಎಂದು ಹೇಳಲು ಸಾಧ್ಯವೇ ಇಲ್ಲ.......

ಯಾವುದು ಮೊದಲು ಆರ್ಥಿಕ ಪ್ರಗತಿಯೋ ಅಥವಾ ಮತಾಂತರವೊ? ಈ ಪ್ರಶ್ನೆಯನ್ನು ಇಲ್ಲಿ ಚರ್ಚಿಸುವುದು ಅಗತ್ಯ ಎಂದು ತಿಳಿದಿದ್ದೇನೆ. ಆರ್ಥಿಕ ಪ್ರಗತಿಯೇ ಮೊದಲು ಸುರುವಾಗಬೇಕು ಎಂದು ನಾನು ಅಂದುಕೊಂಡಿಲ್ಲ....

ಅಸ್ಪೃಶ್ಯತೆ-ನಿಮ್ಮ ಪ್ರಗತಿಯ ಹಾದಿಯಲ್ಲಿರುವ ಶಾಶ್ವತ ಕಂಟಕ. ಅದನ್ನು ತೆಗೆದುಹಾಕದೆ ನಿಮ್ಮ ಹಾದಿ ಸುರಕ್ಷಿತವಾಗಲಾರದು. ಮತಾಂತರವಿಲ್ಲದೆ, ಈ ಕಂಟಕದ ನಿವಾರಣೆಯೂ ಆಗದು.....

ಆದ್ದರಿಂದ ನಿಮ್ಮ ವಿದ್ಯಾವಂತಿಕೆಗೆ ಬೆಲೆ ಸಿಕ್ಕಬೇಕೆಂದಿದ್ದರೆ, ನಿಮ್ಮ ಶಿಕ್ಷಣದಿಂದ ಏನಾದರೂ ಉಪಯೋಗವಾಗಬೇಕು ಎಂಬ ಗಾಢ ಆಕಾಂಕ್ಷೆಯಿದ್ದರೆ, ನೀವು ಅಸ್ಪೃಶ್ಯತೆಯ ಸಂಕೋಲೆಯನ್ನು ಕಳಚಿ ಒಗೆಯಲೇಬೇಕು, ಅಂದರೆ ನಿಮ್ಮ ಧರ್ಮವನ್ನು ಬದಲಾಯಿಸಲೇಬೇಕು....

ಎರಡನೇ ಸಂದೇಹ-ರಾಜಕೀಯ ಹಕ್ಕುಗಳನ್ನು ಕುರಿತಪ್ಪು. ನಾವು ಮತಾಂತರಗೊಂಡರೆ ನಮ್ಮ ರಾಜಕೀಯ ಹಕ್ಕು, ಸವಲತ್ತುಗಳೇನಾಗುವುವೂ ಎಂದು ಕೆಲವರಿಗೆ ಆತಂಕ....

ಆದರೆ ಆ ರಾಜಕೀಯ ಸವಲತ್ತುಗಳನ್ನೇ ಅವಲಂಬಿಸಿ ನಿಲ್ಲುವುದು ಸರಿಯಲ್ಲ ಎಂದು ನನ್ನ ಭಾವನೆ. ಈ ಹಕ್ಕುಗಳು ನಿರಂತರವಾಗಿರುತ್ತವೆ ಎಂದೇನೂ ಹೇಳಿಕೊಟ್ಟಿಲ್ಲ. ಇವು ಒಂದಲ್ಲ ಒಂದು ದಿನ ನಿಲ್ಲಲೇಬೇಕು. ಬ್ರಿಟೀಷ್ ಸರ್ಕಾರದ ಕೋಮುನೀತಿ ಪ್ರಕಾರ ನಮ್ಮ ರಾಜನೀತಿ ಹಕ್ಕುಗಳಿಗೆ ಇಪ್ಪತ್ತುವರ್ಷ ಮಾತ್ರ ಕಾಲಮಿತಿ. ಪೂನಾ ಒಪ್ಪಂದದಲ್ಲಿ ಇಂಥಾ ಕಾಲಮಿತಿ ಏನೂ ನಿಗದಿಯಾಗಿರದಿದ್ದರೂ, ಇವು ಶಾಶ್ವತವೆಂದು ಯಾರೂ ಹೇಳಲಾರರು. ಈ ರಾಜಕೀಯ ಸವಲತ್ತುಗಳ ಮೇಲೆ ಅವಲಂಬಿಸಿಕೊಂಡವರು ಈ ಸವಲತ್ತುಗಳನ್ನು ಹಿಂತೆಗೆದುಕೊಂಡ ದಿನ ಏನಾಗುವುದೆಂದು ಯೋಚಿಸಬೇಕು. ನಮ್ಮ ಸವಲತ್ತುಗಳು ರದ್ದಾದ ದಿನ ನಾವು ನಮ್ಮ ಸಾಮಾಜಿಕ ಶಕ್ತಿಯನ್ನೇ ಅವಲಂಬಿಸಬೇಕಾಗುತ್ತದೆ. ಈ ಸಾಮಾಜಿಕ ಬಲ ನಮ್ಮಲ್ಲಿಲ್ಲವೆಂದು ನಾನು ಆಗಲೇ ಹೇಳಿದ್ದೇನೆ. ಮತ್ತು ಮತಾಂತರಗೊಳ್ಳದೆ, ಈ ಶಕ್ತಿ ದಕ್ಕದೆಂದು ಮೊದಲೇ ರುಜುವಾತು ಪಡಿಸಿದ್ದೇನೆ....

ಇಂಥಾ ಸನ್ನಿವೇಶಗಳಲ್ಲಿ ಶಾಶ್ವತವಾಗಿ ಲಾಭದಾಯಕ ಯಾವುದೆಂದು ಯೋಚಿಸಬೇಕು. ನನ್ನ ದೃಷ್ಟಿಯಲ್ಲಿ ನಿರಂತರ ಆನಂದಕ್ಕೆ ಮತಾಂತರವೊಂದೇ ಮಾರ್ಗ. ಈ ಉದ್ದೇಶಕ್ಕಾಗಿ ರಾಜಕೀಯ ಸವಲತ್ತುಗಳನ್ನು ತ್ಯಾಗ ಮಾಡಬೇಕೆಂದರೂ, ಯಾರೂ ಹಿಂಜರಿಯಬಾರದು. ಮತಾಂತರವು ರಾಜಕೀಯ ಹಕ್ಕುಗಳಿಗೇನೂ ಧಕ್ಕೆ ತರುವುದಿಲ್ಲ. ಮತಾಂತರದಿಂದ ಈ ಸವಲತ್ತುಗಳಿಗೇಕೆ ಹಾನಿಯಾಗಬೇಕೆಂಬುದೇ ನನಗೆ ಅರ್ಥವಾಗುವುದಿಲ್ಲ, ನೀವು ಎಲ್ಲಿ ಹೋದರೂ, ನಿಮ್ಮ ಸವಲತ್ತುಗಳೂ ನಿಮ್ಮೊಡನೆ ಬರುತ್ತವೆ. ಇದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ.

ನೀವು ಮುಸ್ಲಿಮರಾದರೆ, ಮುಸ್ಲಿಮರಾಗಿಯೇ ನಿಮಗೆ ರಾಜಕೀಯ ಹಕ್ಕುಗಳಿರುತ್ತವೆ. ಕ್ರೈಸ್ತರಾದರೆ ಕ್ರೈಸ್ತರಾಗಿಯೇ ನಿಮ್ಮ ರಾಜಕೀಯ ಹಕ್ಕುಗಳಿರುತ್ತವೆ. ನೀವು ಸಿಕ್ಕರಾದರೆ, ಸಿಕ್ಕರಾಗಿಯೇ ರಾಜಕೀಯ ಹಕ್ಕುಗಳು ನಿಮಗಿರುತ್ತವೆ. ಸಂಕ್ಷೇಪ್ತವಾಗಿ ಹೇಳುವುದಾದರೆ, ನಮ್ಮ ರಾಜಕೀಯ ಸವಲತ್ತುಗಳು ನಮ್ಮ ಜೊತೆಯಲ್ಲೇ ಬರುತ್ತವೆ. ಆದ್ದರಿಂದ ಆ ಬಗ್ಗೆ ಯಾರೂ ಹೆದರಬೇಕಿಲ್ಲ.

ಇನ್ನೊಂದು ಕಡೆ, ನಾವು ಹಿಂದೂಗಳಾಗಿಯೇ ಉಳಿದು ಮತಾಂತರಗೊಳ್ಳದಿದ್ದರೆ, ನಮ್ಮ ಹಕ್ಕುಗಳು ಸುರಕ್ಷಿತವಾಗಿರುವುವೆ? ಇದರ ಬಗ್ಗೆ ಜಾಗ್ರತೆಯಾಗಿ ಯೋಚಿಸಬೇಕು. ಈಗ ಹಿಂದೂಗಳೂ ಅಸ್ಪೃಶ್ಯತೆ ನಿಷೇಧಿಸಿ, ಅದರ ಆಚರಣೆಯನ್ನು ಶಿಕ್ಷಾರ್ಹಗೊಳಿಸಿ ಒಂದು ಕಾನೂನು ಮಾಡಿದರೆನ್ನಿ ಆಗ ಅವರು "ನಾವು ಕಾನೂನು ಮೂಲಕ ಅಸ್ಪೃಶ್ಯತೆ ನಿವಾರಿಸಿದ್ದೇವೆ. ಇನ್ನು ಮುಂದೆ ನೀವು ಅಸ್ಪೃಶ್ಯರಲ್ಲ...." ಎಂದು ನಿಮಗೆ ಹೇಳಬಹುದು....

ಈ ದೃಷ್ಟಿಯಿಂದ ನೋಡಿದರೆ, ಮತಾಂತರವು ನಮ್ಮ ರಾಜಕೀಯ ಹಕ್ಕುಗಳನ್ನು ಸದೃಢಗೊಳಿಸಿಕೊಳ್ಳುವ ಮಾರ್ಗವಾಗಿ ಕಾಣುವುದೇ ಹೊರತು ಅಡಚಣೆಯಾಗಿ ಅಲ್ಲ. ನೀವು ಹಿಂದೂಗಳಾಗೇ ಇದ್ದರೆ ನಿಮ್ಮ ರಾಜಕೀಯ ಹಕ್ಕುಗಳನ್ನು ಕಳೆದುಕೊಳ್ಳುವುದು ನಿಶ್ಚಿತ. ಅದನ್ನು ಉಳಿಸಿಕೊಳ್ಳಬೇಕೆಂದಿದ್ದರೆ, ಈ ಧರ್ಮವನ್ನು ತೊರೆಯಿರಿ. ಮತಾಂತರದಿಂದ ಮಾತ್ರ ರಾಜಕೀಯ ಹಕ್ಕುಗಳು ಶಾಶ್ವತವಾಗಿರಲು ಸಾಧ್ಯ....

ಹಿಂದೂ ಧರ್ಮ ನನ್ನ ಆತ್ಮಸಾಕ್ಷಿಗೆ ಒಪ್ಪಿಗೆಯಾಗುವುದಿಲ್ಲ. ಅದು ನನ್ನ ಆತ್ಮಗೌರವಕ್ಕೆ ಸಮ್ಮತವಾಗುವುದಿಲ್ಲ. ಆದೇ ಮತಾಂತರವು ನಿಮ್ಮ ಐಹಿಕ ಮತ್ತು ಆಧ್ಯಾತ್ಮಿಕ ಉನ್ನತಿಗಳೆರಡಕ್ಕೂ ಬೇಕು. ಕೆಲವರು ಐಹಿಕ ಲಾಭಕ್ಕಾಗಿ ಮತಾಂತರ ಎಂದರೆ, ಅಪಹಾಸ್ಯ ಮಾಡಿ ನಗಬಹುದು. ಅಂಥವರನ್ನು ಮೂರ್ಖರೆಂದು ಕರೆಯಲು ನಾನೇನೂ ಹಿಂಜರಿಯುವುದಿಲ್ಲ.

ಧರ್ಮ ಇರುವುದು ಮನುಷ್ಯನಿಗಾಗಿ, ಮನುಷ್ಯನಿರುವುದು ಧರ್ಮಕ್ಕಲ್ಲ. ಇದನ್ನು ನಾನು ತುಂಬಾ ನಿರ್ದಿಷ್ಟವಾಗಿ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಮಾನವೀಯ ನಡವಳಿಕೆ ಬೇಕೆಂದಾದರೆ ಮತಾಂತರಗೊಳ್ಳಿ.

ಸಂಘಟಿತರಾಗಲು ಮತಾಂತರಿಸಿ
ಸಶಕ್ತರಾಗಲು ಮತಾಂತರಿಸಿ
ಸಮಾನತೆಗಾಗಿ ಮತಾಂತರಿಸಿ
ಸ್ವಾತಂತ್ರ್ಯಕ್ಕಾಗಿ ಮತಾಂತರಿಸಿ

ನಿಮ್ಮ ಕೌಟುಂಬಿಕ ಜೀವನ ಸಂತೋಷಮಯವಾಗಲು ಮತಾಂತರಿಸಿ.

ಜನರಿಗೆ ಒಳ್ಳೆಯದು ಯಾವುದು, ಕೆಟ್ಟದು ಯಾವುದೆಂದು ಭಯ ಪಕ್ಷಪಾತಗಳಿಲ್ಲದೆ ಯಾರು ಹೇಳುತ್ತಾರೋ, ಅಂಥವರನ್ನೇ ನಾನು ನಾಯಕರೆಂದು ಒಪ್ಪುತ್ತೇನೆ. ನಿಮಗೆ ಇಷ್ಟವಾಗದಿದ್ದರೂ ನಿಮಗೆ ಒಳ್ಳೆಯದು ಯಾವುದೆಂದು ಹೇಳುವುದು ನನ್ನ ಕರ್ತವ್ಯ. ನಾನು ನನ್ನ ಕರ್ತವ್ಯ ಮಾಡಲೇಬೇಕು. ಅದನ್ನೀಗ ಮಾಡಿದ್ದೇನೆ.

ಇನ್ನು, ನೀವೇ ನಿರ್ಧರಿಸಿ, ನಿಮ್ಮ ಜವಾಬ್ದಾರಿಯನ್ನು ನಿರ್ವಹಿಸಿ.


ಡಾ|| ಅಂಬೇಡ್ಕರರು ತಮ್ಮ ಹೋರಾಟದ ಬದುಕಿನ ಅತ್ಯಂತ ಸಂಕ್ರಮಣ ಕಾಲದಲ್ಲಿ ಕೈಗೊಂಡ ತೀರ್ಮಾನ 'ಮತಾಂತರ'.

1935ರ ಮಹರ್ ಸಮಾವೇಶದಲ್ಲಿ ಮತಾಂತರ ಕುರಿತು ಅವರು ಮಾಡಿದ ಭಾಷಣ ಇದು. ಅನುವಾದಿಸಿದವರು ಎನ್. ಎಸ್. ಶಂಕರ್.

ಮತಾಂತರದ ಎಲ್ಲ ಮುಖಗಳನ್ನು ಕುರಿತು ಗಂಭೀರ ಚಿಂತನೆ ನಡೆಸಬೇಕಾದ ಈ ಹೊತ್ತಲ್ಲಿ ಅವರ ಮೂಲ ಇಂಗಿತ ಅರಿಯಲು ಈ ಲೇಖನ ಸಹಾಯಕವಾಗಬಹುದೆಂದು ಪ್ರಕಟಿಸುತ್ತಿದ್ದೇವೆ.

– ಸಂ.

ಹಿಂದೂ ಆಗಿರಲು ಅಭಿಮಾನ ಪಡುವುದೇಕೆ



ಹಿಂದೂ ಮನಸ್ಸು ಮೂಲತಃ ಇಬ್ಬಗೆಯದು. ಅಂತರಂಗ-ಬಹಿರಂಗಗಳ ನಡುವೆ ಅಪಾರ ಕಂದರ ಸೃಷ್ಟಿಸಿಕೊಂಡಿರುವಂತದ್ದು. ವಿಜ್ಞಾನ, ಟೆಕ್ನಾಲಜಿಗಳನ್ನು ಕೂಡ ಭೋಗಕ್ಕಾಗಿ, ಜಡರೂಪದಲ್ಲಿ ಮಾತ್ರ ಸ್ವೀಕರಿಸುವ ಹಿಂದೂ ಮನಸ್ಸಿಗೆ ಸೃಜನಶೀಲತೆ ಒಂದು ಮರೀಚಿಕೆ.

ಹಿಂದೂ ಮನಸ್ಸಿನ ಇಬ್ಬಗೆಯ ದಾರುಣ ದುರಂತದ ಒಂದು ವಿಶ್ಲೇಷಣೆ.

ರಾಜ್ ಕಿಶೋರ್

ಹಿಂದೂ ಧರ್ಮದ ಗುಣಗಾಣವನ್ನು ಎಷ್ಟೋ ವರ್ಷಗಳಿಂದ ಕೇಳುತ್ತ ಬಂದಿದ್ದರೂ "ನಾನು ಹಿಂದೂ" ಎಂಬ ಅಭಿಮಾನ ತಾಳುವುದೇಕೆಂಬುದು ಅರ್ಥವಾಗದ ವಿಷಯವೇ ಆಗಿದೆ. 'ಹಿಂದೂ ಆಗಿರುವುದು' ಎಂದರಾದರೂ 'ಏನು ? ಸಮರ್ಪಕ ವ್ಯಾಖ್ಯೆ'ಗೊಳಪಡಿಸಲು ಅಸಾಧ್ಯವಾಗಿರುವ ಧರ್ಮ ಎಂದರೆ ಬಹುಶಃ ಹಿಂದೂ ಧರ್ಮವೊಂದೇ. ಆರೆಸ್ಸೆಸ್‌ನ ಮಾಜಿ ಸರಸಂಘಚಾಲಕ ಗೋಳ್ವಲ್ಕರ್ ಅವರ ಪ್ರಕಾರ ಹಿಂದುತ್ವವನ್ನು ಯಾವ ಸಾಧನೆ — ಕ್ರಿಯೆಗಳಿಂದಲೂ ಗಳಿಸಲು ಸಾಧ್ಯವಿಲ್ಲ. ಹಿಂದೂ ಧರ್ಮದಲ್ಲಿ ಜನ್ಮ ತಾಳಿದವರು ಮಾತ್ರ ಹಿಂದುತ್ವ ಪಡೆಯುವರು. ಬಹುಶಃ ಹಿಂದೂ ಧರ್ಮದಲ್ಲಿ ಮಾತ್ರ ಸಾಧ್ಯವಾಗುವಂಥದ್ದೆಂದರೆ ಹಿಂದೂ ಆಚಾರ — ವಿಚಾರಗಳಾವುವನ್ನೂ ಪಾಲಿಸದಿರುವವರನ್ನೂ ಸಹ ಹಿಂದೂ ಧರ್ಮದಿಂದ ಹೊರಹಾಕಲಾಗುವುದಿಲ್ಲ. ಒಂದು ವ್ಯವಸ್ಥೆಯನ್ನೇ ನಿರ್ಮಿಸಿರುವ ಹಿಂದೂ ಧರ್ಮದ ಮೌಲ್ಯಗಳು ಆರೆಸ್ಸೆಸ್‌ನ ಹಾಲಿ ಸರಸಂಘಚಾಲಕ ದೇವರಸ್ ಪ್ರಕಾರ 'ಸಹಿಷ್ಣುತೆ, ಶಾಂತಿ ಮತ್ತು ಆಧ್ಯಾತ್ಮಿಕತೆ: ಸಂಸ್ಕೃತಿ ಹ್ರಾಸವನ್ನು ಹಿಂದೂ ಧರ್ಮ ಮಾತ್ರ ತಡೆಗಟ್ಟಬಲ್ಲದು.

ಸಹಿಷ್ಣುತೆಯ ಬದಲು ಉದಾಸೀನತೆ, ಶಾಂತಿಯ ಹೆಸರಿನಲ್ಲಿ ಹೇಡಿತನ ಮತ್ತು ಆಧ್ಯಾತ್ಮಿಕತೆಯ ರೂಪದ ಅಂಧಶ್ರದ್ಧೆ ಮತ್ತು ಪಾಖಂಡಿ ಮನೋಭಾವಗಳೇ ಹಿಂದೂ ಧರ್ಮದ ಮೌಲ್ಯಗಳಾಗಿವೆ. ದೇವರಸ್ ಅವರ ಆರೆಸ್ಸೆಸ್ ಸ್ವತಃ ಅಸಹಿಷ್ಣು (ಹಿಂದೂಯೇತರರ ಬಗ್ಗೆ ಬಹಿರಂಗವಾಗಿ, ಹಿಂದೂಗಳಾಗಿದ್ದರೂ ಕೆಳಜಾತಿಗಳ ಬಗ್ಗೆ ಒಳಗಿಂದೊಳಗೇ) ವಾಗಿದೆ; ಉಪದ್ರವಕಾರಿ (ಗೋಳ್ವಲ್ಕರ್ ಪ್ರತಿಪಾದಿಸುವ ಪರಾಕ್ರಮವಾದದ ಹಿನ್ನೆಲೆಯಲ್ಲಿ, ಬಹುಸಂಖ್ಯಾತರ ಧಾರ್ಮಿಕ ನಂಬಿಕೆಗಳನ್ನು ಇತರರೂ ಒಪ್ಪಿಕೊಳ್ಳಬೇಕೆಂಬ ಆಗ್ರಹದ ಹಿನ್ನೆಲೆಯಲ್ಲಿ) ಯಾಗಿದೆ; ನೈಜ ಆಧ್ಯಾತ್ಮ ವಿರೋಧಿ (ಲಾಠಿ ತಿರುಗಿಸುವುದನ್ನು, ಮಧ್ಯಮ ವರ್ಗ — ವ್ಯಾಪಾರಿ ವರ್ಗಗಳ ಹಿತಾಸಕ್ತಿಗಾಗಿ ಚಿಂತಿಸುವುದನ್ನು ಗಮನಿಸಿದಾಗ) ಯಾಗಿದೆ.

ತಮ್ಮ ದೈನಂದಿನ ಜೀವನದಲ್ಲಿ ಧಾರ್ಮಿಕ ಆಚರಣೆಗೆ ಮಹತ್ವ ಕೊಡದ ದೊಡ್ಡ ಜನಸಮೂಹವನ್ನೇ ಇಂದು ಕಾಣಬಹುದಾಗಿದೆ. ಆದರೆ ಈ ಇಡೀ ಸಮೂಹ ಬುದ್ಧಿಪ್ರಮಾಣವಾದಿಯೆಂದು ಭಾವಿಸುವುದು ಪೆಚ್ಚುತನವಾಗುತ್ತದೆ; ಈ ಸಮೂಹದ ಒಂದು ಭಾಗ ಮಾತ್ರ ಉದ್ದೇಶಪೂರ್ವಕವಾಗಿ ಧಾರ್ಮಿಕ ಆಚರಣೆಗಳನ್ನು ಬಹಿಷ್ಕರಿಸಲು ಸಾಕು. ಉಳಿದ ದೊಡ್ಡ ಜನಸಮೂಹ ಅಂತರಂಗದಲ್ಲಿ ಹಿಂದೂ ವ್ಯವಸ್ಥೆಯ ಕಟ್ಟಾ ಪ್ರತಿಪಾದಕವಾಗಿದೆ. ಒಂದು ಚಿಕ್ಕ ಗುಂಪು ಪ್ರಸಕ್ತ ಹಿಂದೂ ವ್ಯವಸ್ಥೆಯನ್ನು ಬಹಿಷ್ಕರಿಸಿದರೆ ಪರ್ಯಾಯ ವ್ಯವಸ್ಥೆಯಿಲ್ಲದಂತಾಗಿ ಭಯಾನಕವಾದ ಸಾಂಸ್ಕೃತಿಕ ಶೂನ್ಯವುಂಟಾಗುತ್ತದೆ' ಎಂಬ ಭಯವನ್ನು ಹೊಂದಿದೆ. ಈ ಭಯವೂ ಸಹ ಹಿಂದೂ

ಮನಸ್ಸಿನ ಖೋಟಾತನದಿಂದಲೇ ಉದ್ಭವವಾದದ್ದು.

ಹಿಂದೂ ಸಂಸ್ಕೃತಿ ಬದಲಾಗುತ್ತಾ ಹೋದಂತೆ ಕಾಣುತ್ತದಾದರೂ ಅದು ವಾಸ್ತವವಾಗಿ ಜಡತೆಯ ದಿಕ್ಕಿನಲ್ಲಿ ಸಾಗುತ್ತಿದೆ. ಇದು ಸ್ಪಷ್ಟಗೊಳ್ಳಲು ಎರಡು ಪ್ರಮುಖ ಉದಾಹರಣೆಗಳನ್ನು ನೀಡಬಹುದು. ಸ್ವಾಮಿ ದಯಾನಂದ ಸರಸ್ವತಿ ಮತ್ತು ಮಹಾತ್ಮಾ ಗಾಂಧಿ, ಇವರೇ ಎರಡು ಪ್ರಮುಖ ಉದಾಹರಣೆಗಳು. ಇವರಿಬ್ಬರೂ ತಂತಮ್ಮ ರೀತಿಗಳಲ್ಲಿ ಹಿಂದೂ ವ್ಯವಸ್ಥೆಯನ್ನು ಸುಧಾರಿಸುವ ಯತ್ನ ನಡೆಸಿದರು. ತಮಾಷೆಯೆನಿಸಬಹುದಾದ ಸಂಗತಿಯೆಂದರೆ, ಹಿಂದೂ ಸಮಾಜ ವ್ಯವಸ್ಥೆಯ ಔಚಿತ್ಯವನ್ನು ಸಾಬೀತುಪಡಿಸಲು ಉದಾಹರಿಸುವ ಹಿಂದೂ ಧರ್ಮಗ್ರಂಥಗಳಿಂದಲೇ ಇವರಿಬ್ಬರೂ ಪ್ರೇರಣೆಯನ್ನು ಪಡೆದಿರುವುದು.

ಇಂದು ಹಿಂದೂಗೆ ಅಭಿಮಾನ ಪಡಲು ಪುರಾತನ ಹಾಗೂ ಆಧುನಿಕ ಅಂಶಗಳೆರಡೂ ಬೇಕಾಗಿವೆ. ಹಬ್ಬದ ದಿನಗಳಲ್ಲಿ ದೇವ - ದೇವತೆಗಳ ಅಲಂಕಾರ - ಪೂಜೆ ಒಂದೆಡೆ ಸಾಗಿದ್ದರೆ ಪಕ್ಕದಲ್ಲೇ ಸಿನಿಮಾ ಹಾಡು, ಡಿಸ್ಕೋ ಡ್ಯಾನ್ಸ್‌ಗಳೂ ಸಾಗಿರುತ್ತವೆ. ಈ ಎರಡೂ ಅಂಶಗಳಲ್ಲಿರುವ ಅಂತರ್ವಿರೋಧವು ಹಿಂದೂ ಮನಸ್ಸನ್ನು ಬಾಧಿಸುವುದೇ ಇಲ್ಲ.

ಹಿಂದೂಗಳೆಲ್ಲರೂ ಆರ್ಯರಾಗುವುದೇ ಮುಕ್ತಿಗೆ ದಾರಿ ಎಂದು ದಯಾನಂದ ಸರಸ್ವತಿ ನಂಬಿದ್ದರು. (ಆರ್ಯ ಸಮಾಜ ನಡೆಸುತ್ತಿರುವ ವಿದ್ಯಾ ಸಂಸ್ಥೆಗಳಲ್ಲಿ ಯಜ್ಞ — ಯಾಗ ಹಾಗೂ ಇಂಗ್ಲಿಷ್ ಶಿಕ್ಷಣದ ವಿಲಕ್ಷಣ ಮಿಶ್ರ ವ್ಯವಸ್ಥೆ ಇಂದು ಕಾಣುತ್ತಿದೆ; ಸ್ವಾಮಿ ವಿವೇಕಾನಂದ ಅವರ ಸ್ಮರಣಾರ್ಥ ಸ್ಥಾಪಿಸಲಾದ ರಾಮಕೃಷ್ಣ ಮಿಶನ್ ವಿದ್ಯಾ ಸಂಸ್ಥೆಗಳಲ್ಲೂ ಇದೇ ಬಗೆಯ ವಿಲಕ್ಷಣ ಮಿಶ್ರ ವ್ಯವಸ್ಥೆ ರೂಪುಗೊಂಡಿದೆ.) ಮಹಾತ್ಮಾ ಗಾಂಧಿ ಸಹ ತಮ್ಮನ್ನು ಸನಾತನಿ ಹಿಂದೂ ಎಂದೇ ಪರಿಗಣಿಸಿದ್ದರು. ಅವರು ವೇದ — ಪುರಾಣ— ಉಪನಿಷತ್ತು ಮತ್ತಿತರ ಹಿಂದೂ ಧರ್ಮ ಶಾಸ್ತ್ರಗಳನ್ನು, ಅವತಾರ — ಪುನರ್ಜನ್ಮಗಳನ್ನು ನಂಬಿದ್ದರು; ವರ್ಣಾಶ್ರಮ ಧರ್ಮದ ರೂಪದಲ್ಲಿ ಭ್ರಷ್ಟತೆ — ಚಾಲಾಕುತನಗಳು ತಲೆ ಹಾಕಿವೆಯೆಂದು ಅಭಿಪ್ರಾಯ ಹೊಂದಿದ್ದರು; ಗೋರಕ್ಷಣೆಯಲ್ಲಿ ಅವರಿಗೆ ನಂಬುಗೆಯಿತ್ತು; ಮೂರ್ತಿಪೂಜೆಯನ್ನು ಅವರು ವಿರೋಧಿಸುತ್ತಿದ್ದಿಲ್ಲ.

ಗೀತೆಯ 'ಅನಾಸಕ್ತಿ ಯೋಗ'ಕ್ಕೆ ಗಾಂಧಿ ಚಮತ್ಕಾರಿಕ ಭಾಷ್ಯವನ್ನು ನೀಡಿದ್ದಾರೆ; ಬ್ರಹ್ಮಚರ್ಯದ ಬಗ್ಗೆ ಅವರು ಕೊಟ್ಟಿರುವಷ್ಟು ಒತ್ತನ್ನು ಬೇರಾವ ಜನನಾಯಕನೂ ನೀಡಿರಲಾರ. ತಮ್ಮನ್ನು ಹಿಂದೂ ಎಂದು ಪರಿಗಣಿಸಿಕೊಂಡೂ, ಅಸ್ಪೃಶ್ಯತೆ ವಿರುದ್ಧ ವೈಯಕ್ತಿಕ ಮತ್ತು ಸಾಮಾಜಿಕ ಜೀವನದಲ್ಲಿ ದನಿ ಎತ್ತಿದರು; ಆದರೆ ಹಿಂದೂ ಸಮಾಜ ವ್ಯವಸ್ಥೆಯನ್ನು ರಚಿಸುವ ಅವರ ಉತ್ಸಾಹವು ಎಷ್ಟೊಂದಿತ್ತೆಂದರೆ ಅಂತರ್ಜಾತಿಯ ವಿವಾಹಗಳನ್ನು ವಿರೋಧಿಸಲು ಅವರು ವಿಚಿತ್ರ ತರ್ಕಗಳ ಮೊರೆ ಹೋಗುತ್ತಿದ್ದರು.

ಸ್ವಾಮಿ ದಯಾನಂದ ಸರಸ್ವತಿ ಅವರಂತೆ ಆಲೋಚನಾತ್ಮಕ ದೃಷ್ಟಿಕೋನದ ಅಗತ್ಯವನ್ನು ಗಾಂಧಿ ತಿರಸ್ಕರಿಸಲಿಲ್ಲ; ಅವರಂತೆ ವಿಜ್ಞಾನ — ಆಧುನಿಕತೆಗಳ ಎದುರು ನಿಲ್ಲದೇ ಪಲಾಯನವಾದವನ್ನು ಗಾಂಧಿ ಸಾರಲಿಲ್ಲ; ಜಾತಿಪದ್ಧತಿಯ ಮೂಲರೂಪವಾದ ವರ್ಣಾಶ್ರಮ ಧರ್ಮದ ಬಗ್ಗೆ ಅವರು ಪುನರ್ ವಿಚಾರ ಮಾಡತೊಡಗಿದರು; ತಾವು ಎಂದೂ ಮೂರ್ತಿಪೂಜೆಯನ್ನು ವಿರೋಧಿಸದಿದ್ದರೂ, ಅವರು ವೈಯಕ್ತಿಕವಾಗಿ ಎಂದೂ ಮೂರ್ತಿಪೂಜೆಯನ್ನು ಮಾಡದೇ ಹೋದರು; ಆದರೆ ಅತ್ಯಂತ ದುರಂತವೆಂದರೆ, ನಮ್ಮ ಕಾಲದ ಅತ್ಯಂತ ಕ್ರಾಂತಿಕಾರಿ ಜನನಾಯಕ ಗಾಂಧೀ ಹಿಂದೂ ವ್ಯವಸ್ಥೆಯ ವಿರುದ್ಧ ಸಿಡಿದೇಳದಾದರು.

ಹಿಂದೂ ವ್ಯವಸ್ಥೆಯನ್ನು ತೇಪೆ ಹಾಕಿ ಸುಧಾರಿಸುವ ಯತ್ನ ಮಾಡಿದ್ದೇ ಗಾಂಧಿ ಇಟ್ಟ ತಪ್ಪು ಹೆಜ್ಜೆ ಎನಿಸುತ್ತದೆ. ಹಿಂದೂ ವ್ಯವಸ್ಥೆಯನ್ನು ತೇಪೆ ಹಾಕಿ ಸುಧಾರಿಸಲು ಸಾಧ್ಯವೇ ಇಲ್ಲ. ಯಾಕೆಂದರೆ ಯಾವುದೇ ಸುಧಾರಣೆಯ ಯತ್ನಗಳನ್ನೂ ವಿರೋಧಿಸದೇ, ಹಿಂದೂ ಧರ್ಮ ಅವೆಲ್ಲವನ್ನೂ ತನ್ನಲ್ಲಿ ಅರಗಿಸಿಕೊಂಡು ತಾನು ಮಾತ್ರ ಯಥಾ ಪ್ರಕಾರ ಉಳಿಯುವ ವಿಲಕ್ಷಣ ಚಾಲಾಕುತನವನ್ನು ಹಿಂದೂ ಧರ್ಮ ಹೊಂದಿದೆ. ಇದೇ ಹಿಂದೂ ಧರ್ಮದ ವಿಶೇಷ ಗುಣ. ಈ ವಿಶೇಷ ಗುಣ ಹಿಂದೂ ಧರ್ಮದ ಪ್ರಖರ ಶಕ್ತಿಯೂ ಹೌದು. ಹಾಗಾಗೇ ತನ್ನಲ್ಲಿ ಏನೆಲ್ಲಾ ಅದ್ವಾನವಿದ್ದರೂ, ಅಸಮಾನತೆಯಿದ್ದರೂ ಹಿಂದೂ ವ್ಯವಸ್ಥೆ ಇದುವರೆಗೂ ಕುಸಿದಿಲ್ಲ. ಈ ವಿಶೇಷ ಗುಣವು ಹಿಂದೂ ವ್ಯವಸ್ಥೆಯ ಅತ್ಯಂತ ದುರ್ಬಲ ಅಂಶವೂ ಸಹ ಆಗಿದೆ. ಆದ್ದರಿಂದಲೇ ಹಿಂದೂ ವ್ಯವಸ್ಥೆ ವಿಷಸರ್ಪವಾಗಿಯೇ ನಿಂತಿದೆ.

ಈ ವಿಶೇಷ ಗುಣವನ್ನು ಅರ್ಥಮಾಡಿಕೊಳ್ಳದ್ದರಿಂದಲೇ "ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದ ನಂತರ ಸಾಮಾಜಿಕ ಜೀವನದಲ್ಲೂ ಬದಲಾವಣೆಯುಂಟಾಗಿ ಹೊಸ ಭಾರತ ನಿರ್ಮಾಣಗೊಳ್ಳುವುದೆಂದು" ಬಹಳ ಜನ ಭಾವಿಸಿದ್ದರು. ಇವರಲ್ಲಿ ಜವಹರಲಾಲ್ ನೆಹರೂ ಸಹ ಒಬ್ಬರು. ತಮ್ಮ ಡಿಸ್ಕವರಿ ಆಫ್ ಇಂಡಿಯಾ ಪುಸ್ತಕದಲ್ಲಿ ಅವರು "ಸ್ವಾತಂತ್ರ್ಯದ ನಂತರ ಹೊಸ ದಿಕ್ಕೊಂದು ಭಾರತದ ಎದುರಿಗೆ ತೆರೆದು ನಿಲ್ಲುತ್ತದೆ; ನೈರಾಶ್ಯದ—ಅಪಮಾನದ ಇತಿಹಾಸ ತೊಲಗಿ ನಿರಭ್ರ ಭವಿಷ್ಯ ಕಾಣುತ್ತದೆ; ಆತ್ಮವಿಶ್ವಾಸದಿಂದ ಭಾರತ ಮುಂದುವರೆಯುತ್ತದೆ; ಹಳೆಯ ಕಂದಾಚಾರಗಳನ್ನು ಅಂಧಾನುಕರಣೆ ಮಾಡುವುದರಿಂದ, ವಿದೇಶೀ ರೀತಿ — ನೀತಿಗಳನ್ನು ಆರಾಧನಾ ಮನೋಭಾವದಿಂದ ಅನುಕರಿಸುವುದರಿಂದ ಭಾರತಕ್ಕೆ ಪ್ರಗತಿಯ ದಾರಿ ಸಿಗಲಾರದು; ಜೀವಂತಿಕೆಯು ದೊರೆಯಲಾರದು; ಹೊಸ ಜೀವನಕ್ಕೆ ತನ್ನನ್ನು ತಾನು ಒಡ್ಡಿಕೊಳ್ಳಲು ಭಾರತ ಸಿದ್ಧವಾಗಬೇಕಿದೆ" ಎಂದು ಬರೆಯುತ್ತಾರೆ.

ಆದರೆ ಭಾರತಕ್ಕೆ ಸ್ವಾತಂತ್ರ್ಯ ದೊರಕಿ 36 ವರ್ಷ ಗಳಿಸಿವೆ; ಈಗ ಪರಿಸ್ಥಿತಿ ಹೇಗಿದೆ? ಹಳೆಯ ಕಂದಾಚಾರಗಳ, ವಿದೇಶೀ ರೀತಿ — ನೀತಿಗಳ ಅಂಧಾನುಕರಣೆ ಇನ್ನೂ ನಡೆದೇ ಇದೆ; ಅಷ್ಟೇ ಅಲ್ಲ, ಮೊದಲಿಗಿಂತಲೂ ಹೆಚ್ಚಾಗಿದೆ. ಸ್ವಾತಂತ್ರ್ಯಾನಂತರದ ಮೂರುವರೆ ದಶಕಗಳಲ್ಲೂ ಭಾರತ ತನ್ನ ಎಂದಿನ ವಿಲಕ್ಷಣ ಚಾಲಾಕುತನವನ್ನು ಪ್ರದರ್ಶಿಸಿದೆ. ಹಿಂದೂ ಚಾಲಾಕುತನಕ್ಕೆ ಎರಡು ಅಂಶಗಳು ವಿಶೇಷವಾಗಿ ಪುಷ್ಟಿ ನೀಡಿವೆ: (1) ಬ್ರಿಟಿಷರು ಬಹುತೇಕ ಎಲ್ಲಾ ರಂಗಗಳಲ್ಲಿ ಬೇರಿ ಹೋಗಿರುವ ಪ್ರಭಾವದಿಂದಾಗಿ ಭಾರತದ ಸಂಸ್ಕೃತಿಯ ಮೇಲಾದ ಪರಿಣಾಮ (2) ಪಶ್ಚಿಮ ದೇಶಗಳನ್ನೇ ಆದರ್ಶವೆಂದು ಗಣಿಸಿ ರೂಪಿಸಲಾದ ಯೋಜನೆಗಳು.

ಹಿಂದೂ ವ್ಯವಸ್ಥೆ ತನ್ನ ಬೇರುಗಳನ್ನು ಭದ್ರಗೊಳಿಸುವುದರೊಂದಿಗೆ ಆಧುನಿಕ ಮೌಲ್ಯ ಆದರ್ಶಗಳನ್ನೂ ತನಗೆ ಬೇಕಾದಂತೆ ಬಳಸಿಕೊಂಡು

ಅವುಗಳ ಮೂಲೋದ್ದೇಶವನ್ನೇ ಹಾಳು ಮಾಡಿತು. ಹಾಗಾಗಿಯೇ ಇಂದು ಹಿಂದೂಗೆ ಅಭಿಮಾನ ಪಡಲು ಪುರಾತನ ಹಾಗೂ ಆಧುನಿಕ ಅಂಶಗಳೆರಡೂ ಬೇಕಾಗಿವೆ. ಹಬ್ಬದ ದಿನಗಳಲ್ಲಿ ದೇವ — ದೇವತೆಗಳ ಅಲಂಕಾರ — ಪೂಜೆ ಒಂದೆಡೆ ಸಾಗಿದ್ದರೆ ಪಕ್ಕದಲ್ಲೇ ಸಿನಿಮಾ ಹಾಡು, ಡಿಸ್ಕೋ ಡ್ಯಾನ್ಸ್‌ಗಳೂ ಸಾಗಿರುತ್ತವೆ. ಈ ಎರಡೂ ಅಂಶಗಳಲ್ಲಿರುವ ಅಂತರ್ವಿರೋಧವು ಹಿಂದೂ ಮನಸ್ಸನ್ನು ಬಾಧಿಸುವುದೇ ಇಲ್ಲ. ಪೂಜೆಯಿಂದ ಮನಃಶಾಂತಿ ಸಿಗುತ್ತದೆಂಬ ಭ್ರಮೆ ಕೆಲವರದ್ದಾದರೆ, ಡಿಸ್ಕೋ ಡ್ಯಾನ್ಸ್ — ಹಾಡುಗಳಿಂದ ಮನಃಶಾಂತಿ ಸಿಗುತ್ತದೆಂಬ ಭ್ರಮೆ ಇನ್ನೂ ಕೆಲವರದ್ದು. ವಸ್ತು ಸ್ಥಿತಿಯಿಂದ ಪಲಾಯನವನ್ನು ಇವೆರಡೂ ಬೋಧಿಸುತ್ತವೆಂಬ ಸತ್ಯ ಮಾತ್ರ ಯಾರಿಗೂ ಗೊತ್ತಾಗುತ್ತಿಲ್ಲ. ಒಂದು ತಮಾಷೆಯ ಸಂಗತಿಯೆಂದರೆ, ಪೂಜೆಯನ್ನು ಮಾಡುವ ಭಾಷೆ (ಸಂಸ್ಕೃತ) ಯಾರಿಗೂ ತಿಳಿಯದ್ದು; ಡಿಸ್ಕೋ ಹಾಡಿನ ಭಾಷೆ ಸಹ (ಇಂಗ್ಲಿಷ್) ಯಾರಿಗೂ ತಿಳಿಯದ್ದು.

ಇಡೀ ಜಗತ್ತಿಗೆ ದಾರ್ಶನಿಕತೆಯನ್ನು, ಏಕತೆಯನ್ನು (ಬ್ರಾಹ್ಮಣ — ಚಾಂಡಾಲನ ಆತ್ಮ ಒಂದೇ ಎಂಬ, ಪಶು ಪಕ್ಷಿ ಮರ ಬೆಟ್ಟಗಳಲ್ಲಿಯೂ ಪರಮ ಸತ್ಯವನ್ನು ಕಾಣಬೇಕೆಂಬ) ಬೋಧಿಸುವ ಹಿಂದೂ ಮನಸ್ಸೇ ಮಾನವ ಕುಲವನ್ನು ಮೂರುವರೆ ಸಾವಿರಕ್ಕೂ ಹೆಚ್ಚಿನ ವಿಭಾಗಗಳಲ್ಲಿ ವಿಭಾಜಿಸಿದೆ. ಜಾತಿಪದ್ಧತಿ ಹಿಂದೂ ವ್ಯವಸ್ಥೆಯಲ್ಲಿಯ ಅತ್ಯಂತ ಭದ್ರಕೋಟೆ. ಹುಟ್ಟಿನಾಧಾರ ಹೊಂದಿರುವ ಈ ಪದ್ಧತಿ ಅಸಮಾನತೆಯ ಬಲವಾದ ಸಂಕೇತ. ಪ್ರಜಾಪ್ರಭುತ್ವವಿರುವಲ್ಲಿ ಸಮಾನತೆ, ಸ್ವಾತಂತ್ರ್ಯ, ಬಂಧುತ್ವಗಳಿದ್ದರೆ, ಜಾತಿಪದ್ಧತಿಯಿರುವಲ್ಲಿ ಅಸಮಾನತೆ, ಗುಲಾಮಗಿರಿ, ದ್ವೇಷಾಸೂಯೆಗಳು ನೆಲೆಸಿರುತ್ತವೆ. ಪ್ರಜಾಪ್ರಭುತ್ವ — ಜಾತಿಪದ್ಧತಿಗಳೆರಡೂ ಒಟ್ಟಿಗೆ ಅಸ್ತಿತ್ವದಲ್ಲಿರಲು ಸಾಧ್ಯವೇ ಇಲ್ಲ.

ಆದರೆ ಕಳೆದ ಮೂರುವರೆ ದಶಕದಲ್ಲಿ ಭಾರತ ನಡೆದುಬಂದಿರುವ ದಾರಿಯನ್ನು ಅವಲೋಕಿಸಿದಾಗ, ಹಿಂದೂ ಮನಸ್ಸು ಪ್ರಜಾಪ್ರಭುತ್ವವನ್ನು ಕೇವಲ-ರಾಜಕೀಯ ಅಸ್ತ್ರವನ್ನಾಗಿ ಮಾತ್ರ ಬಳಸಿಕೊಂಡಿದೆಯೆಂಬುದು ಸ್ಪಷ್ಟಗೊಳ್ಳುತ್ತದೆ. ಇದರಿಂದ ಹಲವು ವಿಕೃತ ಪರಿಣಾಮಗಳು ಉಂಟಾಗಿವೆ. ಈ ಕಾಲಾವಧಿಯಲ್ಲಿ ದೇಶವನ್ನಾಳಿದ ನೆಹರೂ — ಇಂದಿರಾ ನಾಯಕತ್ವದ ಕಾಂಗ್ರೆಸ್ ಆಡಳಿತ ಮಧ್ಯಯುಗದ ಯಾವುದೇ ರಾಜ — ಮಹಾರಾಜ — ಮಹಾರಾಣಿಯರ ಆಡಳಿತಕ್ಕಿಂತ ಭಿನ್ನವಾಗಿಲ್ಲ. ಕುರ್ಚಿಯ ಎದುರು ಸಾಷ್ಟಾಂಗ ನಮಸ್ಕಾರ ಹಾಕಿ ನಿಲ್ಲುವುದು ಹಿಂದೂ ಮನಸ್ಸಿನ ಸ್ವಭಾವ. ಹಾಗಾಗಿ ಈ ಹಿಂದೂ ಮನಸ್ಸಿಗೆ ನೆಹರೂ — ಇಂದಿರಾ ಆಡಳಿತದಲ್ಲಿ ಯಾವುದೇ ಅಸ್ವಾಭಾವಿಕತನ ಕಾಣುವುದಿಲ್ಲ. ಈ ವಿಷಯದಲ್ಲಿ ಭಾರತದ ಇನ್ನಾವುದೇ ರಾಜಕೀಯ ಪಕ್ಷಗಳು ಹೊರತಾಗಿಲ್ಲ. ಚುನಾವಣೆ ಇತ್ಯಾದಿ ಸಂದರ್ಭಗಳಲ್ಲಿ ಎಲ್ಲರೂ ಜಾತಿ ಪದ್ಧತಿಯನ್ನು ಬಳಸಿಕೊಳ್ಳುವವರೇ ಆಗಿದ್ದಾರೆ.

ಆರೆಸ್ಸೆಸ್ ಬಹಿರಂಗವಾಗಿ ತನ್ನನ್ನು ತಾನು "ಏಕಚಾಲಕಾನುವರ್ತಿತ" (ಒಬ್ಬ ನಾಯಕನ ಹಿಂದೆ ಸಾಗುವ) ಸಂಘವೆಂದು ಕರೆದುಕೊಳ್ಳುತ್ತದೆ; ಉಳಿದ ರಾಜಕೀಯ ಪಕ್ಷ — ಸಂಘಟನೆಗಳೂ ಸರಿಸುಮಾರು ಹೀಗೇ ಇಲ್ಲವೆ ? ಎಡ ಪಕ್ಷಗಳೂ ಸೇರಿದಂತೆ ಬಹುತೇಕ ಎಲ್ಲಾ ರಾಜಕೀಯ ಪಕ್ಷ — ಸಂಘಟನೆಗಳೂ ಬ್ರಾಹ್ಮಣ ನಾಯಕತ್ವವನ್ನು ಹೊಂದಿಲ್ಲವೇ ? ಕಾರ್ಯಕರ್ತರನ್ನು ಈ ನಾಯಕತ್ವ ಶೂದ್ರರನ್ನು ಕಾಣುವಂತೆ ಕಾಣುತ್ತಿಲ್ಲವೇ ? ಹಿಂದೂ ಮನಸ್ಸಿನ ಸ್ಥಿತಿ ಹೀಗಿರುವುದರಿಂದಲೇ ಅಲ್ಲವೇ, ರಾಜಕಾರಣದ ಜ್ಞಾನವೇ ಇಲ್ಲದ ಎನ್.ಟಿ. ರಾಮರಾವ್ ಮುಖ್ಯಮಂತ್ರಿಯಾಗುತ್ತಾರೆ; ಕಾರಣವೇನು ? ಅವರನ್ನು (ಕೃಷ್ಣನ) ಅವತಾರಿ ಪುರುಷನೆಂದೆ ಜನ ಸಾಮಾನ್ಯರು ಭಾವಿಸಿದ್ದರಿಂದಲೇ ಅಲ್ಲವೇ ?

> **ಪುರಾತನ ಕಾಲದಿಂದಲೂ ಹಿಂದೂ ಮನಸ್ಸು ಇಬ್ಬಗೆ ಜೀವನ ಸಾಗಿಸುತ್ತಾ ಬಂದಿದೆ. ಮಾತು—ಭಾಷಣ—ಯೋಜನೆಗಳಲ್ಲಿ 'ಸರ್ವೇ ಜನಾಃ....', 'ಅನೋ ಭದ್ರಾ....', ಕೃತಿಯಲ್ಲಿ ಮಾತ್ರ ವರ್ಣಾಶ್ರಮ ಧರ್ಮ ಪಾಲನೆ; ತಾನೇ ಸರ್ವಶ್ರೇಷ್ಠ ಎಂಬ ಅಹಂಕಾರ....**

ವಿಜ್ಞಾನ ಟೆಕ್ನಾಲಜಿಗಳನ್ನೂ ಸಹ ಹಿಂದೂ ಮನಸ್ಸು ವಾಸ್ತವ ಅರ್ಥದಲ್ಲಿ ಸ್ವೀಕರಿಸಿಲ್ಲ. ಕಾಲೇಜುಗಳ ಶಿಕ್ಷಕರು — ವಿದ್ಯಾರ್ಥಿಗಳು ತಾವು ಕಲಿಯುವುದರ, ಕಲಿಸುವುದರ ವಿರುದ್ಧ ವೈಯಕ್ತಿಕ ಜೀವನವನ್ನು ನಡೆಸುವುದನ್ನು ದಿನನಿತ್ಯ ಕಾಣಬಹುದಾಗಿದೆ. ಹೊಸ ಮನಸ್ಸನ್ನು ಸೃಷ್ಟಿಸಿಕೊಳ್ಳಲು ಹಿಂದೂ ಮನಸ್ಸು ಸಿದ್ಧವಿಲ್ಲ. ಪ್ರಶ್ನೆಗಳನ್ನು ಕೇಳುವ ಮೂಲಕ ಚಿಂತನಶೀಲ ಮನಸ್ಸು ಒಡಮೂಡಲಿಲ್ಲ; ವಿಜ್ಞಾನ ಟೆಕ್ನಾಲಜಿಗಳನ್ನು ಜಡ ರೂಪದಲ್ಲಿ ಮಾತ್ರ ಸ್ವೀಕರಿಸಿದ್ದರಿಂದ ಸೃಜನಶೀಲ ಪ್ರತಿಕ್ರಿಯೆ ಹಿಂದೂ ಮನಸ್ಸಿನಿಂದ ಸಾಧ್ಯವಾಗಲಿಲ್ಲ. ವೈಜ್ಞಾನಿಕ ಚಿಂತನೆ, ಸೃಜನಶೀಲತೆ ಚಿಕಿತ್ಸಾ ಬುದ್ಧಿ, ಶೋಧ ದೃಷ್ಟಿಗಳನ್ನು ಆತ್ಮಸಾತ್ ಮಾಡಿಕೊಳ್ಳಬಯಸದ ಹಿಂದೂ ಮನಸ್ಸು ವಿಜ್ಞಾನ, ಟೆಕ್ನಾಲಜಿಗಳಿಂದ ದೊರಕುವ ಅನುಕೂಲತೆಗಳನ್ನು ಮಾತ್ರ ಪಡೆಯಲು ಬಯಸುತ್ತದೆ.

ಹಿಂದೂ ಮನಸ್ಸು ಹೀಗೆ ಮೊದಲಿನಿಂದಲೂ ಇಬ್ಬಗೆಯ ಜೀವನವನ್ನು ಪುರಸ್ಕರಿಸಿದ ಪರಿಣಾಮವು ಇಂದು ಕಾಣುತ್ತಿದೆ; ಪರೀಕ್ಷೆಗಾಗಿ ವಿಜ್ಞಾನ ಕಲಿಕೆ; ಉತ್ಪಾದನೆ ಹೆಚ್ಚಿಸಲು ಟೆಕ್ನಾಲಜಿ ಬಳಕೆ; ಸಾರ್ವಜನಿಕ ವೇದಿಕೆಯ ಮೇಲೆ ಜಾತಿ ಪದ್ಧತಿ — ವರದಕ್ಷಿಣೆಗಳ ಖಂಡನೆ; ವೈಯಕ್ತಿಕ ಜೀವನದಲ್ಲಿ ಮಾತ್ರ ಇವುಗಳ ತದಿರುದ್ಧ ಅಂಶಗಳ ಪಾಲನೆ. ಇದು ಹಿಂದೂ ಮನಸ್ಸು ನಿರಂತರವಾಗಿ ನಡೆದುಕೊಂಡು ಬಂದ ಪರಿ. ಪುರಾತನ ಕಾಲದಿಂದಲೂ ಹಿಂದೂ ಮನಸ್ಸು ಇಬ್ಬಗೆ ಜೀವನ ಸಾಗಿಸುತ್ತಾ ಬಂದಿವೆ. ಮಾತು — ಭಾಷಣ — ಯೋಜನೆಗಳಲ್ಲಿ 'ಸರ್ವೇ ಜನಾ :....'; 'ಅನೋ ಭದ್ರಾ....'; ಕೃತಿಯಲ್ಲಿ ಮಾತ್ರ ವರ್ಣಾಶ್ರಮ ಧರ್ಮ ಪಾಲನೆ; ತಾನೇ ಸರ್ವಶ್ರೇಷ್ಠ ಎಂಬ ಅಹಂಕಾರ.

ವಿಜ್ಞಾನದ ಸಂಬಂಧದಲ್ಲಿ ಈ ಇಬ್ಬಗೆಯ ಜೀವನ ಇನ್ನೂ ವಿಶೇಷ ಬಗೆಯದಾಗಿದೆ. ಆಧುನಿಕ ಯಂತ್ರಗಳನ್ನು ಸಹ ಪೂಜಿಸಲಾಗುತ್ತಿರುವುದು ಬಹುಶಃ ಭಾರತದಲ್ಲಿ ಮಾತ್ರ. ಯಂತ್ರಗಳೂ ಸಹ ದೇವರ ಪ್ರಸಾದ ಎನ್ನುವ ಭಾವನೆ ಹಿಂದೂ ಮನಸ್ಸಿನದು. ಔದ್ಯೋಗೀಕರಣ ಮತ್ತು ಅವೈಜ್ಞಾನಿಕತೆಗಳೆರಡರ ಇಂಥ ಮಿಶ್ರಣ ಅನ್ಯತ್ರ ದುರ್ಲಭ. ಪಶ್ಚಿಮದ ವಿಚಾರ — ಸಿದ್ಧಾಂತ ಸಾಧನೆಗಳನ್ನು ತುಚ್ಛವಾಗಿ ಕಂಡು ತನ್ನ ಅಹಂ ಮೆರೆಸುವ ಯತ್ನವನ್ನು ಒಂದು ಕಾಲದಲ್ಲಿ ಹಿಂದೂ ಮನಸ್ಸು ಮಾಡುತ್ತಿತ್ತು. ಆದರೆ ಅನಂತರ ಪಶ್ಚಿಮದ ಸಾಧನೆಗಳಿಗೆ ಮಾರು ಹೋಗಿ ಅವನ್ನು ಅಂಗಿಸಿಕೊಂಡು ಬಿಟ್ಟಿದೆ; ಜೊತೆಗೆ ತನ್ನ ಸಾಂಸ್ಕೃತಿಕ ಗರ್ವವನ್ನೂ ಉಳಿಸಿಕೊಂಡಿದೆ.

ಪರಿಸ್ಥಿತಿಯು ಅನಿವಾರ್ಯವಾದಾಗ ಮಾತ್ರ ಹಿಂದೂ ಮನಸ್ಸು ಮಹಿಳೆ — ಪರಿವಾರ — ವಿವಾಹ ಇತ್ಯಾದಿ ವಿಷಯಗಳಲ್ಲಿ ಬದಲಾವಣೆಗೆ ಸಮ್ಮತಿಸಿದೆ. ಆದರೆ ಮೂಲ ದೃಷ್ಟಿ—ಮೌಲ್ಯ ವ್ಯವಸ್ಥೆಗಳಲ್ಲಿ ಮಾತ್ರ ಯಾವುದೇ ಬದಲಾವಣೆ ಮಾಡಿಕೊಂಡಿಲ್ಲ. ಮಧ್ಯಯುಗದ ಸ್ತ್ರೀ ಹಾಗೂ ಇಂದಿನ ಸ್ತ್ರೀ ಸ್ಥಾನಮಾನಗಳಲ್ಲಿ ಮೂಲಭೂತವಾದ ಬದಲಾವಣೆಯೇನೂ ಆಗಿಲ್ಲ. ಸ್ತ್ರೀಗೆ ನೀಡಲಾಗಿರುವ 'ಆಸ್ತಿಯಲ್ಲಿ ಪಾಲು' ಕೇವಲ ಕಾಗದದ ಮೇಲಿದೆ. ಸ್ವಾತಂತ್ರ್ಯಾನಂತರ ಭಾರತದ ಸ್ತ್ರೀಗೆ ಹಲವು ವೈಯಕ್ತಿಕ – ಸಾಮಾಜಿಕ – ರಾಜಕೀಯ ಹಕ್ಕುಗಳು ಯಾವುದೇ ವಿಶೇಷ ಸಂಘರ್ಷ ನಡೆಸದಿದ್ದಾಗ್ಯೂ ದೊರಕಿದವೆಂಬುದೇನೋ ನಿಜ; (ತಲಾಖ್ ಮತ್ತು ಮತದಾನದ ಹಕ್ಕನ್ನು ಪಡೆಯಲು ಯುರೋಪ್ ಅಮೇರಿಕೆ ಸ್ತ್ರೀಗೆ ನೂರಾರು ವರ್ಷಗಳ ಕಾಲ ಸಂಘರ್ಷವನು ನಡೆಸಬೇಕಾಯಿತು. ಆದರೆ ಹಿಂದೂ ಮನಸ್ಸಿನ

ನಿಮ್ಮ ವಾಹನವೂ ಸಹ

ಹೆಚ್ಚು ಹೊಗೆ ಉಗುಳುತ್ತಿದೆಯೆ ?

ಹೊಗೆಯುಗುಳುವ ವಾಹನ ನಮ್ಮ ಆರೋಗ್ಯಕ್ಕೆ ಹಾನಿಕರ. ವಾಯು ಮಾಲಿನ್ಯವನ್ನು ತಡೆಗಟ್ಟಿರಿ. - ನಿಮ್ಮ ವಾಹನವನ್ನು ಸದಾ ಸುಸ್ಥಿತಿಯಲ್ಲಿಟ್ಟಿರಿ.

ಬೆಂಗಳೂರು ನಗರದಲ್ಲೇ ದಿನನಿತ್ಯ ಮೂರು ಲಕ್ಷಗಳಿಗಿಂತಲೂ ಅಧಿಕ ವಾಹನಗಳು ವಿನಾಶಕಾರೀ ಹೊಗೆಯನ್ನು ಉಗುಳುತ್ತವೆ.

ನಿಮ್ಮ ವಾಹನ ನಿಂತಿರುವಾಗ ಅನಗತ್ಯವಾಗಿ ಎಂಜಿನನ್ನು ಚಾಲನೆಯಲ್ಲಿಡಬೇಡಿ.

ವಾಹನ ನಿಂತೆ ಇದ್ದು, ಯಂತ್ರ ಮಾತ್ರ ಚಲಿಸುತ್ತಿದ್ದರೆ, ಹಾನಿಕಾರಕ ಹೊಗೆ ಮತ್ತು ಇಂಗಾಲದ ಮೊನಾಕ್ಸೈಡ್ ಉತ್ಪತ್ತಿ ಹೆಚ್ಚುತ್ತದೆ.

ವಾಹನದ ವೇಗವನ್ನು ಅನಗತ್ಯವಾಗಿ ಬದಲಾಯಿಸಬೇಡಿ.

ಪ್ರತೀ ಬಾರಿ ವೇಗ ಬದಲಾಯಿಸಿದಾಗ ಹೊಗೆ ಮತ್ತು ಇಂಗಾಲದ ಮೊನಾಕ್ಸೈಡ್ ಹೆಚ್ಚಿನ ಪ್ರಮಾಣದಲ್ಲಿ ಹೊರಬರುತ್ತವೆ. ನಿಮ್ಮ ವಾಹನವನ್ನು ಆದಷ್ಟು ನಯವಾಗಿ ಓಡಿಸಿ.

ಗಾಳಿ ಮತ್ತು ಇಂಧನ ತೆಳುವಾದ ರೀತಿಯಲ್ಲಿ ಸಂಮಿಶ್ರಗೊಳ್ಳುವಂತೆ ನಿಮ್ಮ ವಾಹನದ ಕಾರ್ಬ್ಯೂರೇಟರನ್ನು ಸರಿಪಡಿಸಿಕೊಳ್ಳಿ.

ಅಧಿಕ ರೀತಿಯ ಇಂಧನ ಸಂಮಿಶ್ರಣ ಅಧಿಕ ಮಟ್ಟದಲ್ಲಿ ಇಂಗಾಲದ ಮೊನಾಕ್ಸೈಡನ್ನು ಹೊರದೂಡುತ್ತದೆ.

ಕನಿಷ್ಟ ಪಕ್ಷ ಮೂರು ತಿಂಗಳಿಗೊಮ್ಮೆ ನಿಮ್ಮ ವಾಹನವನ್ನು ನಿಯಮಿತವಾಗಿ ಸರ್ವೀಸಿಂಗ್‌ಗೆ ಕಳುಹಿಸಿ.

ಹೀಗೆ ಮಾಡುವಾಗ ಎಂಜಿನ್ ಟ್ಯೂನಿಂಗ್, ಸ್ಪಾರ್ಕ್ ಪ್ಲಗ್ ಮತ್ತು ಇಂಜೆಕ್ಷನ್ ಸಿಸ್ಟಮ್‌ಗಳಿಗೆ ವಿಶೇಷ ಗಮನ ನೀಡಿ. ಇದರಿಂದ ವಾಯು ಮಾಲಿನ್ಯ ಇಳಿತ ಮತ್ತು ಇಂಧನ ವೆಚ್ಚ ಕಡಿತ.

ವಾಹನ ಮಾಲಿನ್ಯತೆಯನ್ನು ನಿಯಂತ್ರಿಸಿ — ಹೆಚ್ಚಾಗುತ್ತಿರುವ ವಾಯು ಮಾಲಿನ್ಯವನ್ನು ತಡೆಯಲು ಸಹಕರಿಸಿ.

ಕರ್ನಾಟಕ ಮೋಟಾರು ವಾಹನಗಳ ನಿಯಮಗಳು, 1963ರ 196ನೆಯ ನಿಯಮ 1985ರ ನವೆಂಬರ್ 8ರಿಂದ ಜಾರಿಗೆ ಬಂದಿದೆ. ಇದು ಮೋಟಾರು ವಾಹನಗಳು ಹೊರದೂಡಬಹುದಾದ ಹೊಗೆ ಮತ್ತು ಇತರ ಮಾಲಿನ್ಯದ ಮಟ್ಟವನ್ನು ನಿಗದಿಪಡಿಸುತ್ತವೆ.

ಬಸ್ಸುಗಳು, ಲಾರಿಗಳು ಮತ್ತು ವ್ಯಾನುಗಳಂಥ ಡೀಸೆಲ್ ವಾಹನಗಳು ವಿಸರ್ಜಿಸುವ ಹೊಗೆಯ ಪ್ರಮಾಣದ ಪರೀಕ್ಷೆ ಸೆಪ್ಟೆಂಬರ್ 25, 1986ರಿಂದ ಪ್ರಾರಂಭವಾಗುವುದು. ಇದೇ ರೀತಿ ಇತರ ಮೋಟಾರು ವಾಹನಗಳ ಪರೀಕ್ಷೆಯನ್ನೂ ಹಂತ ಹಂತವಾಗಿ ಪಾರಂಭಿಸ ಲಾಗುವುದು.

ಪುನರ್ ಪರಿಶೀಲನೆಗಾಗಿ ನಿಗದಿಪಡಿಸುವ ಅವಧಿಯೊಳಗೆ ವಾಹನದ ಚಾಲಕರಾಗಲಿ ಮಾಲಿಕರಾಗಲಿ ವಾಹನವನ್ನು ತರದೇ ಹೋದಲ್ಲಿ ಅವರ ರಿಜಿಸ್ಟ್ರೇಷನ್ ಸರ್ಟಿಫಿಕೇಟನ್ನು ರದ್ದುಪಡಿಸಲಾಗುವುದು.

ಕರ್ನಾಟಕ ಸರ್ಕಾರ - ನಿರ್ಮಲವಾದ ವಾತಾವರಣ ಮತ್ತು ಆರೋಗ್ಯಕರ ಜೀವನಕ್ಕಾಗಿ ಪರಿಸರ ಮಾಲಿನ್ಯವಾಗದಂತೆ ಪ್ರಯತ್ನಿಸುತ್ತಿದೆ.

● ಕರ್ನಾಟಕ ವಾರ್ತೆ

ಚಾಪಾಕುತನದಿಂದ ಹಿಂದೂ ಮನಸ್ಸು ಮತ್ತು ಹಿಂದೂ ಸಮಾಜ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಯೇ ಆಗಿರದ್ದರಿಂದ, ಈ ಹಕ್ಕುಗಳು ನಿರ್ಜೀವವಾಗಿ ಬಿದ್ದಿವೆ.

ಬಲಾತ್ಕಾರ ಘಟನೆಗಳು, ವರದಕ್ಷಿಣೆ ಸಾವುಗಳು ಹಿಂದೂ ಮನಸ್ಸಿನ ಕೌರ್ಯದ ಸಂಕೇತ. ಬಲಾತ್ಕಾರವು ಹಿಂದೂ ಪರಂಪರಾಗತ ವ್ಯವಸ್ಥೆಯಲ್ಲಿ ಹೊಸ ವಿಷಯವೇನಲ್ಲ; ಬಲಾತ್ಕರಕ್ಕೊಳಗಾಗಲೆಂದೇ ವಿಶಿಷ್ಟವರ್ಗ — ಜಾತಿಯನ್ನು ನಿರ್ಧರಿಸಿಟ್ಟ ಹೀನ ವ್ಯವಸ್ಥೆ ಹಿಂದೂ ವ್ಯವಸ್ಥೆ. ಆದರೆ ಸ್ವಾತಂತ್ರ್ಯಾನಂತರ ಬಲಾತ್ಕಾರಕ್ಕೆ ಇಂದು ಸಾರ್ವಜನಿಕ ರೂಪು ಮೂಡಿರುವುದು ಅಕ್ಷರ ಜ್ಞಾನವೇ ಮೊದಲಾದವುಗಳ ಕಾರಣದಿಂದ ಕೆಳಜಾತಿ — ವರ್ಗಗಳಲ್ಲಿ ಸ್ವಾಭಿಮಾನದ ಚಿಲುಮೆ ಚಿಮ್ಮಿರುವುದರಿಂದಲೇ.

ಕಳೆದ ಸುಮಾರು 50 ವರ್ಷಗಳಲ್ಲಿ ಅನೇಕ ಪೆಟ್ಟುಗಳು ಹಿಂದೂ ಮನಸ್ಸಿಗೆ ತಗಲಿರುವುದಾದರೂ ಮೂಲಭೂತ ಬದಲಾವಣೆಯು ಸಾಧ್ಯವಾಗಿಲ್ಲ. ಹಿಂದೂ ಮನಸ್ಸು "ಸಾಂಸ್ಕೃತಿಕ ಷಾಕ್"ಗೆ ಗುರಿಯಾದಾಗಲೇ ದಂಗೆ ಏಳುವುದನ್ನು ನಾವು ಕಂಡಿದ್ದೇವೆ. 1857ರ ದಂಗೆಗೆ ಮೂಲ ಕಾರಣ ಗುಂಡುಗಳನ್ನು ತಯಾರಿಸುವಾಗ ಹಂದಿ ಮತ್ತು ಗೋ ಮಾಂಸವನ್ನು ಬಳಸಲಾಗುತ್ತಿತ್ತು ಎಂಬುದು; 1977ರಲ್ಲಿ ಇಂದಿರಾ ಕಾಂಗ್ರೆಸ್ ಸೋಲಲು ಮೂಲ ಕಾರಣ ಸಂತಾನ ಹರಣ ವಿಷಯದಲ್ಲಿ ಅತಿರೇಕ ನಡೆದದ್ದು. ಹಿಂದೂ ಮನಸ್ಸಿನ ಈ ಪ್ರತಿಕ್ರಿಯೆಯನ್ನು ತಿಳಿದಿರುವುದರಿಂದಲೇ ಇತ್ತೀಚೆಗೆ ಜೈನ್ ಕಂಪನಿಯವರು ವನಸ್ಪತಿಯಲ್ಲಿ ಹಂದಿ ಮತ್ತು ಹಸುವಿನ ಕೊಬ್ಬನ್ನು ಬಳಸುತಿದ್ದರೆಂಬ ವಿಷಯವನ್ನು ಮುಂದಿನ ಚುನಾವಣೆಯಲ್ಲಿ ಉಪಯೋಗಿಸಿಕೊಳ್ಳಬೇಕೆಂದು ಭಾರತೀಯ ಜನತಾ ಪಕ್ಷ ಮತ್ತು ಲೋಕದಳ ನಿರ್ಧರಿಸಿವೆ.

30 ಮತ್ತು 40ರ ದಶಕಗಳಲ್ಲಿ ನಾಸ್ತಿಕತೆಯ ಪರವಾಗಿ, ಧರ್ಮದ ವಿರೋಧವಾಗಿ ಉಗ್ರವಾಗಿ ಪ್ರಚಾರ ಮಾಡುತ್ತಿದ್ದ ಕಮ್ಯುನಿಸ್ಟರು ಚುನಾವಣೆಗಳಿಗೆ ಸ್ಪರ್ಧಿಸತೊಡಗಿದಾಗ ಕೂಡಲೇ ಈ ವಿಷಯಗಳ ಬಗ್ಗೆ ದಿವ್ಯ ಮೌನ ವಹಿಸಿರುವುದೂ ಹಿಂದೂ ಮನಸ್ಸಿನ ಈ ವಿಲಕ್ಷಣ ಗುಣದ ಕಾರಣದಿಂದಲೇ. ಇಂದು ಕಮ್ಯುನಿಸ್ಟರು ಈ ವಿಷಯಗಳನ್ನು 'ಮುಟ್ಟಿದ ತಕ್ಷಣ ಮೃತ್ಯು ತರುವಂಥ ಪೊಟ್ಯಾಸಿಯಂ ಸಾಯ್ನೈಡ್' ಎಂದು ಭಾವಿಸಿ ಬಿಟ್ಟಿದ್ದಾರೆ. ಹಿಂದೂ ವಿಧ್ವಸ, ಚರಿತ್ರೆ, ಸಮಾಜ ವ್ಯವಸ್ಥೆ, ರೀತಿ — ನೀತಿಗಳ ಬಗ್ಗೆ ಹಲವಾರು ಸಂದರ್ಭಗಳಲ್ಲಿ ಪ್ರಶ್ನೆ ಎತ್ತಿದವರು, ಬಿಸಿ ಬಿಸಿ ಚರ್ಚೆ ನಡೆಸಿದವರು ಡಾ. ರಾಮ ಮನೋಹರ ಲೋಹಿಯಾ. ಅವರ ಧ್ಯೇಯ ಹಿಂದೂ ಉದಾರವಾದಿ ಧೋರಣೆಯನ್ನು ಬೆಂಬಲಿಸಿ ಕಟ್ಟರ್‌ವಾದವನ್ನು ನಿಷ್ಕ್ರಿಯಗೊಳಿಸುವುದಾಗಿತ್ತು. 'ಕೇವಲ ಉದಾರವಾದ ಮಾತ್ರ ದೇಶದಲ್ಲಿ ಐಕ್ಯತೆಯನ್ನು ತರಬಲ್ಲದು" ಎಂಬ ಅವರ ಉಕ್ತಿ ಇಂದು ಅತ್ಯಂತ ಮಹತ್ವವನ್ನು ಪಡೆದಿದೆ. ಹಿಂದೂ ಕಟ್ಟರ್‌ವಾದಿಗಳು ಜಯಶಾಲಿಯಾಗಿ ಬಿಟ್ಟರೆ ಕೇವಲ ಹಿಂದೂ – ಮುಸ್ಲಿಂ ಎಂದು ಮಾತ್ರವಲ್ಲದೇ, ಜಾತಿ – ಪ್ರಾಂತಗಳ ಹಿನ್ನೆಲೆಯಲ್ಲಿಯೂ ಸಹ ದೇಶ ತುಂಡು ತುಂಡಾಗಿ ಹೋಗುತ್ತದೆ; ಕೇವಲ ಹಿಂದೂ ಉದಾರವಾದ ಮಾತ್ರ ದೇಶದ ಏಕತೆಯನ್ನು ರಕ್ಷಿಸಬಲ್ಲದು. ಹಿಂದೂ ಧರ್ಮದ ಕಟ್ಟರ್‌ವಾದಿಗಳು ಜಯಶಾಲಿಗಳಾಗುತ್ತಾರೋ ಉದಾರವಾದಿಗಳು ಜಯಶಾಲಿಗಳಾಗುತ್ತಾರೋ ಎಂಬುದರ ಮೇಲೆ ಕಳೆದ 5000 ವರ್ಷಗಳಿಂದಲೂ ನಡೆದಿರುವ ಸಮಾನತೆಗಾಗಿನ ಹೋರಾಟದ ಫಲಿತಾಂಶ ಅವಲಂಬಿಸಿದೆ. ಧಾರ್ಮಿಕ – ಮಾನವೀಯ ಸಮಸ್ಯೆಗಳೂ ಸಹ ಇಂದು ರಾಜಕಾರಣದೊಂದಿಗೆ ಬೆಳೆದುಕೊಂಡಿವೆ. ತನ್ನ ಮನಸ್ಸನ್ನು ಬದಲಾಯಿಸಿಕೊಳ್ಳುವುದು ಅಥವಾ ಕೆಳಕ್ಕೆ ಬಿದ್ದು ತುಳಿತಕ್ಕೊಳಗಾಗುವುದು ಇವೆರಡೇ ಹಿಂದೂ ಮನಸ್ಸಿನೆದುರು ಇರುವ ದಾರಿಗಳು" ಎಂಬ ಡಾ. ಲೋಹಿಯಾ ಅವರ ಚಿಂತನೆಯು ಇಂದಿಗೂ ಸಕಾಲಿಕವಾಗಿದೆ.

30 ಮತ್ತು 40ರ ದಶಕಗಳಲ್ಲಿ ನಾಸ್ತಿಕತೆಯ ಪರವಾಗಿ, ಧರ್ಮದ ವಿರೋಧವಾಗಿ ಉಗ್ರವಾಗಿ ಪ್ರಚಾರ ಮಾಡುತ್ತಿದ್ದ ಕಮ್ಯುನಿಸ್ಟರು ಚುನಾವಣೆಗಳಿಗೆ ಸ್ಪರ್ಧಿಸತೊಡಗಿದಾಗ ಕೂಡಲೇ ಈ ವಿಷಯಗಳ ಬಗ್ಗೆ ದಿವ್ಯ ಮೌನ ವಹಿಸಿರುವುದೂ ಹಿಂದೂ ಮನಸ್ಸಿನ ಈ ವಿಲಕ್ಷಣ ಗುಣದ ಕಾರಣದಿಂದಲೇ.

ಆದರೆ ? ಹಿಂದೂ 'ಆಗಿದ್ದು'ಕೊಂಡು ಮನಸ್ಸನ್ನು ಬದಲಾವಣೆ ಮಾಡಿಕೊಳ್ಳುವುದು ಸಾಧ್ಯವೇ ? ಹಾಗೆ ನೋಡಿದರೆ ಕಳೆದ ಸುಮಾರು 2500 ವರ್ಷಗಳಲ್ಲಿ ಹಿಂದೂ ವ್ಯವಸ್ಥೆಯನ್ನು ಹಲವಾರು ಕ್ರಾಂತಿಕಾರಿ ವಿಚಾರಗಳು, ಚಳವಳಿಗಳು ತಟ್ಟಿವೆ. ಹಿಂದೂ ವ್ಯವಸ್ಥೆ ಅವೆಲ್ಲವುಗಳನ್ನೂ ಅರಗಿಸಿಕೊಂಡು ಯಥಾರೀತಿ ನಿಂತುಕೊಂಡಿದೆ. ಹಿಂದೂ ಮನಸ್ಸು ಈವರೆಗೆ ಈಜನ್ಮದ ಅನಂತರದ ಮುಕ್ತಿಗಾಗಿ ಹಂಬಲಿಸಿದೆ; ಶೋಧಿಸಿದೆ; ಯತ್ನಿಸಿದೆ. ಆದರೆ ಈಗ ಇದೇ ಜನ್ಮದಲ್ಲಿ, ಭೂಮಿಯ ಮೇಲೆಯೇ ಮುಕ್ತಿಯನ್ನು ಪಡೆಯಲು ಅದು ಹಂಬಲಿಸಬೇಕಾಗಿದೆ; ಶೋಧಿಸಬೇಕಾಗಿದೆ; ಯತ್ನಿಸಬೇಕಾಗಿದೆ. ಇದಕ್ಕಾಗಿ ಹಿಂದೂ ಮನಸ್ಸು ಬಗ್ಗೆ ಹೆಮ್ಮೆ – ಅಭಿಮಾನ ತಾಳುವುದನ್ನು ತ್ಯಜಿಸಿ, ನಿರ್ವ್ಯಾಮೋಹವನ್ನು ಮೈಗೂಡಿಸಿಕೊಳ್ಳಬೇಕಾದುದು ಅತ್ಯಗತ್ಯ. ಹಿಂದೂ ಮನಸ್ಸು ಇದಕ್ಕೆ ಸಿದ್ಧವಿದೆಯೇ ? ●

ದಲಿತ ವರ್ಗಗಳು ಮಾನವೀಯತೆ, ಆರ್ಥಿಕಸಮಾನತೆಗಾಗಿ ಒಗ್ಗಟ್ಟಿನಿಂದ ಅವಿಶ್ರಾಂತವಾಗಿ ಹೋರಾಟ ನಡೆಸಬೇಕು. ಭೂವ್ಯೋಮಾಕಾಶಗಳು ಪ್ರತಿಧ್ವನಿಸುವ ಹಾಗೆ ಸಾಮಾಜಿಕ ವಿಪ್ಲವ ಶಂಖವನ್ನು ಮೊಳಗಿಸಬೇಕು. ಇಡೀ ಮಾನವ ಜನಾಂಗವೇ ತಲ್ಲಣಿಸುವಂತೆ ವಿಪ್ಲವ ಜ್ಯೋತಿಗಳನ್ನು ಬೆಳಗಿಸಬೇಕು.

• • •

ನಿಮ್ಮ ಜೀವನದ ಒಳಿತು-ಕೆಡಕುಗಳು ನೀವು ಹುಟ್ಟುವ ಮುನ್ನವೇ ನಿರ್ಧಾರಿತವಾಗಿ ಬಿಟ್ಟಿವೆ ಎಂಬ ಮೂಢ ನಂಬಿಕೆಯನ್ನು ಕಿತ್ತೊಗೆಯಿರಿ. ನಿಮ್ಮ ಸುಖ-ದುಃಖ ದಾರಿದ್ರ್ಯ ಗಳಿಗೆ ದೇವರು ಕಾರಣ ಅಲ್ಲವೇ ಅಲ್ಲ. ಅವುಗಳಿಂದ ಬಿಡುಗಡೆ ಇಲ್ಲ ಎಂಬ ನಿರಾಶೆ ಮಾತ್ರ ಬೇಡ. ಈ ತೆರನಾದ ಅನಂತ ಮೂಢ ನಂಭಿಕೆಗಳೇ ನೀವು ಶಾಶ್ವತ ಗುಲಾಮರಾಗಿರಲು ಕಾರಣ.

• • •

ಪ್ರಸ್ತುತ ನಾವುರಾಜಕೀಯ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿ ಚಿದುರಿಹೋಗಿದ್ದೇವೆ. ಕೆಲವರು ವಿರೋ[illegible]ಕ್ಷಗಳಲ್ಲಿದ್ದಾರೆ. ಅಂತಹ ನಾಯಕರಲ್ಲಿ [illegible]ಶಃ ನಾನೂ ಒಬ್ಬ. ಯಾವುದು ಹೇಗೇ ಇರಲಿ ಪರಿಸ್ಥಿತಿ, ಕಾಲ ಕೂಡಿಬಂದಾಗ ಈ ದೇಶದಲ್ಲಿ ಏಕತೆ ಸಾಧಿಸುವಲ್ಲಿ ಜಗತ್ತಿನ ಯಾವ ಶಕ್ತಿಯೂ ಅಡ್ಡಿ ಬರದೆಂದು ನನ್ನ ನಂಬಿಕೆ. ವಿವಿಧ ಜಾತಿಗಳು, ಮತಗಳಿಂದ ಕೂಡಿದ ನಾವು ಯಾವುದೋ ಒಂದು ರೂಪದಲ್ಲಿ ಏಕತೆಯಿಂದಿರುವ ಪ್ರಜೆಗಳು.

• • •

ಇತರರ ದಯೆ, ಕೃಪೆಯ ಮೇಲೆ ಬದಕುವುದು ನಾಚಿಕೆಗೇಡು. ಜೀವನದಲ್ಲಿ ಆತ್ಮಾಭಿಮಾನಕ್ಕಿಂತ ಬೆಲೆಬಾಳುವಂತಹುದು ಬೇರೆ ಇಲ್ಲ. ಅದಿಲ್ಲದ ಮಾನವ ಜೀವಚ್ಛವದಂತೆ. ಆತ್ಮಾಭಿಮಾನದಿಂದ, ಗೌರವಪೂರ್ಣವಾಗಿ ಜೀವಿಸಲು ಕಷ್ಟಪರಂಪರೆಗಳನ್ನು ಎದುರಿಸ ಬೇಕಾಗುತ್ತದೆ. ಯಾರೇ ಆಗಲಿ, ಸಮಾಜದಲ್ಲಿ ಸಮುಚಿತ ಸ್ಥಾನ, ಅಧಿಕಾರ, ಬೆಲೆ ಪಡೆದಿರುತ್ತಾರೆಂದರೆ ಅದು ಅವರ ನಿರಂತರ ಹೋರಾಟದ ಫಲದಿಂದಲೇ !

–ಡಾ|| ಬಿ. ಆರ್. ಅಂಬೇಡ್ಕರ್

ರಾಮರಾಜ್ಯ ಒಂದು ಮಿಥ್ಯೆ

ಮೇಲಿಂದ ಮೇಲೆ 'ರಾಮರಾಜ್ಯ' 'ರಾಮರಾಜ್ಯ' ಎಂಬ ತಾರಕ ಮಂತ್ರವನ್ನು ನಮ್ಮ ಆಳುವ ವರ್ಗಗಳು ಒದರುತ್ತಾ ಬಂದಿವೆ. ಸುಖೀರಾಜ್ಯಕ್ಕೆ ಪರ್ಯಾಯವಾಗಿ ಈ ಪದವನ್ನು ಬಳಸಲಾಗುತ್ತದೆ.

ರಾಮನನ್ನು ಆದರ್ಶ ಪುರುಷನೆಂದು ಹಾಡಿ ಹೊಗಳುತ ಈ 'ರಾಮರಾಜ್ಯ' ಕಲ್ಪನೆ ಎಷ್ಟು ಪ್ರಸ್ತುತ. ರಾಮರಾಜ್ಯದ ಬಗೆಗಿನ ಒಂದು ವಿಶ್ಲೇಷಣೆ.

● ಪ್ರೊ. ಎಂ. ಎ. ಹೆಗಡೆ.

'ರಾಮರಾಜ್ಯ'ವೆಂಬ ಮಾತು. ಸುಖೀರಾಜ್ಯ' ಅಥವಾ .ಕಲ್ಯಾಣರಾಜ್ಯಕ್ಕೆ ಪರ್ಯಾಯ ಪದವಾಗಿ ರೂಢವಾಗಿದೆ. ಮಹಾತ್ಮಾಗಾಂಧೀಜಿಯಂಥವರು ಈ ಪದ ಮತ್ತಷ್ಟು ಬಳಕೆಗೆ ಬರುವುದಕ್ಕೆ ಕಾರಣರಾದರು. ರಾಮಭಕ್ತರ ಪಡೆಯ ವ್ಯವಸ್ಥಿತ ಪ್ರಚಾರದಿಂದಾಗಿ ಇಂದಿಗೂ ಅದೇ ಅರ್ಥದಲ್ಲಿ ಈ ಪದವನ್ನು ಬಳಸುತ್ತಿದ್ದೇವೆ.ಡಾ॥ ಅಂಬೇಡ್ಕರರಂಥವರು ರಾಮರಾಜ್ಯದ ಹೂರಣವನ್ನು ಹೊರಹಾಕಿದರೂ ರಾಮಭಕ್ತರ ಅಬ್ಬರದಲ್ಲಿ ಅವರ ಧ್ವನಿ ಅಡಗಿ ಹೋಯಿತು.

ಹಾಗೆ ನೋಡಿದರೆ ರಾಮನನ್ನು ಆದರ್ಶ ಪ್ರಭುವೆಂದು ಚಿತ್ರಿಸುವ ಪ್ರಯತ್ನದ ಮೂಲ ರಾಮಾಯಣ ಕಾವ್ಯದಲ್ಲಿಯೇ ಇದೆ. ಅವಕಾಶ ಸಿಕ್ಕಿದಾಗಲೆಲ್ಲ ರಾಮನ ರಾಜ್ಯಭಾರವನ್ನು ಕವಿ ಸಾಧ್ಯವಿದ್ದಷ್ಟು ಉತ್ತಮ ಶಬ್ದಗಳಿಂದ, ಆಕರ್ಷಕವಾದ ಭಾಷೆಯಲ್ಲಿ ವರ್ಣಿಸುತ್ತಾನೆ. ಉದಾಹರಣೆಗೆ ಮೊದಲನೆಯ ಸರ್ಗವನ್ನೇ ನೋಡಿ—

"ಲೋಕವೆಲ್ಲ ಸಂತೋಷಗೊಂಡಿರುತ್ತದೆ; ಪುಷ್ಟಿ ಹೊಂದಿರುತ್ತದೆ. ಧಾರ್ಮಿಕವಾಗಿ ರುತ್ತದೆ; ಎಲ್ಲರೂ ಕುಶಲಿಗಳೂ ರೋಗ ರಹಿತರೂ ಆಗಿರುತ್ತಾರೆ. ದುರ್ಭಿಕ್ಷದ ಭಯವಿಲ್ಲ. ಮಕ್ಕಳ ಸಾವನ್ನು ತಂದೆ-ತಾಯಿಗಳು ಕಾಣುವುದಿಲ್ಲ. ಹೆಂಗಳೆಯರೆಲ್ಲ. ಮುತ್ತೈದೆಯರೂ ಪತಿವ್ರತೆಯರೂ ಆಗಿರುತ್ತಾರೆ. ಬೆಂಕಿಯ ಭಯವಿಲ್ಲ. ನೀರಿನಲ್ಲಿ ಮುಳುಗಿ ಸಾಯುವ ಹೆದರಿಕೆಯಿಲ್ಲ. ಜ್ವರ ಪೀಡಿತರಾಗಿ ಸಾಯುವ ಅಂಜಿಕೆಯಿಲ್ಲ ಹಸಿವಿನ ಪೀಡೆಯಿಲ್ಲ. ಕಳ್ಳಕಾಕರ ಭಯವಿಲ್ಲ. ನಗರಗಳೂ ಜನಪಾದಗಳೂ ಧನ-ಧಾನ್ಯಗಳಿಂದ ತುಂಬಿರುತ್ತವೆ. ಜನರೆಲ್ಲ ಕೃತ ಯುಗದಲ್ಲಿರುವಂತೆ ಸುಖವಾಗಿರುತ್ತಾರೆ" (ಬಾಲ: ೧-೯೦-೯೪)

ರಾಮನ ಪಟ್ಟಾಭಿಷೇಕವಾದ ಮೇಲೆಯೂ ಇಂಥವೇ ಮಾತುಗಳು ಕೇಳಿ ಬರುತ್ತವೆ. ರಾಮಾಯಣ ಕಾವ್ಯ ಇಲ್ಲಿಗೆ ಮುಗಿಯದಿದ್ದರೆ ರಾಮರಾಜ್ಯವನ್ನು ಕಲ್ಪಿಸಿಕೊಂಡು ಹೊಗಳುತ್ತಿರಬಹುದಾಗಿತ್ತು. ಆದರೆ ಉತ್ತರ ಕಾಂಡವೊಂದು ಇರುವುದರಿಂದ ರಾಮನ ರಾಜ್ಯಭಾರದ ಸ್ವರೂಪ ತಿಳಿಯುತ್ತದೆ. ನಮ್ಮ ಸುತ್ತ ಕಟ್ಟಿಕೊಂಡಿದ್ದ ಭ್ರಮೆಯ ಕವಚಗಳು ಕಳಚುತ್ತಾ ಬಂದಂತೆ ಅರಿವಿಗೆ ಬರುವ ಸತ್ಯದ ಸ್ವರೂಪ ದಿಗ್ಭ್ರಮೆಗೊಳಿಸುತ್ತದೆ. ಉತ್ತರ ಕಾಂಡವು ಪೂರ್ಣವಾಗಿ ಪ್ರಕ್ಷಿಪ್ತವೆಂಬ ಅಭಿಪ್ರಾಯವನ್ನು ಅನೇಕ ವಿದ್ವಾಂಸರು ವ್ಯಕ್ತಪಡಿಸುತ್ತಾರೆಂಬುದು ನಿಜ. ಆದರೆ ಉತ್ತರಕಾಂಡವನ್ನು ರಾಮಾಯಣದ ಒಂದು ಭಾಗವೆಂದೇ ಭಾರತೀಯರು ಬಹುಕಾಲದಿಂದಲೂ ಸ್ವೀಕರಿಸಿ ಪೂಜಿಸುತ್ತಿರುವುದೂ ಸುಳ್ಳಲ್ಲ. ಅದನ್ನು ವಾಲ್ಮೀಕಿಯೇ ಬರೆದಿರಲಿ ಅಥವಾ ಇನ್ನಾರಾದರೂ ಬರೆದಿರಲಿ ಅದು ರಾಮನ ಕಥೆಯ ಅಧಿಕೃತ ಮುಂದುವರಿಕೆಯೆಂಬುದನ್ನು ಶೋಷಕರ ಸಂಹಿತೆಯೆಂಬುದನ್ನು ಅಲ್ಲಗಳೆಯುವಂತಿಲ್ಲ.

ಉತ್ತರಕಾಂಡದ ಮೊದಲ ಭಾಗದಲ್ಲಿ ರಾವಣನೇ ಮುಂತಾದವರ ಕಥೆಯನ್ನು ವಿಸ್ತಾರವಾಗಿ ಹೇಳಲಾಗಿದೆ. ಪಟ್ಟಾಭಿಷೇಕ ಮಹೋತ್ಸವದ ಸಂದರ್ಭದಲ್ಲಿಯೇ ರಾವಣನೇ ಮುಂತಾದವರ ಸವಿಸ್ತಾರ ಚರಿತ್ರೆಯನ್ನು ಕೇಳಿ ರಾಮ ಸುಖಿಸುತ್ತಾನೆ. ಅಲ್ಲಿಗೆ ಬಂದ ಜನಕ, ಕೇಕಯರಾಜ, ಪ್ರತರ್ದನ ಮುಂತಾದ ರಾಜರನ್ನೂ ವಿಭೀಷಣ, ಸುಗ್ರೀವ ಮುಂತಾದ ಗೆಳೆಯರನ್ನೂ ಕಳುಹಿಸಿಕೊಡುತ್ತಾನೆ. ಅನಂತರ ಕುಬೇರನಿಂದ ಪುಷ್ಪಕವಿಮಾನ ಕಾಣಿಕೆಯಾಗಿ ಬರುತ್ತದೆ. ನೆನೆದಾಗ ಬರುವಂತೆ ವಿಮಾನಕ್ಕೆ ಆದೇಶಿಸಿ ಕಳುಹಿಸಿಕೊಟ್ಟ ಮೇಲೆ ಭರತ ಬಂದು ರಾಮರಾಜ್ಯವನು ಹೊಗಳತೊಡಗುತ್ತಾನೆ.

ಈ ರಾಮರಾಜ್ಯದ ಸ್ತುತಿಯು ಹಿಂದೆ ಹೇಳಿದ್ದೇ ಆದ್ದರಿಂದ ಮತ್ತೆ ಅದನ್ನು ಗಮನಿಸಬೇಕಾಗಿಲ್ಲ. ರಾಮನ ಪಟ್ಟಾಭಿಷೇಕ ಮುಗಿದ ಕೂಡಲೇ ಬಂದು ಹೇಳುವ ಮಾತುಗಳಿಗೆ ಹೊಗಳಿಕೆಯೇ ಗುರಿಯಾಗಿರುವಂತೆ ಕಾಣುತ್ತದೆ. ಅಭಿಷಿಕ್ತನಾಗಿ ತಿಂಗಳೊಂದನ್ನೂ ಕೂಡ ಕಳೆಯದ ರಾಮ ಈ ಹೊಗಳಿಕೆಗೆ ಪಾತ್ರನಾಗುವುದಾದರೂ ಹೇಗೆ? ಒಂದು ವೇಳೆ ರಾಜ್ಯದ ವ್ಯವಸ್ಥೆ ಅಷ್ಟು ಚೆನ್ನಾಗಿರುವುದೇ ನಿಜವಾಗಿದ್ದರೆ ಅದಕ್ಕೆ ಹೊಗಳಿಕೆ ಸಲ್ಲಬೇಕಾದ್ದು ಭರತನಿಗೇ ಹೊರತು ರಾಮನಿಗಲ್ಲ. ಯಾಕೆಂದರೆ ಅಲ್ಲಿಯವರೆಗೆ ರಾಜ್ಯದ ಆಡಳಿತವನ್ನು ನಿರ್ವಹಿಸಿದವನು ಭರತ.

ಅದು ಹೇಗೇ ಇದ್ದರೂ ಈ ಹೊಗಳಿಕೆಯನ್ನು ಕೇಳಿದ ರಾಮ ಉಬ್ಬಿ ಬಿಟ್ಟ. ಪುಷ್ಪಕ ವಿಮಾನವನ್ನು ನೆನೆದುಕೊಂಡ. ಅದರ ಮೇಲೆ ಕುಳಿತು ಅಶೋಕವನವನ್ನು ಪ್ರವೇಶಿಸಿದ. ಈ ಅಶೋಕವನ ಅಯೋಧ್ಯೆಯ ಸಮೀಪದಲ್ಲಿಯೇ ಇರುವ ಒಂದು ವನ. ರಾಜವಂಶದವರ ವಿಹಾರಸ್ಥಳ. ಸಹಜವಾದ ಮರಗಳಲ್ಲದೆ ಶಿಲ್ಪಿಗಳಿಂದ ನಿರ್ಮಿತವಾದ ಮರಗಳು ಇಲ್ಲಿದ್ದವು. ರಾಜವಂಶದವರ ವಿಹಾರ–ವಿಲಾಸಗಳಿಗೆ ಎಲ್ಲ ಅನುಕೂಲಗಳೂ ಇದ್ದವೆನ್ನಬಹುದು.

ಈ ಸುಂದರವಾದ ಅಶೋಕವನವನ್ನು ಸೇರಿದ ರಾಮ ಒಂದು ಆಸನದ ಮೇಲೆ ಕುಳಿತ. ಸೀತೆಯನ್ನು ಕೈಹಿಡಿದು ಬಳಿಯಲ್ಲಿ ಕುಳ್ಳಿರಿಸಿಕೊಂಡ. ಮೈರೇಯಕರೆಂಬ ವಿಶಿಷ್ಟವಾದ ಮದ್ಯವನ್ನು ದೇವೇಂದ್ರನು ಶಚಿಗೆ ಕುಡಿಸುವಂತೆ ಕುಡಿಸಿದ. (ಸೀತಾಮಾದಾಯ ಹಸ್ತೇನ ಮಧು ಮೈರೇಯಕಂ ಶುಚಿ। ಪಾಯಯ್ತಾಮಾಸ ಕಾಕುತ್ಸ್ಥಃ ಶಚೀಮಿವ ಪುರಂದರಃ॥೪೨-೧೮-೧೯ ಹೀಗೆ ಮಧ್ಯಪಾನ ಮಾಡಿದ ಮೇಲೆ ರುಚಿಕರವಾದ ಮಾಂಸಾಹಾರವನ್ನು ರಾಮನ ಸೇವನೆಯ ಸಲುವಾಗಿ ಸೇವಕರು ತಂದರು. ೨೧೭-೨೦

ರಾಮ–ಸೀತೆಯರ ಜೊತೆಗೆ ದೊಡ್ಡ ಪರಿವಾರವಿತ್ತು. ಅವರು ನೃತ್ಯ-ಗೀತಗಳಲ್ಲಿ ಪರಿಣತರಾದ ಹೆಂಗಳೆಯರು. ಅವರೆಲ್ಲ ಸುಂದರಿಯರು. ಯುವತಿಯರು. ಅವರೂ ಯಥೇಚ್ಛವಾಗಿ ಮದ್ಯಪಾನ ಮಾಡಿದರೂ. ಅನಂತರ ರಾಮನ ಮನೋರಂಜನೆಯ ಸಲುವಾಗಿ ನರ್ತಿಸಿದರು. (ಬಾಲರೂಪವತ್ಯಸ್ಚ ಸ್ತ್ರಿಯಃ ಪಾನವಶಂಗತಾಃ। ಉಪಾನೃತ್ಯಂತ ಕಾಕುತ್ಸ್ಥಃ ನೃತ್ಯ-ಗೀತವಿಶಾರ ದಾಃ॥) ರಸಿಕನಾದ ರಾಮ ಅವರೊಂದಿಗೆ ವಿನೋದವಾಗಿ ಕಾಲಕಳೆದ.

ರಾಮನೂ ಮನುಷ್ಯನೇ. ಅವನಿಗೂ ದಣಿವು ಬೇಸರವುಗಳುಂಟು. ಅವನ್ನು ನೀಗಿಕೊಳ್ಳುವ ಸಲುವಾಗಿ ಇಂಥ ವಿನೋದ ವಿಹಾರಗಳಲ್ಲಿ ತೊಡಗಿದರೆ ತಪ್ಪೇನಿಲ್ಲ ಅದೊಂದು ಆಕ್ಷೇಪಣೀಯವಾದ ವಿಚಾರವಲ್ಲವೆಂದು ಸಮಾದಾನವನ್ನು ಹೇಳಬಹುದು. ಆದರೆ ಕವಿ ಇಷ್ಟಕ್ಕೆ ನಿಲ್ಲಿಸುವುದಿಲ್ಲ. ಮತ್ತೆ ಹೇಳುತ್ತಾನೆ 'ರಮಯಾಮಾಸ ವೈಜೇಹೀರೆುಹನ್ಯಹಸಿ ದೇವವತ್' ವೈದೇಹಿಯೊಂದಿಗೆ ಪ್ರತಿನಿತ್ಯವೂ ದೇವತೆಯಂತೆ ವಿಹರಿಸಿದನಂತೆ! ಅಷ್ಟೆ ಅಲ್ಲ-"ದಶವರ್ಷ ಸಹಸ್ರಾಣಿ ಗತಾನಿ ಸುಮಹಾತ್ಮನೋಃ" ಆ ಮಹಾತ್ಮರ ಹತ್ತು ಸಾವಿರ ವರ್ಷಗಳು ಕಳೆದು ಹೋದವು! ರಾಮನ ಹನ್ನೊಂದು ಸಾವಿರ ವರ್ಷಗಳ ಆಳ್ವಿಕೆಯಲ್ಲಿ ಹತ್ತು ಸಾವಿರ ವರ್ಷಗಳ ರಾಜ್ಯಭಾರ ಹೀಗಿತ್ತು ಎನ್ನೋಣವೇ?

ಎಲ್ಲ ದಿನಗಳೂ ಹೀಗೇ ಕಳೆಯುವಂತಿರಲಿಲ್ಲ. ರಾಮನು ಅಶೋಕವನದಲ್ಲಿಯೇ ಕಾಲಕಳೆಯುಲಿಲ್ಲ. ಅರಮನೆಯಲ್ಲಿ ಅವನವಾಸ. ಅಲ್ಲಿದ್ದಾಗ ಅವನ ದಿನಚರಿ ಹೇಗಿತ್ತೆಂಬುದನ್ನೂ ಕವಿ ವರ್ಣಿಸುತ್ತಾನೆ.

ಪೂರ್ವಾಹ್ನೇ ಧರ್ಮಕಾರ್ಯಾಣಿ ಕೃತ್ವಾ ಧರ್ಮೇಣ ಧರ್ಮವಿತ್| ಶೇಷಂ ದಿವಸ ಭಾಗರ್ಧಮಂತಃ ಪುರಗಲೊಭವತ್॥ ೪೨.೨೭

ಹಗಲಿನ ಮೊದಲರ್ಧಭಾಗದಲ್ಲಿ ಧರ್ಮಜ್ಞನಾದ ರಾಮನು ಧರ್ಮಕಾರ್ಯಗಳನ್ನು ಆಚರಿಸಿ ಉಳಿದ ಹಗಲಿನ ಅರ್ಧವನ್ನು ಅಂತಪುರದಲ್ಲಿ ಕಳೆಯುತ್ತಿದ್ದನು. "ಸೀತೆಯೂ ಹಾಗೆಯೇ ಪೂರ್ವಾಹ್ನದಲ್ಲಿ ದೇವತಾಕಾರ್ಯ, ಅತ್ತೆಯರ ಪೂಜೆ ಮುಂತಾದವುಗಳನ್ನು ಮಾಡಿ, ಚಿತ್ರ ವಿಚಿತ್ರವಾದ ಆಭರಣಗಳನ್ನು ಧರಿಸಿಕೊಂಡು ದೇವೇಂದ್ರನ ಬಳಿಗೆ ಶಚಿಯು ಬರುವಂತೆ ರಾಮನ ಬಳಿಗೆ ಬರುತ್ತಿದ್ದಳು. ಸೀತೆಯಲ್ಲದೆ ರಾಮನನ್ನು ರಂಜಿಸಲು ಹತ್ತುಜನ ವಿದೂಷಕರಿದ್ದರು. "ವಿಜೆಯ, ಮಧುಮುತ್ತ, ಶಾಶ್ಯಪ, ಮಂಗಲ ಕುಲ, ಸುರಾಜಿ ಕಾಲಿಯ, ಭದ್ರ,ದಂತ ವಕ್ರ ಮತ್ತು ಸುಮಾಗಧ' (೪೩.೨) ಇವರು ಹಾಸ್ಯಮಯನಾದ ಕಥೆಗಳನ್ನು ಹೇಳುವುದರಲ್ಲಿ ನಿಪುಣರು. ಇವರ ಮಾತು ಕಥೆಗಳನ್ನು ಕೇಳುತ್ತಾ ರಾಮ ಸಂತಸ ಪಡೆಯುತ್ತಿದ್ದ. ಇವರೊಂದಿಗೆ ಮಾತನಾಡುತ್ತಿರುವಾಗಲೇ ಸೀತೆಯ ಬಗೆಗೆ ಜನಾಭಿಪ್ರಾಯವೇನಿಸಿದೆಯೆಂಬುದು ರಾಮನಿಗೆ ತಿಳಿದದ್ದು.

ಹೀಗೆ ಕಾಲ ಕಳೆಯುತ್ತಿದ್ದ ರಾಮನಿಗೆ ರಾಜ್ಯಾಡಳಿತವನ್ನು ಗಮನಿಸಲು ಸಮಯವಾದರೂ ಎಲ್ಲಿತ್ತು? ಅವನಿಗೆ ಆಸಕ್ತಿಯೂ ಇರಲಿಲ್ಲವೆನಿಸುತ್ತದೆ. ರಾಜ್ಯವನ್ನು ನಿರ್ವಹಿಸುತ್ತಿದ್ದವನು ಬಹುಷಃ ಅವನ ತಮ್ಮಂದಿರು. ಹೆಚ್ಚಾಗಿ ಭರತ. ರಾಮನು ರಾಜಸಭೆಯನ್ನು ಸೇರುವುದೇ ಅಪರೂಪ ಬಹುಶಃ ಪೂರ್ವಾಹ್ನದ ಧರ್ಮಕಾರ್ಯಗಳಲ್ಲಿ ಅದೂ ಸೇರಿರಬಹುದು. ರಾಮಾಯಣದ ಪ್ರಕಾರ ಸೀತೆಯ ಬಗೆಗಿನ ಜನಾಭಿಪ್ರಾಯವನ್ನು ಬಿತ್ತರಿಸುವವನು ಭದ್ರನೆಂಬ ವಿದೂಷಕ. ಅವನು ಮುಂದಿನ ಕಥೆಗಳಲ್ಲಿ ಹೇಳುವಂತೆ ಗುಪ್ತಚಾರನಲ್ಲ. ಜನಾಭಿಪ್ರಾಯವನ್ನು ತಿಳಿಯುವ ಕೆಲಸಕ್ಕೆ ನೇಮಿಸಲ್ಪಟ್ಟವನೂ ಅಲ್ಲ. ರಾಮನೂ ಅವನನ್ನು ಕೇಳಿದ್ದು ಗಂಭೀರವಾಗಿಯೂ ಅಲ್ಲ. ವಿದೂಷಕರ ಜೊತೆ ಹರಟುತ್ತಿರುವಾಗ ಲಘುವಾಗಿ ಕೇಳುತ್ತಾನೆ. ಅಷ್ಟೇ. ಅನಂತರ ಜನಾಪವಾದ ಬಂತೆಂದು ಸೀತೆಯನ್ನು ಪರಿತ್ಯಜಿಸುತ್ತಾನೆ.

ಸೀತಾಪರಿತ್ಯಾಗ ಯಾವಾಗ ನಡೆಯಿತೆಂಬುದನ್ನು ವಿದ್ವಾಂಸರು ವಿವರಿಸಲು ಹೋಗುವುದಿಲ್ಲ. ಹಿಂದಿನ 'ದಶವರ್ಷಸಹಸ್ರಾಣಿ' ಎಂಬ ಪಾಠವನ್ನೊಪ್ಪಿದರೆ ಹತ್ತುಸಾವಿರ ವರ್ಷಗಳ ನಂತರ ವೆಂದಾಗುತ್ತದೆ. ಕೆಲವು ಪ್ರತಿಗಳಲ್ಲಿ ಆ ವಾಕ್ಯ ಸಿಗುವುದಿಲ್ಲ. ಕೆಲವರು ಪಟ್ಟಾಭಿಷೇಕವಾದ ಕೆಲವೇ ದಿನಗಳಲ್ಲಿ ಸೀತಾ ಪರಿತ್ಯಾಗ ನಡೆಯಿತೆನ್ನುತ್ತಾರೆ. ಇದು ರಾಮನನ್ನು ಕಾಪಾಡುವ ಸಲುವಾಗಿ ಸೀತೆಯನ್ನು ಬಲಿಗೊಟ್ಟಂತೆ. ಪರಿತ್ಯಾಗದ ಸಮಯದಲ್ಲಿ ಅವಳು ತುಂಬುಗರ್ಭಿಣಿ. ಪಟ್ಟಾಭಿಷೇಕವಾಗುವುದಕ್ಕಿಂತ ಮೊದಲು ಇದ್ದದ್ದು ಲಂಕೆಯಲ್ಲಿ. ಹಾಗಾಗಿ ಅದು ಅಪಭ್ರಂಶವಾಗುತ್ತದೆ. ಭವಭೂತಿಯಂಥ ನಾಟಕಕಾರ ರಾಮನನ್ನು ಉಳಿಸುವ ಸಲುವಾಗಿ ಇಂಥ ತಪ್ಪು ಮಾಡಿದ್ದಾನೆ. ಸಾಕಷ್ಟು ಕಾಲ-ಕಳೆದ ನಂತರ ಸೀತಾಪರಿತ್ಯಾಗವಾಯಿತೆಂದರೆ ಜನಾಪವಾದದ ಮಾತು ರಾಮನ ಕಿವಿಗೆ ಕೇಳಿಸುತ್ತಿರಲಿಲ್ಲವೆಂದೇ ಆಗುತ್ತದೆ.

ರಾಮರಾಜ್ಯದ ಮುಗಿಲು ಮುಟ್ಟಿದ ಕ್ರೂರತೆಗೆ ಶಂಬೂಕವಧೆಯೊಂದು ಜ್ವಲಂತ ಉದಾಹರಣೆ. ಶೂದ್ರನಾದ ಶಂಬುಕ ತಪಸ್ಸು ದೂಡುತ್ತಿದ್ದ. ಆವನು ತಪಸ್ಸು ಮಾಡುವ ಅಪರಾದವನ್ನು ಮಾಡುತ್ತಿದ್ದಾನೆಂದು ತಿಳಿದೊಡನೆ ಮಹಾವೀರನಾದ ರಾಮ ಹಿರಿದಕತ್ತಿಯನ್ನು ಹಿಡಿದು ಊರೆಲ್ಲ ತಿರುಗಾಡಿ, ವನದಲ್ಲಿ ತನ್ನಷ್ಟಕ್ಕೆ ತಾನು ತಪಸ್ಸನ್ನಾಚರಿಸುತ್ತಿದ್ದ ಶಂಬೂಕನನ್ನು ನಿರ್ದಯವಾಗಿ ಕತ್ತರಿಸಿ ಹಾಕಿದ. ಈ ಕಥೆಯಂತೂ ಹೇಸಿಕೆಯನ್ನು ತರುತ್ತದೆ. ಇಂದು ದಲಿತರ ಮೇಲೆ ನಡೆಯುವ ದೌರ್ಜನ್ಯಗಳಿಗೆ ಸಮಾನವಾದುದು ಅದೇ ರಾಮದೇವರ ದಲಿತರನ್ನು ಸುಡುತ್ತಿದ್ದಾರೆ; ಅವರಿಗೆ ಮಲ ತಿನ್ನಿಸುತ್ತಿದ್ದಾರೆ: ಸಾಮಾಜಿಕ ಬಹಿಷ್ಕಾರದ ಬೆದರಿಕೆಯಿಂದ ನಿತ್ಯ ನರಕವನ್ನು ಸೃಷ್ಟಿಸುತ್ತಿದ್ದಾರೆ. ಇಂಥ ಹೇಯಕೃತ್ಯಗಳನ್ನು ನಡೆಸುತ್ತಿದ್ದ ರಾಮರಾಜ್ಯವು ಹರಾಮರಾಜ್ಯವೇ ಅಲ್ಲವೇ ?

ಪ್ರಕ್ಷಿಪ್ತವೆನಿಸಿದ ಇನ್ನೊಂದು ಕಥೆಯಲ್ಲಿ ನಾಯಿಯೊಂದು ಭಿಕ್ಷುವೊಬ್ಬ ತನ್ನನ್ನು ಹೊಡೆದನೆಂದು ದೂರು ಕೊಡುತ್ತದೆ. ಆ ಭಿಕ್ಷುವಿಗೆ ಶಿಕ್ಷೆಯನ್ನು ಕೊಡಲು ರಾಮ ಯೋಚನೆಗೀಡಾಗುತ್ತಾನೆ. ಆಗ ನಾಯಿಯೇ ಪರಿಹಾರ ಹೇಳುತ್ತದೆ-"ಇವನನು ಕಲಾಜರ ಕ್ಷೇತ್ರದ ಕುಲಪತಿಯನ್ನಾಗಿ ಮಾಡು" ಎಂದು ಅದರ ಕಾರಣವನ್ನು ಅದೇ ಹೇಳುತ್ತದೇ ಹಿಂದಿನ ಜನ್ಮದಲ್ಲಿ ತಾನು ಅಲ್ಲಿ ಕುಲಪತಿಯಾದ್ದರಿಂದಲೇ ಈಗ ನಾಯಿಯ ಜನ್ಮ ಬಂತೆಂದು. ಈ ಕಥೆಯೂ ಅಷ್ಟೇ ರಾಮರಾಜ್ಯದಲ್ಲಿ ಬ್ರಾಹ್ಮಣರಿಗೆ ರಕ್ಷಣೆಯಿತ್ತು. ಆವರು ಎಂಥ ಅಪರಾಧ ಮಾಡಿದರೂ ಶಿಕ್ಷೆಯಿರಲಿಲ್ಲವೆಂಬುದನ್ನು ತೋರಿಸುತ್ತದೆ. ಈ ಕಥೆಯನ್ನು ಕೇಳಿದ ಮೇಲೆ ರಾಮನ ಮೇಲಿನ ಗೌರವ ಮತ್ತಷ್ಟು ಕುಣಿಯುತ್ತದೆ.


ಹೀಗೆ ರಾಮರಾಜ್ಯದ ವಿವರಗಳನ್ನು ಕೊಡುವ ಉತ್ತರಕಾಂಡದ ಪರಿಶೀಲನೆ ರಾಮರಾಜ್ಯದ ಮಥ್ಯಗಳನ್ನು ಬಯಲು ಮಾಡುವಲ್ಲಿ ಸಹಕಾರಿಯಾಗಿದೆ. ಬೆರೆತ್ಮಕ ದೃಷ್ಟಿಯಿಂದ ಪರಿಶೀಲಿಸಿದಾಗ 'ರಾಮರಾಜ್ಯ' ವೆಂಬುದು ಇಂದಿನ ರಾಜ್ಯಾಡಳಿತಕ್ಕಿಂತ ಬಹಳ ಬೇರೆಯಾಗಿರಲಿಲ್ಲವೆನಿಸುತ್ತದೆ. ರಾಜಕೀಯ ವ್ಯವಹಾರಗಳಲ್ಲಿ ರಾಮನು ಕೂಡ ಈಗಿನವರಷ್ಟೇ ಅಸಡ್ಡೆಯಿಂದಿರುತ್ತಿದ್ದ; ಉದಾಸೀನನಾಗಿದ್ದ; ಮಾನೆಯಾಗಿದ್ದ. ಅದನ್ನೊಂದು ಆದರ್ಶ ರಾಜ್ಯವೆಂದು ಕೊಂಡಾಡುವವರು ಮುಗ್ಧರಾಗಿರಬೇಕು. ಇಲ್ಲ. ವಂಚಕರಾಗಿರಬೇಕು.

ಚಾತುರ್ವರ್ಣ್ಯ ಸಿದ್ಧಾಂತ ಅಳಿಯಲೇಬೇಕು. ಹಿಂದೂ ಸಮಾಜದಲ್ಲಿ ನಿಮ್ಮ ಜಾತಿಗಳನ್ನು ಸಮಾನತೆಯಿಂದ ಕಾಣಬೇಕು ಸವರ್ಣೀಯರು ಸಕಲ ಭೋಗ ಭಾಗ್ಯಗಳನ್ನೂ ಅನುಭವಿಸುತ್ತಿದ್ದು. ದಲಿತರು ಪರಮ ದರಿದ್ರರಾಗಿ ಕ್ಷೀಣಿಸುತ್ತಿರುವುದನ್ನು ನಾನು ಸಹಿಸಲಾರೆ. ನಿಮ್ಮವರ್ಗದವರು ಯಾವುದನ್ನು ಕಳೆದುಕೊಂಡಿರುವರೋ ಅದರಿಂದಲೇ ಇತರ ಜಾತಿಗಳವರು ಪ್ರಗತಿ ಸಾಧಿಸುತ್ತಿರುವರು ನೀವು ಅನುಭವಿಸುತ್ತಿರುವ ಬಡತನ. ಅಮಾನುಷತ್ವ ಗತಜನ್ಮದ ಪಾಪದ್ದಲ್ಲ. ನಿಮ್ಮ ನೆತ್ತಿಗಳ ಮೇಲೆ ಕುಳಿತು, ನಿಮಗಿಂತಲೂ ಶ್ರೇಷ್ಠರೆಂದು ನಿಮ್ಮನ್ನು ನಿರಂಕುಶದಿಂದ ನಿರ್ದಾಕ್ಷಿಣ್ಯದಿಂದ ದೋಚುತ್ತಿರುವವರ ಪಿತೂರಿ. ಅದೃಷ್ಟದಲ್ಲಿ ನಂಬಿಕೆಯನ್ನು ತ್ಯಜಿಸಿ. ನಿಮ್ಮಲ್ಲಿರುವ ಶಕ್ತಿಯನ್ನು ನಂಬಿ ಸಾಗಿ.

— ಡಾ॥ ಬಿ. ಆರ್. ಅಂಬೇಡ್ಕರ್.

ಅವಶೇಷಗಳ ಹಕ್ಕಿ ಪಿಕ್ಕ !

ಇವನ ಕುಂಚದಲ್ಲಿ ಪತನಗೊಂಡ ಅವಶೇಷಗಳು, ಬಾದಾಮಿ ಪಟ್ಟದಕಲ್ಲಿನ ಮೂಕ ದೇವಾಲಯ, ಬಸದಿಗಳು ಶಬ್ದಪಡೆದುಕೊಂಡು ತಮ್ಮದೇ ಶೈಲಿಯಲ್ಲಿ ಮಾತನಾಡಿವೆ....



ಶಿಥಿಲಗೊಂಡ ಕಾವಲು ಗೋಪುರ.

ವಿಜಾಪುರಜಿಲ್ಲೆಯ ಬಿಸಿಲಿನ ತೀವ್ರತೆಯನ್ನು ಪಡೆದ ಬಗ್ಗಡ ಕನ್ನಡ ಮಾತಾಡುತ್ತ, ಆವರಿವರನ್ನು ನಗಿಸುತ್ತ ತಿರುಗುತ್ತಿದ್ದ ಲಂಬಾಣಿ ಹುಡುಗ ಚವಾಣ್‌ನನ್ನು ಅವನ ಗೆಳೆಯರು ಬೆಂಗಳೂರಲ್ಲಿ ಮೊದಲ ಬಾರಿಗೆ ಕಂಡದ್ದು ಒಂದುವರೆ ವರ್ಷದ ಹಿಂದೆ ಪತ್ರಿಕೆಯೊಂದರ ಕಛೇರಿಯಲ್ಲಿರಬೇಕು. ಹಾಗೆಯೇ ಪದಪದಕ್ಕೂ ವಿಶೇಷ ಒತ್ತುಕೊಟ್ಟು ಕೈ ಬಾಯಿ ಸನ್ನೆ ಮಾಡುತ್ತ, ಕಣ್ಣುಗಳನ್ನು ಕಿರಿದು ಮಾಡಿಕೊಂಡು ಹಾವಾಡಿಗ ಬುಟ್ಟಿಯಲ್ಲಿನ ಒಂದೊಂದೇ ರಹಸ್ಯ ಹೊರತೆಗೆದು ಬಿಡುವ ಶೈಲಿಯಲ್ಲಿ ಸುದ್ದಿ ಹೇಳುವ ಆತನ ಶೈಲಿಗೆ ಬೆರಗುಗೊಂಡಿರಬೇಕು.

ರಮೇಶ ಹೂನು ಚವಾಣ್ ಇವನ ಪೂರ್ತಿ ಹೆಸರು. ಇವ ಹುಟ್ಟಿ ಬೆಳೆದದ್ದು ಬಿಜಾಪುರಜಿಲ್ಲೆಯ .ಅತರ್‌ಗಾ' ತಾಂಡಾದಲ್ಲಿ. ಆಲದ ಬಿಳಲುಗಳಂತೆ ಹಬ್ಬಿರುವ ಆತನ ಸಂಬಂಧಿಗಳ, ಕಡುಗೋಪಿ ತಾತನ, ಕನ್ನಡ ಬರದ ತಾಯಿಯ;ಪ್ರತಿಊಟಕ್ಕೂ ಖಂಡುಗ ಬೆವರುಸುರಿಸುವ, ಮಹಾರಾಷ್ಟ್ರ ಮುಂತಾದ ಕಡೆ ಕೂಲಿಗಾಗಿ ಅಲೆಯುವ ಬಂಧುಗಳ ಬದುಕನ್ನು ಕುರಿತು ಆತನ ಬಾಯಿಂದಲೇ ಕೇಳಬೇಕು ಇಂಡಿ, ವಿಜಾಪುರ, ಹುಬ್ಬಳ್ಳಿಗಳಲ್ಲಿ ಅವನು ಅಕ್ಷರ ಕಲಿಯಲು ಪಟ್ಟಪಾಡು ಯಾವುದೇ ಒಳ್ಳೆ ಕೃತಿಗಿಂತಲೂ ಅಥೆಂಟಿಕ್ ಅನಿಸುವಂತಿದೆ.

ಚಿಕ್ಕವನಿದ್ದಾಗ ಉಸುಕಿನ ಮೇಲೆ, ಚಿಕ್ಕಚಿಕ್ಕ ತುಂಡುಕಾಗದದ ಮೇಲೆ ಪೆನ್ಸಿಲಿನಿಂದ ಚಿತ್ರ ಕೆತ್ತುತ್ತಿದ್ದ ಚವಾಣ್ ಡಿ.ಎಂ.ಸಿ. ಕಲಿತದ್ದು ಧಾರವಾಡದಲ್ಲಿ. ಪಳಗಿದ್ದು .ಬಾಳಿಕಾಯಿ ಮಾಸ್ತರರ ಬಳಿ' ಆಮೇಲೆ ಧಾರವಾಡ ಬಿಟ್ಟು ಬೆಂಗಳೂರಿನ ಒಂದೆರಡು ಪತ್ರಿಕೆಯಲ್ಲಿ ಈತ ಕೆಲಸ ಮಾಡಿದ್ದು; ಕಳೆದವರ್ಷ ದಸರಾ ಉತ್ಸವದಲ್ಲಿ ತನ್ನ ಪೆಯಿಂಟಿಂಗ್‌ಗಾಗಿ ಬಹುಮಾನ ಪಡೆದದ್ದು; ಕಳೆದ ತಿಂಗಳು ಕಲಾಕ್ಷೇತ್ರದಲ್ಲಿ ತನ್ನ ಕೆಲವು .ಲ್ಯಾಂಡ್‌ಸ್ಕೇಪ್' ಗಳನ್ನು ಸಿಜಿಕೆ ಅವರ 'ರಂಗ ನಿರಂತರ' ಸಹಾಯದಿಂದ ಎಕ್ಸಿಬಿಷನ್ ಮಾಡಿಸಿದ್ದು.

ಈ ಎಕ್ಸಿಬಿಷನ್‌ಗಾಗಿ ಕಲಾಕ್ಷೇತ್ರದ ಅಂಗಳದಲ್ಲಿ ಯಾವುದೋ ಅಸಂಗತ ನಾಟಕಕ್ಕೆ ಕಾಸ್ಟ್ಯೂಮ್ ಧರಿಸಿದವನಂತೆ ಟೈಟುಪ್ಯಾಂಟು, ದೊಗಳೆ ಅಂಗಿ ಬಗಲಿಗೊಂದು ಬ್ಯಾಗು ನೇತಾಡಿಸಿಕೊಂಡು ತರಾತುರಿಯಲ್ಲಿ ಅರ್ಧ ಓಡುತ್ತಾ ಅರ್ಧ ಜಿಗಿಯುತ್ತಾ ಓಡಾಡುತ್ತಿದ್ದ ಇವನನ್ನು ಕಂಡವರು ದಂಗಾಗಿರಬೇಕು. ಪ್ಯಾಂಟ್ ಕಳಚಿ ಕೈಗೊಂದು ಕ್ಯಾಟರ್ ಬಿಲ್ ಕೊಟ್ಟರಂತೂ ಥೇಟ್ ಹಕ್ಕಿಪಿಕ್ಕಿ; ಮರದ ಕೊಂಬೆ ಕೊಂಬೆಯ ಒಳಗೆ ಹಕ್ಕಿ ಭೇದಿಸುವ ಕಣ್ಣಿನ ಹಕ್ಕಿ ಪಿಕ್ಕಿ!

ಇವನ ಕೆಲವು ಲ್ಯಾಂಡ್‌ಸ್ಕೇಪ್‌ಗಳು ನಿಜಕ್ಕೂ ಮಿಂಚುನೀಡುತ್ತವೆ. ಚಿತ್ರವೊಂದನ್ನು ಬಿಡಿಸಲು ಅವನು ಆಯ್ದುಕೊಳ್ಳುವ ವಿಶಿಷ್ಟಶೈಲಿಯಸ್ಥಳ.

ಕೆಲವೆಡೆ ಅವನು ಬಳಸುವ ಬಣ್ಣ ಬೆರಗುಗೊಳಿಸುವಷ್ಟು ಚೆಂದ ಇವೆ. ಇವನ ಕುಂಚದಿಂದ ವಿಜಾಪುರ ಹಂಪೆಯ ಪತನಗೊಂಡ ಅವಶೇಷಗಳು. ಬಾದಾಮಿ ಪಟ್ಟದಕಲ್ಲಿನ ಮೂಕದೇವಾಲಯ, ಬಸದಿಗಳು ಶಬ್ದ ಪಡೆದುಕೊಂಡು ತಮ್ಮದೇ ಶೈಲಿಯಲ್ಲಿ ಮಾತನಾಡಿವೆ.

ಕಡುಬಡತನದಿಂದ, ಗುಡ್ಡಗಾಡು ಜನಾಂಗದಿಂದ ಕುಂಚಹಿಡಿದು ರಂಗಪ್ರವೇಶ ಮಾಡಿದ ಚವಾಣ್ ಆತ ಬೆಳೆದುಬಂದ ಪರಿಸರದ ಚಿತ್ರಗಳನ್ನು ಬರೆದರೆ ಅವು ನಿಜಕ್ಕೂ ಒಂದು ಜನಾಂಗದ ಬದುಕಿನ ದಾಖಲೆಯಾಗಬಲ್ಲವು. ಅಷ್ಟೇ ಅಲ್ಲ ಇಂದೇನಾದರೂ ಕಲೆ ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಗುಣಾತ್ಮಕ ಬದಲಾವಣೆ ಸಾಧ್ಯವಾಗುವುದು ಸಹ ನೋವಿನ ಬದುಕಿನ ನೂರೆಂಟು ಮುಖಗಳನ್ನು ಕಂಡ ಇಂಥ ಹಿನ್ನೆಲೆಯ ಕಲಾವಿದರಿಂದಲೇ.

ಇದೀಗ ಶೇಷಾದ್ರಿಪುರಂ 'ಕೆನ್‌ಸ್ಕೂಲ್‌ಆಫ್ ಆರ್ಟ್ಸ್'ನಲ್ಲಿ ಒಂದುವರ್ಷದ ಡಿಪ್ಲಮೊ ಮುಗಿಸಿ ಹಳ್ಳಿಗಾಡಲ್ಲಿ ಮಕ್ಕಳಿಗೆ ಚೆಂದದ ಗೆರೆ ಎಳೆಯಲು ಕಲಿಸ ಹೊರಟ (ಸಾಲಿಮಾಸ್ತರ) ಚವಾಣ್ ಮುಂದೆ ತನ್ನ ಚಿತ್ರಗಳಲ್ಲಿ ಇಂಥ ವಿಶಿಷ್ಟತೆ ಸೆರೆ ಹಿಡಿಯಲಿ.



ಯೆಪ್ಪಾ ನಾ ಬಿಡಿಸಿದ ಗುಡಿಸಲಾ ನೋಡ್ರಿ......!

ಕಾಣೆಯಾದ ಕೋಳಿ

ಹಗಲಿಗೂ ಮುಂಚೆ
ಬೆಳಕಿನುಸಿರನು ಪಡೆದು
ಬಗಿದು ಜಡಮುಗಿಲಿನೊಡಲ
ಹಾಡಾಗಿ ರೇಶಿಮೆಯ ಚೆಂಡಾಗಿ
ಬೀದಿ ತುಂಬೆಲ್ಲ
ಗಂಡಸುತನದ ಮಸ್ತಿಯಲಿ ಮೆರೆದ ಕೋಳಿ
ನೋಡುವವರ ಕಣ್ಣೊಳಗಿಣಿದು
ಚಿಮ್ಮುತ್ತಿತ್ತು ಚಿಗುರಿನ ಹೋಳಿ.

ಹಗಲು ಇರುಳನು ಮರೆತು
ಇದರ ಸೊಬಗಿಗೆ ಸೋತ ಜನ
ಅರೆ ಎಚ್ಚರದ ಪರಿಯಲ್ಲಿ ಕಟ್ಟಿದರು
ತೆರೆದ ಆಸೆಯಂಕಣದ ಕನಸು :
ಮಳೆ ಬಿಸಿಲು ಬೆದೆ
ಹುವಳ ಗುಟುಕಿಸಿದ
ನವಿಲಿನ ಹಾಗೆ ಬಣ್ಣದ ಕಣ್ಣುಗಳ
ಗರಿಮೂಡಿ ನಲಿಯುವುದೆ ಈ ಕೋಳಿ ಒಂದು ದಿನ
ಮಸ್ತಿಮಸ್ತಿಯು ಕರಗಿ
ಕಾಲಾದ ಕೊಕ್ಕಾದ ಗರಿಯಾದ
ಈ ಕೋಳಿ ಕಾಡುವುದೆ ಬಲಮೂಡಿ ಒಂದು ದಿನ.



ಕನಸು ಬಿಟ್ಟೆಚ್ಚರದ ವಾಸ್ತವದಿ
ಕಾಣೆಯಾಗಿತ್ತು ಕಹಳೆ ಕತ್ತಿನಕೋಳಿ
ಬೆಳ್ಳಿತಟ್ಟೆಯ ಉಳ್ಳವರ
ಹೊಟ್ಟೆಯೊಳಡಗಿತ್ತು ಅದರ ಸದ್ದು ಸವೆದು
ಈಲಿ ಗುಂಡಿಗೆಯಾಗಿ
ಮೂಳೆ ಮಾಂಸದ ರಸವಾದ
ಕೋಳಿಯ ಪುಕ್ಕ, ಕಾಲಿನ ಕವಚ ಕೊಕ್ಕಿನ ಉಕ್ಕು
ಆಗೀಗ ಬೀಸುವ ಗಾಳಿಗೆಲ್ಲೆಲ್ಲೂ ತೂರಿತು;
ಕಂಗಾಲಾದ ಕಂಗಳಿಗೆ
ತ್ರಿವರ್ಣ ಧ್ವಜವಾಗಿ ತೋರಿ
ದೇಶಭಕ್ತಿಯ ನುಡಿಸಿತು.

ಜೀರ್ಣವಾಗದ ಹುಂಜ ಮಚ್ಚರ
ಉಂಡ ಭಂಡರ ಹೊಟ್ಟೆಯೊಡೆಯಿತು
ಕಾಲಿನಡಿಯಲಿ ಮೋಡದೊಡಲಲಿ
ಸಾವಕೋಳಿಯ ಕೆಂಪು ಕುಡಿಯಲಿ
ಸತ್ತ ಹಕ್ಕಿಯ ಕೂಗು ಕರಗಿತು
ಗಾಳಿಯಾಯಿತು ಗೂಳಿ ಚೇತನ
ಆಲಮೂಲವ ಅಲುಗಿಸಿ.

—ಗಂಗಾಧರ ಮೂರ್ತಿ

R. N. 29681/76 PANCHAMA Fortnightly April 88, Special issue. Reg. No B.G.W. 16

ಕರ್ನಾಟಕ ಸರ್ಕಾರ

ಜಾತಿ ಪ್ರಮಾಣ ಪತ್ರಗಳ ವಿತ[illegible]
ವಿಧಾನದಲ್ಲಿ ಸರಳೀಕರಣ

ದೇವನೂರ ಮಹಾದೇವ
53, ಎ ಬಿ ಬ್ಲಾಕ್
ಕುವೆಂಪುನಗರ
ಮೈಸೂರು -23.

ಪದೇ ಪದೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನತೆಗೆ ಇಲ್ಲಿಯವರೆಗೆ ಕೊಡಲಾಗುತ್ತಿರುವ ಜಾತಿ ಪ್ರಮಾಣ ಪತ್ರಗಳಿಂದ ತಹಶೀಲ್ದಾರರುಗಳಿಗೆ ಹೆಚ್ಚಿನ ಕೆಲಸ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನತೆಗೆ ಕಾಲ, ಹಣ ಹಾಗೂ ಶ್ರಮಗಳ ಹರಣವಾಗುತ್ತಿತ್ತು.

ಈ ಪರಿಸ್ಥಿತಿಯನ್ನು ತಪ್ಪಿಸಿ, ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನತೆಗೆ ಸುಲಭವಾಗಿ ಜಾತಿ ಪ್ರಮಾಣ ಪತ್ರ ದೊರಕುವಂತೆ ಮಾಡಲು ರಾಜ್ಯ ಸರ್ಕಾರ 23ನೇ ಮಾರ್ಚ್ ಮತ್ತು 12ನೇ ಆಗಸ್ಟ್, 1987 ರಂದು ಆದೇಶಗಳನ್ನು ಹೊರಡಿಸಿದೆ. ಈ ಆದೇಶಗಳ ಪ್ರಕಾರ ಒಂದು-ಸಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನತೆಗೆ ಕೊಟ್ಟ ಜಾತಿ ಪ್ರಮಾಣ ಪತ್ರಗಳು (ಕಾನೂನಿನ ಪ್ರಕಾರ ರದ್ದು ಪಡಿಸದಿದ್ದರೆ ಮಾತ್ರ) ಸರ್ವಕಾಲಕ್ಕೂ ಸಿಂಧುವಾಗಿರುತ್ತದೆ. ಮೂಲ "ಜಾತಿ ಪ್ರಮಾಣ ಪತ್ರದ" ದೃಡೀಕೃತ ಪ್ರತಿಯನ್ನು ಎಲ್ಲಾ ಅಧಿಕಾರಿಗಳು ಕಡ್ಡಾಯವಾಗಿ ಒಪ್ಪಿಕೊಳ್ಳಲೇ ಬೇಕು.

ಮೇಲ್ಕಂಡ ಸರಳೀಕರಣ ವಿಧಾನದಿಂದ ಇನ್ನು ಮುಂದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನತೆ ತಮ್ಮ ಜಾತಿ ಪತ್ರಗಳನ್ನು ಪಡೆಯಲು ಪದೇ ಪದೇ ತಹಶೀಲ್ದಾರರ ಕಛೇರಿಗೆ ಹೋಗಬೇಕಾದ್ದಿಲ್ಲ. ಒಮ್ಮೆ ಪಡೆದ ಪ್ರಮಾಣ ಪತ್ರದ ದೃಡೀಕರಿಸಿದ ಪ್ರತಿಗಳನ್ನು ಎಲ್ಲಾ ಉದ್ದೇಶಗಳಿಗೂ ಮತ್ತು ಮತ್ತು ಎಲ್ಲಾ ಕಾಲಕ್ಕೂ ಉಪಯೋಗಿಸಬಹುದಾಗಿದೆ.

ವಿವರಣೆಗಳೇನಾದರೂ ಬೇಕಾಗಿದ್ದಲ್ಲಿ ಅವುಗಳನ್ನು ಸಂಬಂಧಪಟ್ಟ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳಿಂದ ಪಡೆಯಬಹುದಾಗಿದೆ.

ನಿರ್ದೇಶಕರು,

ಸಮಾಜ ಕಲ್ಯಾಣ ಇಲಾಖೆ.

"ಕರ್ನಾಟಕ ವಾರ್ತೆ"

ಸಂಪಾದಕ: ಕೆ. ರಾಮಯ್ಯ, ಪ್ರಕಾಶಕ: ರಂಗಸ್ವಾಮಿ ಬೆಲ್ಲದಮಡು, 2ಬಿ ಮಹದೇಶ್ವರ ನಿಲಯ, 2ನೇ ಕ್ರಾಸ್, 2ನೇ ಮೈನ್, ಎ. ಕೆ. ಕಾಲೋನಿ, ಹೊಸಳ್ಳಿ, ಬೆಂ. 40
ಮುದ್ರಣ: ಸಂದೀಪ್ ಪ್ರಿಂಟರ್ಸ್, 718 ಮಹಡಿ, 6ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು-40.